# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ
ಸೋಮವಾರ, ಅಕ್ಟೋಬರ್ 28, 2024

ಸಂಪುಟ : 51 ಸಂಚಿಕೆ : 165 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com







## ನಿಲ್ಲಿ, ಯೋಚಿಸಿ, ಕ್ರಮ ತೆಗೆದುಕೊಳ್ಳಿ

### ಸೈಬರ್ ವಂಚನೆಗೆ ಬಲಿಯಾಗದಂತೆ ಎಚ್ಚರಿಕೆ ವಹಿಸಲು ಮೋದಿ ಕರೆ

ನವದೆಹಲಿ, ಅ. 27 - ಡಿಜಿಟಲ್ ಬಂಧನ ರೀತಿಯ ಸೈಬರ್ ವಂಚನೆಗಳ ಬಗ್ಗೆ ಎಚ್ಚರಿಕೆ ನೀಡಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ, ಇಂತಹ ಹಗರಣ ಎದುರಾದಾಗ ಜನರು ಯೋಚಿಸಿ ನಿರ್ಧಾರ ತೆಗೆದುಕೊಳ್ಳಬೇಕು ಎಂದಿದ್ದಾರೆ.

ಮಾಸಿಕ ಮನ್ ಕಿ ಬಾತ್ ರೇಡಿಯೋ ಕಾರ್ಯಕ್ರಮದಲ್ಲಿ ಮಾತನಾಡಿರುವ ಪ್ರಧಾನಿ, ಜನರು ಅವಸರಕ್ಕೆ ಸಿಲುಕದೆ ನಿಧಾನವಾಗಿ ಯೋಚಿಸಿ ಕ್ರಮ ತೆಗೆದುಕೊಳ್ಳುವುದರಿಂದ ಡಿಜಿಟಲ್ ರಕ್ಷಣೆಯತ್ತ ಹೆಜ್ಜೆ ಇಡಲು ಸಾಧ್ಯ ಎಂದಿದ್ದಾರೆ.

ಸೈಬರ್ ವಂಚನೆ ಎದುರಿಸುವ ಬಗ್ಗೆ ತನಿಖಾ ಸಂಸ್ಥೆಗಳು ರಾಜ್ಯಗಳ ಜೊತೆಗೂಡಿ ಕಾರ್ಯನಿರ್ವಹಿಸುತ್ತಿವೆ. ಆದರೆ ಇಂತಹ ವಂಚನೆಗಳಿಂದ ರಕ್ಷಿಸಿಕೊಳ್ಳಲು ಅರಿವು ಹೊಂದುವ ಅಗತ್ಯವಿದೆ ಎಂದು ಪ್ರಧಾನಿ ತಿಳಿಸಿದರು.



ಸೈಬರ್ ವಂಚಕರು ವಿವಿಧ ಸಂಸ್ಥೆಗಳ ಅಧಿಕಾರಿಗಳ ಸೋಗಿನಲ್ಲಿ ಜನರಿಗೆ ವಿಡಿಯೋ ಕರೆ ಮಾಡಿ ಡಿಜಿಟಲ್ ಬಂಧನಕ್ಕೆ ಒಳಪಡಿಸುತ್ತಿದ್ದಾರೆ. ಇಂತಹ ವಂಚಕರ ಬಗ್ಗೆ ತಿಳುವಳಿಕೆ ಹೊಂದುವುದು ಬಹಳ ಮುಖ್ಯ ಎಂದು ಮೋದಿ ಹೇಳಿದರು.

ಈ ವಂಚಕರು ಮೊದಲು ಜನರ ವೈಯಕ್ತಿಕ ಮಾಹಿತಿಯನ್ನು ಸಂಗ್ರಹಿಸುತ್ತಾರೆ. ನಂತರ ಎರಡನೇ ಹಂತದಲ್ಲಿ ಭಯದ ವಾತಾವರಣ ಮೂಡಿಸುತ್ತಾರೆ. ಕಳೆದ ತಿಂಗಳು ನೀವು ಗೋವಾಗೆ ತೆರಳಿದ್ದೀರಲ್ಲವೇ? ನಿಮ್ಮ ಮಗಳು ದೆಹಲಿಯಲ್ಲಿ ಓದುತ್ತಿದ್ದಾಳೆ ಅಲ್ಲವೇ? ಎಂಬ ರೀತಿಯ ಪ್ರಶ್ನೆಗಳನ್ನು ಮುಂದಿಡುತ್ತಾರೆ. ನಿಮಗೆ ಅಚ್ಚರಿಯಾಗುವ ರೀತಿಯಲ್ಲಿ ಅವರು ನಿಮ್ಮ ವೈಯಕ್ತಿಕ ಮಾಹಿತಿ ಸಂಗ್ರಹಿಸಿರುತ್ತಾರೆ.

ನಂತರ ಅಧಿಕಾರಿಗಳ ವೇಷ ಧರಿಸಿ ಸರ್ಕಾರಿ ಕಚೇರಿಯ ವಾತಾವರಣ ರೂಪಿಸಿ ಹೆದರಿಸುತ್ತಾರೆ. ಇಂತಹ ಸಂದರ್ಭದಲ್ಲಿ ಸ್ಪಷ್ಟವಾಗಿ ಯೋಚಿಸಲೂ ಸಹ ಅವಕಾಶ ನೀಡುವುದಿಲ್ಲ ಹೇಳಿದರು.

ಮೂರನೇ ಹಂತದಲ್ಲಿ ವಂಚಕರು ನಿಮಗೆ ಸಮಯ ಇಲ್ಲ ಎಂಬ ಒತ್ತಡ ಹೇರುತ್ತಾರೆ. ಈಗಲೇ ನಿರ್ಧರಿಸಿ ಇಲ್ಲವಾದರೆ ನಿಮ್ಮನ್ನು ಬಂಧಿಸಲಾಗುತ್ತದೆ ಎಂದು ಹೆದರಿಸುತ್ತಾರೆ. ಇಂತಹ ಸಂದರ್ಭದಲ್ಲಿ ಹೆದರುವ ಎಲ್ಲ ವರ್ಗದ ಹಾಗೂ ಎಲ್ಲಾ ವಯೋಮಾನದ ಜನರು ಡಿಜಿಟಲ್ ಅರೆಸ್ಟ್ ವಂಚನೆಗೆ (3ನೇ ಪುಟಕ್ಕೆ)

## ಜಿಲ್ಲಾ ಬಿಜೆಪಿಯಲ್ಲಿನ ಗುಂಪುಗಾರಿಕೆ ವಿರುದ್ಧ ನಿಷ್ಠಾವಂತರ ಆಕ್ರೋಶ

ದಾವಣಗೆರೆ, ಅ.27- ಜಿಲ್ಲೆಯ ಬಿಜೆಪಿಯಲ್ಲಿ ನಡೆಯುತ್ತಿರುವ ಗುಂಪುಗಾರಿಕೆ ಹಿನ್ನೆಲೆಯಲ್ಲಿ ಆ ಪಕ್ಷದ ನಿಷ್ಠಾವಂತ ಕಾರ್ಯಕರ್ತರು ಮತ್ತು ಅಭಿಮಾನಿಗಳು ನಗರದ ಖಾಸಗಿ ಹೋಟೆಲ್ಲೊಂದರ ಸಭಾಂಗಣದಲ್ಲಿ ಇಂದು ಸಭೆ ನಡೆಸಿ, ಪಕ್ಷದ ಕೆಲ ಮುಖಂಡರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರಲ್ಲದೇ, ಪಕ್ಷದ ಸಂಘಟನೆಗೆ ನಿರ್ಧಾರ ಕೈಗೊಂಡರು.

ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಎಲ್ಲರೂ ಗುಂಪುಗಾರಿಕೆಯನ್ನು ಖಂಡಿಸಿದರು. ಜಿಲ್ಲೆಯಲ್ಲಿ ಗುಂಪು ಗಾರಿಕೆ ನಡೆಸುತ್ತಿರುವ ಪ್ರಮುಖರಲ್ಲಿ ಎಲ್ಲರೂ 10 ರಿಂದ 25 ವರ್ಷ ಅಧಿಕಾರ ಅನುಭವಿಸಿದವರೇ ಆಗಿದ್ದಾರೆ.

ವೈಯಕ್ತಿಕ ಜೀವನ ಮತ್ತು ದುಡಿಮೆಯನ್ನು ಬದಿಗಿರಿಸಿ ಪಕ್ಷದ ಏಳಿಗೆಗಾಗಿ ಇವರನ್ನು ಬೆಂಬಲಿಸಿ ಇವರು ಅಧಿಕಾರಕ್ಕೇರಲು ಕಾರಣರಾದ ಕಾರ್ಯಕರ್ತರ ಬಗ್ಗೆ ಗಮನಹರಿಸದೆ ಸ್ವಾರ್ಥ ಕ್ಕೋಸ್ಕರ ಪಕ್ಷದಲ್ಲಿ ಗುಂಪುಗಾರಿಕೆ ನಡೆಸುತ್ತಿದ್ದಾರೆ.

> ಭಿನ್ನಮತಕ್ಕೆ ಕಾರಣವಾಗುತ್ತಿರುವ ಸ್ವಾರ್ಥ ಮುಖಂಡರ ವಿರುದ್ಧ ಕ್ರಮ ಕೈಗೊಳ್ಳುವಂತೆ ರಾಜ್ಯ, ರಾಷ್ಟ್ರ ನಾಯಕರಿಗೆ ಒತ್ತಾಯಿಸಲು ತೀರ್ಮಾನ
>
> ರಾಜ್ಯದ ಕಾಂಗ್ರೆಸ್ ಸರ್ಕಾರದ ಬೆಲೆ ಏರಿಕೆ ವಿರುದ್ಧ ಪ್ರತಿಭಟಿಸಲು ನಿರ್ಧಾರ

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಮೇಲಿನ ಅಭಿಮಾನದಿಂದ ಮತದಾರರು ಬಿಜೆಪಿ ಪರವಾಗಿದ್ದಾರೆ. ಇದಕ್ಕೆ ಉದಾಹರಣೆ ಎಂಬಂತೆ ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ದಾವಣಗೆರೆ ಕ್ಷೇತ್ರದಲ್ಲಿ ಬಿಜೆಪಿ ರಾಜ್ಯದಲ್ಲಿಯೇ ಅತೀ ಕಡಿಮೆ ಅಂತರದಲ್ಲಿ ಸೋತರೂ ಹೆಚ್ಚಿನ ಮತಗಳನ್ನು ಗಳಿಸಿದ್ದು ಮತ್ತು ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದಲ್ಲಿ 25,000 ಮತಗಳ ಮುನ್ನಡೆ ಪಡೆದಿದ್ದು ಎಂದು ಹೇಳಬಹುದು.

ಆದರೆ, ಗುಂಪುಗಾರಿಕೆ ನಡೆಸುತ್ತಿರುವವರು ಮತದಾರರಿಗೆ (2ನೇ ಪುಟಕ್ಕೆ)

## ಇರಾನ್‌ನ ಸೈನಿಕ ನೆಲೆ, ಕ್ಷಿಪಣಿ ಯೋಜನೆ ತಾಣಗಳಿಗೆ ಹಾನಿ

ದುಬೈ, ಅ. 27 – ಇರಾನ್ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ಗುಪ್ತ ಸೈನಿಕ ನೆಲೆ ಹಾಗೂ ಬ್ಯಾಲಿಸ್ಟಿಕ್ ಕ್ಷಿಪಣಿ ಯೋಜನೆಯ ತಾಣಕ್ಕೆ ಹಾನಿಯಾಗಿದೆ ಎಂದು ಉಪಗ್ರಹ ಚಿತ್ರಗಳಿಂದ ದೊರೆತ ಮಾಹಿತಿ ತಿಳಿಸಿದೆ.

ಇರಾನ್ ರಾಜಧಾನಿ ತೆಹರಾನ್ ಬಳಿ ಇರುವ ಪರ್ಚಿನ್ ಸೈನಿಕ ನೆಲೆಗೆ ಹಾನಿಯಾಗಿದೆ. ಹತ್ತಿರದ ಖೊಜಿರ್ ಸೈನಿಕ ನೆಲೆಗೂ ಹಾನಿಯಾಗಿರುವುದು ಕಂಡು ಬಂದಿದೆ. ಇದು ಕ್ಷಿಪಣಿಗಳ ಉತ್ಪಾದನಾ ತಾಣ ಎಂದು ಹೇಳಲಾಗುತ್ತಿದೆ.

> ಇಸ್ರೇಲ್ ದಾಳಿಯ ನಂತರ ಉಪಗ್ರಹ ಚಿತ್ರಗಳಿಂದ ಮಾಹಿತಿ

ಖೊಜಿರ್ ಇಲ್ಲವೇ ಪರ್ಚಿನ್ ಸೈನಿಕ ತಾಣಗಳಿಗೆ ಹಾನಿಯಾಗಿರುವುದನ್ನು ಇರಾನ್ ಸೈನ್ಯ ಒಪ್ಪಿಕೊಂಡಿಲ್ಲ. ಆದರೆ, ಇಸ್ರೇಲ್ ದಾಳಿಯಲ್ಲಿ ನಾಲ್ವರು ಸಾನಿಕರು ಸಾವನ್ನಪ್ಪಿದ್ದಾರೆ ಎಂದು ತಿಳಿಸಿದೆ.

ಇಸ್ರೇಲ್ ತನ್ನ ದಾಳಿಯಲ್ಲಿ ಎಷ್ಟು ತಾಣಗಳನ್ನು ಗುರಿಯಾಗಿಟ್ಟುಕೊಂಡಿತ್ತು ಎಂಬುದು ಸ್ಪಷ್ಟವಾಗಿಲ್ಲ. ಆದರೆ, ಇರಾನ್ ಸೈನ್ಯ ಬಿಡುಗಡೆ ಮಾಡಿರುವ ಚಿತ್ರಗಳಲ್ಲಿ ಯಾವುದೇ ಹಾನಿಯ ದೃಶ್ಯಗಳಿಲ್ಲ.

ಇರಾನ್‌ನ ಟಾಂಗೆ ಬಿಜರ್ ನೈಸರ್ಗಿಕ ಅನಿಲ ಉತ್ಪಾದನಾ ತಾಣದಲ್ಲೂ ನೆಲ ಸುಟ್ಟು ಕರಕಲಾಗಿರುವುದು ಉಪಗ್ರಹ ಚಿತ್ರಗಳಿಂದ ಕಂಡು ಬಂದಿದೆ.

ತೆಹರಾನ್‌ಗೆ 40 ಕಿ.ಮೀ. ದೂರದಲ್ಲಿರುವ ಪರ್ಚಿನ್ ಎಂಬಲ್ಲಿನ ಪ್ಲಾನೆಟ್ ಲ್ಯಾಬ್ಸ್‌ನಲ್ಲಿ ಸಾಕಷ್ಟು ಹಾನಿಯಾಗಿದೆ. ಒಂದು ಕಟ್ಟಡ ಸಂಪೂರ್ಣ ನಾಶವಾಗಿದ್ದರೆ, ಉಳಿದವು ಹಾನಿಗೀಡಾಗಿರುವುದು ಕಂಡು ಬಂದಿದೆ.

ತೆಹರಾನ್‌ನಿಂದ 20 ಕಿ.ಮೀ. ದೂರದಲ್ಲಿರುವ ಖೊಜಿರ್‌ನಲ್ಲಿ ಕನಿಷ್ಠ ಎರಡು ಕಟ್ಟಡಗಳಿಗೆ ಹಾನಿಯಾಗಿರುವುದು ಉಪಗ್ರಹ ಚಿತ್ರಗಳಿಂದ ಕಂಡು ಬಂದಿದೆ. ಇರಾನ್ ತನ್ನ ಕ್ಷಿಪಣಿ ಯೋಜನೆಗಳಿಗೆ ರಸಾಯನಿಕಗಳನ್ನು ಸಂಗ್ರಹಿಸಿಡುತ್ತಿದ್ದ ಗೋದಾಮು ಹಾಗೂ ಇತರೆ ಕಟ್ಟಡಗಳೂ (2ನೇ ಪುಟಕ್ಕೆ)

## ಸಮಾಜದ ಹಿತಕ್ಕೆ ಪಕ್ಷಾತೀತವಾಗಿ ಒಗ್ಗೂಡಿ

### ಶಿವಸೈನ್ಯ ಸಂಘದ ರಾಜ್ಯ ಘಟಕದ ಪದಾಧಿಕಾರಿಗಳ ಪದಗ್ರಹಣದಲ್ಲಿ ಬಿ.ವಾಮದೇವಪ್ಪ



ದಾವಣಗೆರೆ, ಅ. 27- ಸಾಧು ಸದ್ಧರ್ಮ ಸಮಾಜವನ್ನು ಸದೃಢಗೊಳಿಸಲು ಮತ್ತು ತರಳ ಬಾಳು ಪರಂಪರೆಯನ್ನು ಉಳಿಸಲು ತರಳಬಾಳು ಶಿವಸೈನ್ಯ ಸಂಘದ ಮೂಲಕ ಯುವಪಡೆಯನ್ನು ರಚಿಸಲಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಹೇಳಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ತರಳಬಾಳು ಶಿವಸೈನ್ಯ ಸಂಘದ ರಾಜ್ಯ ಘಟಕದ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಸಾಧು ಸದ್ಧರ್ಮ ಸಮಾಜದಲ್ಲಿ ಒಡಕಿನ ಧ್ವನಿ ಕೇಳಿ ಬರುತ್ತಿದ್ದು, ಸಮಾಜದ ಪ್ರಶ್ನೆ ಬಂದಾಗ ವ್ಯಕ್ತಿಗಿಂತ ಸಮಾಜ ಮುಖ್ಯ ಎಂಬ ಮನೋಭಾವನೆ ಪ್ರತಿಯೊಬ್ಬರಲ್ಲೂ ಬರಬೇಕೆಂದು ಹೇಳಿದರು.

ಸಂಘದ ಯಾವುದೇ ಪದಾಧಿಕಾರಿಗಳು ಸಹ ರಾಜಕೀಯ ಪಕ್ಷಗಳಿಗೆ ದುಂಬಾಲು ಬೀಳದೇ ಪಕ್ಷಭೇದ ಮರೆತು ಸಮಾಜದ ಹಿತಕ್ಕಾಗಿ ಒಂದಾಗಬೇಕಾದ ಅನಿವಾರ್ಯತೆ ಇದೆ ಎಂದರು.

ಸರ್ವ ಸಮಾಜಗಳನ್ನು ಅತ್ಯಂತ ಪ್ರೀತಿ, ಗೌರವದಿಂದ ಕಾಣುವ ಸಮಾಜ ನಮ್ಮ ಸಾಧು ಸದ್ಧರ್ಮ ಸಮಾಜವಾಗಿದೆ. 900 ವರ್ಷಗಳ ಸುದೀರ್ಘ ಇತಿಹಾಸ ಹೊಂದಿರುವ ಈ ಸಮಾಜಕ್ಕೆ ಗಟ್ಟಿತನ, ಭದ್ರ ನೆಲೆ ಮತ್ತು ಸಂಸ್ಕಾರವನ್ನು ತಂದುಕೊಟ್ಟವರು ಲಿಂ. ಗುರುಶಾಂತ ದೇಶಿಕೇಂದ್ರ ಸ್ವಾಮೀಜಿಯವರು. ಅಸಂಘಟಿತವಾಗಿದ್ದ ಸಮಾಜವನ್ನು ಸಂಘಟಿಸುವಲ್ಲಿ ಅತ್ಯಂತ ಶ್ರಮವಹಿಸಿದ್ದರು ಎಂದು ಶ್ರೀಗಳ ಸಮಾಜದ ಬಗೆಗಿನ ಕಳಕಳಿಯನ್ನು ಕೊಂಡಾಡಿದರು.

ಗ್ರಾಮೀಣ ಭಾಗದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ, ಸಮಾಜದ ಭಕ್ತರನ್ನು ಸುಶಿಕ್ಷಿತರನ್ನಾಗಿ ಮಾಡುವುದಲ್ಲದೇ ಸಮಾಜವನ್ನು ಸುಭದ್ರಗೊಳಿಸಿದರು ಎಂದು ಹೇಳಿದರು. ತರಳಬಾಳು (2ನೇ ಪುಟಕ್ಕೆ)

## 'ಶಿವಸೈನ್ಯ' ರಾಜ್ಯ ಘಟಕದ ಅಧ್ಯಕ್ಷರಾಗಿ ಶಶಿಧರ, ಗೌರವಾಧ್ಯಕ್ಷರಾಗಿ ಶಿವಗಂಗಾ





ದಾವಣಗೆರೆ, ಅ. 27- ತರಳಬಾಳು ಶಿವಸೈನ್ಯ ಸಂಘದ ರಾಜ್ಯ ಘಟಕವನ್ನು ಅಸ್ತಿತ್ವಕ್ಕೆ ತರಲಾಗಿದ್ದು, ಅಧ್ಯಕ್ಷರಾಗಿ ಶಶಿಧರ ಹೆಮ್ಮನಬೇತೂರು, ಗೌರವಾಧ್ಯಕ್ಷರಾಗಿ ಶ್ರೀನಿವಾಸ್ ಶಿವಗಂಗಾ ಆಯ್ಕೆಯಾಗಿದ್ದಾರೆ.

ವಿಜಯನಗರ ಜಿಲ್ಲೆಯ ಪಿ. ಮಹಾಬಲೇಶ್ವರಗೌಡ್ರು, ಉಪಾಧ್ಯಕ್ಷರಾಗಿ ಕೆ.ಬಿ. ಮೋಹನ್ ಚಿತ್ರದುರ್ಗ, ವೀರಣ್ಣ ಮಾಕನೂರು ಹಾವೇರಿ, ಅಶ್ವಿನ್ ಕೆ.ಪಿ. ನಿಂಬೇಗೊಂದಿ ಶಿಕಾರಿಪುರ ಶಿವಮೊಗ್ಗ ಜಿಲ್ಲೆ, ಕೆ.ಜಿ. ಶ್ರೀಧರ ಪಾಟೀಲ್ ಭದ್ರಾವತಿ ಶಿವಮೊಗ್ಗ ಜಿಲ್ಲೆ, ಲಿಂಗರಾಜಯ್ಯ ಅಗಸನಕಟ್ಟೆ ದಾವಣಗೆರೆ, ಕಾರ್ಯದರ್ಶಿಯಾಗಿ ಬಸವನಗೌಡ್ರು ವಕೀಲರು ವಿಜಯನಗರ, ಸಹ ಕಾರ್ಯದರ್ಶಿಗಳಾಗಿ ಶಿವಮೂರ್ತಿ ಸಿ.ಎಸ್. ಕಡೂರು ಚಿಕ್ಕಮಗಳೂರು ಜಿಲ್ಲೆ, ಬಿ.ಜಿ. ಸಿದ್ಧನಗೌಡ ಭುಜಂಗನಗರ ಬಳ್ಳಾರಿ ಜಿಲ್ಲೆ, ರಾಕೇಶ್ ಕೆ. ಸಾರ್ಥಿ ಹೊಳಲ್ಕೆರೆ ಚಿತ್ರದುರ್ಗ ಜಿಲ್ಲೆ, ಖಜಾಂಚಿಯಾಗಿ ಶಿವಕುಮಾರ್ ಡಿ.ಎಂ. ಕೊರಟಿಕೆರೆ ದಾವಣಗೆರೆ ಜಿಲ್ಲೆ, ಸಂಘಟನಾ ಕಾರ್ಯದರ್ಶಿಗಳಾಗಿ ಕುಮಾರ್ ಮೆಳ್ಳೇಕಟ್ಟೆ ದಾವಣಗೆರೆ ಜಿಲ್ಲೆ , ಟಿ. ನಾಗರಾಜ್ ನಂದಿ ಚಿತ್ರದುರ್ಗ ಜಿಲ್ಲೆ, ಸತೀಶ್ ಸಿರಿಗೆರೆ ದಾವಣಗೆರೆ ಜಿಲ್ಲೆ, ಹಾಲೇಶ್ ಗೌಡ (ಡಿ.ಜಿ. ಕಲ್ಲಳ್ಳಿ) ಶಿವಮೊಗ್ಗ ಜಿಲ್ಲೆ, ಕಿರಣ್ ಕುಮಾರ್ ಗಡಿಗೋಳ (ಬ್ಯಾಡಗಿ) ಹಾವೇರಿ ಜಿಲ್ಲೆ, ಸಂಚಾಲಕರಾಗಿ ಸಂತೋಷ್ ಗಂಗನಕಟ್ಟೆ ದಾವಣಗೆರೆ ಜಿಲ್ಲೆ, ಶ್ರೀಧರ ಬಿ.ಎಂ. ಚನ್ನಗಿರಿ ದಾವಣಗೆರೆ ಜಿಲ್ಲೆ, ಕೋಗಳಿ ಕೊಟ್ರೇಶ್ ಕೊಟ್ಟೂರು ವಿಜಯನಗರ ಜಿಲ್ಲೆ, ಪಂಚಾಕ್ಷರಯ್ಯ ಸಿರಿಗೆರೆ ಚಿತ್ರದುರ್ಗ ಜಿಲ್ಲೆ, ಸುನೀಲ್ ದಾಸಪ್ಪ ದಾವಣಗೆರೆ ಜಿಲ್ಲೆ ಇವರು ಆಯ್ಕೆಯಾಗಿದ್ದಾರೆ.

ನಿರ್ದೇಶಕರಾಗಿ ಬಿ.ಜಿ. ಮಲ್ಲೇಶ್ ಹೊಟ್ಯಾಪುರ, ಬಸವರಾಜ್ ಎಂ. ಸಿರಿಗೆರೆ, ಸಂತೋಷ್ ಇ., ರಾಜೇಶ್ ಗೌಡ ಯಲವಟ್ಟಿ, ಅಮಿತ್ ಬಿ.ಜಿ., ಕಾನೂನು ಸಲಹೆಗಾರರಾಗಿ ಬಿ.ಎಸ್. ಲಿಂಗರಾಜ್ ಕೂಲಂಬಿ ವಕೀಲರು, ಸಲಹೆಗಾರರಾಗಿ ಶಿವರಾಜ್ ಕಬ್ಬೂರು, ಮಲ್ಲಿಕಾರ್ಜುನ್ ಮೆಳ್ಳೇಕಟ್ಟೆ ಇವರು ಆಯ್ಕೆಗೊಂಡಿದ್ದಾರೆ.

## ಮಕ್ಕಳಿಗೆ ಹಿರಿಯರ ಮೌಲ್ಯಗಳು ಅಗತ್ಯ

### ಹಿರಿಯ ನಾಗರಿಕರ ದಿನಾಚರಣೆ ಕಾರ್ಯಕ್ರಮದಲ್ಲಿ ಡಾ. ರವೀಂದ್ರನಾಥ್



ದಾವಣಗೆರೆ, ಅ.27 - ಇಂದಿನ ಮಕ್ಕಳು, ಹಿರಿಯರಿಂದ ಸಂಸ್ಕೃತಿ-ಸಂಸ್ಕಾರ ಹಾಗೂ ಮೌಲ್ಯಗಳನ್ನು ಕಲಿಯಬೇಕಿದೆ ಎಂದು ದೃಷ್ಟಿ ಕಣ್ಣಿನ ಆಸ್ಪತ್ರೆಯ ನೇತ್ರ ತಜ್ಞ ಡಾ. ರವೀಂದ್ರನಾಥ್ ಹೇಳಿದರು.

ವನಿತಾ ಸಮಾಜ, 'ಆಶ್ರಯ' ಹಿರಿಯ ವನಿತೆಯರ ಆನಂದಧಾಮ, ವಾತ್ಸಲ್ಯ ಹಿರಿಯ ವನಿತೆಯರ ವಸತಿ ನಿಲಯ ಇವರ ಸಂಯುಕ್ತಾಶ್ರಯದಲ್ಲಿ ನಗರದ ಆನಂದ ಧಾಮ ವೃದ್ಧಾಶ್ರಮದಲ್ಲಿ ಭಾನುವಾರ ಆಯೋಜಿಸಿದ್ದ ಹಿರಿಯ ನಾಗರಿಕರ ದಿನಾ ಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶೈಕ್ಷಣಿಕವಾಗಿ ಏಷ್ಟೇ ಪದವಿ ಗಳಿಸಿದರೂ ಹಿರಿಯರ ಅನುಭವದ ಮುಂದೆ ಅವು ಕೇವಲ ಪದವಿಗಳಾಗುತ್ತವೆ. ಹಾಗಾಗಿ ಹಿರಿಯರ ಮಾರ್ಗದರ್ಶನದಲ್ಲಿ ಯುವ ಪೀಳಿಗೆ ಹೆಜ್ಜೆ ಹಾಕುವ ಜತೆಗೆ ಅವರ ಆದರ್ಶ ಗುಣಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ವೃದ್ಧರನ್ನು ಗೌರವದಿಂದ ಕಾಣಬೇಕು. ಇಂದಿನ ಮಕ್ಕಳಲ್ಲಿ ಸಂಸ್ಕೃತಿ-ಸಂಸ್ಕಾರ ವೃದ್ಧಿಯಾಗಲು ಹಿರಿಯರ ಒಡನಾಟ ಬಹಳ ಮುಖ್ಯ ಎಂದ ಅವರು, ಈ ವೃದ್ಧಾಶ್ರಮದಲ್ಲಿನ ಹಿರಿಯರ ಕಣ್ಣಿನ ಆರೋಗ್ಯದ ಕಾಳಜಿ ಮಾಡಲು ಸದಾ ಮುಂದೆ ಇರುತ್ತೇನೆ ಎಂದು ತಿಳಿಸಿದರು.

ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕಿನ ಅಧ್ಯಕ್ಷ ಎನ್.ಎ. ಮುರುಗೇಶ್ ಮಾತನಾಡಿ, ಸಮಾಜದಲ್ಲಿ ಹಿರಿಯರ ಪ್ರೀತಿ-ವಾತ್ಸಲ್ಯ ಮರೆಯಾಗುತ್ತಿದೆ ಎಂದು ಶೋಚಿಸಿದರು.

ತಂದೆ-ತಾಯಿಯರು ಬದುಕಿದ್ದಾಗಲೇ ಅವರನ್ನು ಪ್ರೀತಿ ಹಾಗೂ ಕಾಳಜಿಯಿಂದ ಕಾಣಬೇಕು ಎಂದ ಅವರು, ಈ ಸಂಸ್ಥೆಯ ಬೆಳವಣಿಗೆಗೆ ಆರ್ಥಿಕ ನೆರವು ನೀಡುತ್ತೇನೆ ಎಂದು ಹೇಳಿದರು.

ಸುಧಾ ಪ್ರಸಾದ್ ಪ್ರಾಸ್ತಾವಿಕ ಮಾತನಾಡಿದರು. ಸುಷ್ಮಾ ಮೋಹನ್ ಸ್ವಾಗತಿಸಿದರು.

ಈ ವೇಳೆ ಸ್ತ್ರೀ ರೋಗ ತಜ್ಞೆ ಡಾ. ರಶ್ಮಿ ಸುಬೋಧ್ ಶೆಟ್ಟಿ, ವನಿತಾ ಸಮಾಜದ ಅಧ್ಯಕ್ಷೆ ಪದ್ಮ ಪ್ರಕಾಶ್, ಆಶ್ರಯ ಸಂಸ್ಥೆಯ ಅಧ್ಯಕ್ಷೆ ಸುನೀತ ವೀರನಾರಾಯಣ, ಕಾರ್ಯದರ್ಶಿ ಟಿ.ಎಸ್. ಶೈಲಜಾ, ವಾತ್ಸಲ್ಯ ಸಂಸ್ಥೆಯ ಅಧ್ಯಕ್ಷೆ ಮಮತಾ ಚಂದ್ರಶೇಖರ್, ಕಾರ್ಯದರ್ಶಿ ದೀಪಾ ಪ್ರಶಾಂತ್ ಶೆಟ್ಟಿ ಮತ್ತಿತರರಿದ್ದರು.

## ಬೆದರಿಕೆ, ಅವಸರಗಳೇ ಆನ್‌ಲೈನ್ ವಂಚಕರ ಅಸ್ತ್ರ

### ತಾಳ್ಮೆ ಹಾಗೂ ಜಾಗರೂಕತೆಯೇ ಸುರಕ್ಷತಾ ಮಾರ್ಗ ಎಂದ ಸಿ.ಇ.ಆರ್.ಟಿ. - ಇನ್

ನವದೆಹಲಿ, ಅ. 27 - ಆನ್‌ಲೈನ್ ವಂಚನೆ ನಡೆಸುವ ಹತ್ತಾರು ವಿಧಾನಗಳ ಕುರಿತ ಮಾಹಿತಿಯನ್ನು ಭಾರತೀಯ ಸೈಬರ್ ಸುರಕ್ಷತಾ ಸಂಸ್ಥೆಯಾದ ಸಿ.ಇ.ಆರ್.ಟಿ. - ಐನ್ ಬಿಡುಗಡೆ ಮಾಡಿದೆ. ಡಿಜಿಟಲ್ ಬಂಧನ ಸೇರಿದಂತೆ ಹಲವು ವಿಧಗಳಲ್ಲಿ ಜನರನ್ನು ವಂಚಿಸುವ ಕುರಿತ ಮಾಹಿತಿ ಇದರಲ್ಲಿದೆ.

ಸರ್ಕಾರಿ ಸಂಸ್ಥೆಗಳು ಅಧಿಕೃತ ಸಂಪರ್ಕಕ್ಕಾಗಿ ವಾಟ್ಸ್‌ಆಪ್ ಇಲ್ಲವೇ ಸ್ಕೈಪೆ ಇತ್ಯಾದಿಗಳನ್ನು ಬಳಸುವುದಿಲ್ಲ. ಹೀಗಾಗಿ ಸಾಮಾಜಿಕ ಜಾಲತಾಣಗಳ ಮೂಲಕ ಸರ್ಕಾರಿ ಅಧಿಕಾರಿಗಳ ಹೆಸರು ಹೇಳಿಕೊಂಡು ಸಂಪರ್ಕಿಸಿದರೆ ಅದು ವಂಚನೆಯೇ ಆಗಿರುತ್ತದೆ ಎಂದು ಸಿ.ಇ.ಆರ್.ಟಿ. - ಇನ್ ತಿಳಿಸಿದೆ.

ಈ ರೀತಿ ಏನಾದರೂ ಕರೆಗಳು ಬಂದಲ್ಲಿ, ನೇರವಾಗಿ ಸೂಕ್ತ ಸಂಸ್ಥೆಯನ್ನು ಸಂಪರ್ಕಿಸಿ ಗುರುತು ಖಚಿತಪಡಿಸಿಕೊಳ್ಳಬಹುದು ಎಂದು ಸೈಬರ್ ಸುರಕ್ಷತಾ ಸಂಸ್ಥೆ ತಿಳಿಸಿದೆ.

ನಿಮ್ಮ ಹೆಸರು ಯಾವುದೋ ಹಗರಣದಲ್ಲಿ ಸಿಲುಕಿದೆ ಎಂದು, ತನಿಖೆಗೆ ಸಹಕಾರ ಬೇಕಿದೆ ಎಂದು ಇಲ್ಲವೇ ಠೇವಣಿಯನ್ನು ವಾಪಸ್ ನೀಡುವ ಸೋಗಿನಲ್ಲಿ ವಂಚಕರು ವ್ಯಕ್ತಿಗಳನ್ನು ಸಂಪರ್ಕಿಸುತ್ತಾರೆ. ನೀವು ಡಿಜಿಟಲ್ ಬಂಧನದಲ್ಲಿ ಇದ್ದೀರಿ ಎಂದು ಹೇಳಿ ಅವರ ಹಣವನ್ನು ತಮ್ಮ ಖಾತೆಗಳಿಗೆ ಜಮಾ ಮಾಡಿಕೊಳ್ಳುತ್ತಿದ್ದಾರೆ.

ಈ ರೀತಿಯ ವಂಚಕರು ಕರೆ ಮಾಡಿದ್ದಲ್ಲಿ ಯಾವುದೇ ಕಾರಣಕ್ಕೂ ಹೆದರಬಾರದು ಹಾಗೂ



ಅವಸರ ತೋರಬಾರದು. ಜನರ ಹೆದರಿಕೆ ಇಲ್ಲವೇ ಅವಸರವನ್ನೇ ವಂಚಕರು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಸುರಕ್ಷತಾ ಸಂಸ್ಥೆ ಹೇಳಿದೆ.

ಈ ರೀತಿಯ ಕರೆಗಳು ಬಂದಾಗ ಒಂದು ನಿಮಿಷ ತಾಳ್ಮೆಯಿಂದ ಯೋಚಿಸಿ. ವೈಯಕ್ತಿಕ ಮಾಹಿತಿ ಇಲ್ಲವೇ ಸೂಕ್ಷ್ಮ ಮಾಹಿತಿ, ಇಲ್ಲವೇ ಹಣಕಾಸು ವಿವರಗಳನ್ನು ದೂರವಾಣಿ, ಇಲ್ಲವೇ ವಿಡಿಯೋ ಕರೆಗಳ ಮೂಲಕ ಹಂಚಿಕೊಳ್ಳಬೇಡಿ ಎಂದು ತಿಳಿಸಲಾಗಿದೆ.

ಯಾವುದೇ ಅಧಿಕೃತ ಸಂಸ್ಥೆ ಹಣವನ್ನು ತಕ್ಷಣವೇ ವರ್ಗಾವಣೆ ಮಾಡಬೇಕು ಎಂದು ಹೇಳುವುದಿಲ್ಲ. ಹೀಗಾಗಿ ಯಾರಾದರೂ ಫೋನ್, ಇಲ್ಲವೇ ಆನ್‌ಲೈನ್ ಮೂಲಕ ಹಣ ಕೇಳಿದರೆ ಅದು ಬಹುತೇಕ ವಂಚನೆ ಆಗಿರುತ್ತದೆ ಎಂದು ಸಂಸ್ಥೆ ತಿಳಿಸಿದೆ.

ಸೈಬರ್ ಅಪರಾಧಿಗಳು ಒತ್ತಡ ತಂತ್ರಗಳನ್ನು ಅನುಸರಿಸುತ್ತಾರೆ. ತ್ವರಿತ ಕ್ರಮಗಳ ಅಗತ್ಯವಿದೆ ಎಂದು ಹೇಳಿ ತುರ್ತು ಪರಿಸ್ಥಿತಿ ಸೃಷ್ಟಿಸುತ್ತಾರೆ. ಇಂತಹ ಅಪರಾಧಗಳ ಬಗ್ಗೆ ಎಚ್ಚರಿಕೆ ವಹಿಸುವುದೇ ಸೂಕ್ತ ಎಂದು ಸುರಕ್ಷತಾ ಸಂಸ್ಥೆ ತಿಳಿಸಿದೆ.

ಅಲ್ಲದೆ ವಂಚಕರು ಫಿಶಿಂಗ್ ಹಗರಣ ಸಹ ನಡೆಸುತ್ತಾರೆ. ಅಧಿಕೃತ ಸಂಸ್ಥೆಯನ್ನು ಹೋಲುವ ಇಮೇಲ್ ಇಲ್ಲವೇ ಮೆಸೇಜ್ ಕಳಿಸಿ ಜನರ ದಾರಿ ತಪ್ಪಿಸುತ್ತಾರೆ. ನಿಮಗೆ ಲಾಟರಿ ಬಂದಿದೆ ಇಲ್ಲವೇ ಬಹುಮಾನ ದೊರೆತಿದೆ ಎಂದು ವಂಚನೆ ಮಾಡುತ್ತಾರೆ. ಈ ಹಣ ಪಡೆಯಬೇಕಾದರೆ ಶುಲ್ಕ ಪಾವತಿಸಬೇಕು ಎಂದು ಹೇಳುತ್ತಾರೆ. ಈ ಸಂದರ್ಭದಲ್ಲಿ ವಂಚಕರು ಜನರ ಆಸೆ ಹಾಗೂ ದುರಾಸೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಾರೆ ಎಂದು ತಿಳಿಸಲಾಗಿದೆ.

ಇನ್ನು ಕೆಲವೊಮ್ಮೆ ಭಾವನಾತ್ಮಕವಾಗಿ ಜನರನ್ನು ದಿಕ್ಕು ತಪ್ಪಿಸುವ ವಂಚನೆಗಳು ನಡೆಯುತ್ತವೆ. ವೈದ್ಯಕೀಯ ತುರ್ತು ಪರಿಸ್ಥಿತಿ ಇದೆ ಎಂದು ಹಣ ಕೇಳುತ್ತಾರೆ.

ನವ ಪದವೀಧರರಿಗೆ ಉದ್ಯೋಗ ಕೊಡಿಸುವುದಾಗಿ ಹೇಳಿ ವಂಚನೆ ನಡೆಸುವುದು ಕಂಡುಬಂದಿದೆ. ತಾಂತ್ರಿಕ ನೆರವು ನೀಡುವುದಾಗಿ ಹೇಳಿ, ಕಂಪ್ಯೂಟರ್ ಇಲ್ಲವೇ ಮೊಬೈಲ್‌ನಲ್ಲಿ ಕುತಂತ್ರಾಂಶ ಅಳವಡಿಸುವ ಮೂಲಕ ವೈಯಕ್ತಿಕ ಮಾಹಿತಿ ಕದಿಯಲಾಗುತ್ತದೆ.

ಅಲ್ಪ ಅವಧಿಯಲ್ಲಿ ಅಪಾರ ಲಾಭ ಗಳಿಸಬಹುದು ಎಂದು ಹೇಳಿ ಪೊಂಜಿ ಇಲ್ಲವೇ ಪಿರಮಿಡ್ ಯೋಜನೆಗಳಲ್ಲಿ ಹಣ ತೊಡಗಿಸಿ ವಂಚಿಸುವ ಪ್ರಕರಣಗಳು ನಡೆಯುತ್ತವೆ. ವಂಚಕರು ನಕಲಿ ಆನ್‌ಲೈನ್ ತಾಣಗಳನ್ನು ರೂಪಿಸಿ, ನಕಲಿ ಇಲ್ಲವೇ ಜಾಹೀರಾತಿನಲ್ಲಿ ತಿಳಿಸಿರುವುದಕ್ಕಿಂತ (3ನೇ ಪುಟಕ್ಕೆ)

# ಚೀನಾದಲ್ಲಿ ಮಕ್ಕಳಿಲ್ಲದೇ ಸಾವಿರಾರು ಬಾಲವಿಹಾರಗಳು ಬಂದ್

ಬೀಜಿಂಗ್, ಅ.27 - ಚೀನಾದಲ್ಲಿ ಜನಸಂಖ್ಯಾ ಪ್ರಮಾಣ ಗಣನೀಯವಾಗಿ ಕುಸಿಯುತ್ತಿದೆ. ಈ ಹಿನ್ನೆಲೆಯಲ್ಲಿ ಮಕ್ಕಳಿಲ್ಲದೆ ದೇಶದ ಸಾವಿರಾರು ಬಾಲವಿಹಾರಗಳು ಮುಚ್ಚುತ್ತಿವೆ ಎಂದು ಅಧಿಕೃತ ವರದಿಯಲ್ಲಿ ತಿಳಿಸಲಾಗಿದೆ.

2023ರಲ್ಲಿ ಬಾಲವಿಹಾರಗಳಿಗೆ ಸೇರುತ್ತಿದ್ದ ಮಕ್ಕಳ ಸಂಖ್ಯೆಯಲ್ಲಿ 14,808 ಇಳಿಕೆಯಾಗಿದೆ. ಈ ವರ್ಷ 2.74 ಲಕ್ಷ ಮಕ್ಕಳು ಬಾಲವಿಹಾರಗಳಿಗೆ ಸೇರ್ಪಡೆಯಾಗಿದ್ದಾರೆ ಎಂದು ಚೀನಾದ ಶಿಕ್ಷಣ ಸಚಿವಾಲಯ ತಿಳಿಸಿದೆ.

ಸತತ ಮೂರು ವರ್ಷಗಳಿಂದ ಬಾಲವಿಹಾರಗಳಿಗೆ ಸೇರ್ಪಡೆಯಾಗುವ ಮಕ್ಕಳ ಸಂಖ್ಯೆ ಇಳಿಮುಖವಾಗಿದೆ ಎಂದು ಹಾಂಗ್‌ಕಾಂಗ್‌ನ ಸೌತ್ ಚೀನಾ ಮಾರ್ನಿಂಗ್ ಪೋಸ್ಟ್ ವರದಿ ತಿಳಿಸಿದೆ. ಪ್ರಾಥಮಿಕ ಶಾಲೆಗಳಿಗೆ ಸೇರ್ಪಡೆಯಾಗುವ ಮಕ್ಕಳ ಸಂಖ್ಯೆ 5,645ರಷ್ಟು ಇಳಿಕೆಯಾಗಿದೆ. 2023ರಲ್ಲಿ 1.43 ಲಕ್ಷ ಮಕ್ಕಳು ಪ್ರಾಥಮಿಕ ಶಾಲೆಗಳಿಗೆ ಸೇರ್ಪಡೆಯಾಗಿದ್ದಾರೆ. ಮಕ್ಕಳ ದಾಖಲಾತಿ ಶೇ.3.8ರಷ್ಟು ಕಡಿಮೆಯಾಗಿದೆ.

ಚೀನಾದಲ್ಲಿ ಜನನ ದರ ಹಾಗೂ ಒಟ್ಟಾರೆ ಜನಸಂಖ್ಯೆ ಎರಡೂ ಇಳಿಕೆಯಾಗುತ್ತಿವೆ. ಇದು ಮುಂದಿನ ದಿನಗಳಲ್ಲಿ ಆರ್ಥಿಕ ಬೆಳವಣಿಗೆ ಮೇಲೆ ಪರಿಣಾಮ ಆಗಬಹುದು ಎಂಬ ಕಳವಳ ವ್ಯಕ್ತವಾಗುತ್ತಿದೆ. ಚೀನಾದ ಆರ್ಥಿಕ ಬೆಳವಣಿಗೆ ಈಗಾಗಲೇ ಮಂದವಾಗುತ್ತಿದೆ.

ಚೀನಾದಲ್ಲಿ ಈಗ ಅವಳಿ ಸಮಸ್ಯೆ ಎದುರಾಗಿದೆ. ಒಂದೆಡೆ ಜನನ ದರ ಹಾಗೂ ಫಲವತ್ತತೆ ಕಡಿಮೆಯಾಗುತ್ತಿದೆ. ಮತ್ತೊಂದೆಡೆ ವೃದ್ಧರ ಸಂಖ್ಯೆ ಹೆಚ್ಚಾಗುತ್ತಿದೆ. 2023ರಲ್ಲಿ 60 ವರ್ಷ ಮೀರಿದವರ ಸಂಖ್ಯೆ 30 ಕೋಟಿಗೆ ತಲುಪಿದೆ. 2035 ರ ವೇಳೆಗೆ ಇವರ ಸಂಖ್ಯೆ 40 ಕೋಟಿ ಹಾಗೂ 2050ರಲ್ಲಿ 50 ಕೋಟಿಗೆ ತಲುಪಬಹುದು ಎಂದು ಸರ್ಕಾರಿ ಸ್ವಾಮ್ಯದ ಜಿನುವ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಈ ಹಿನ್ನೆಲೆಯಲ್ಲಿ ಸಾಕಷ್ಟು ಬಾಲವಿಹಾರಗಳನ್ನು ಈಗ ವೃದ್ಧರ ಕಾಳಜಿ ತಾಣಗಳಾಗಿ ಪರಿವರ್ತಿಸಲಾಗುತ್ತಿದೆ. ಇಲ್ಲಿನ ಸಿಬ್ಬಂದಿ ಹಿರಿಯರ ಕಾಳಜಿಯ ಕೆಲಸ ನಿರ್ವಹಿಸುತ್ತಿದ್ದಾರೆ ಎಂದು ಸೌತ್ ಚೀನಾ ಮಾರ್ನಿಂಗ್ ಪೋಸ್ಟ್ ತಿಳಿಸಿದೆ.

ಚೀನಾ ದಶಕಗಳಿಂದ ಒಂದು ಮಗುವಿನ ನೀತಿ ಅನುಸರಿಸಿತ್ತು. ಇದರಿಂದಾಗಿ ಜನಸಂಖ್ಯಾ ಸ್ಫೋಟಕ್ಕೆ ಕಡಿವಾಣ ಹಾಕಲು ಸಾಧ್ಯವಾಗಿತ್ತು. ಆದರೆ, ಇದರಿಂದಾಗಿ ದೇಶದಲ್ಲಿ ವೃದ್ಧರ ಸಂಖ್ಯೆ ಹೆಚ್ಚಾಗಿತ್ತು.

2016ರಲ್ಲಿ ತನ್ನ ನೀತಿಯನ್ನು ಬದಲಿಸಿದ್ದ ಚೀನಾ ಸರ್ಕಾರ, ದಂಪತಿಗಳು ಎರಡು ಮಕ್ಕಳನ್ನು ಹೊಂದಲು ಅನುಮತಿ ನೀಡಿತ್ತು. ಇದರಿಂದ ಯಾವುದೇ ಪರಿಣಾಮ ಕಂಡು ಬರಲಿಲ್ಲ. ಹೀಗಾಗಿ 2021 ರಲ್ಲಿ ಚೀನಾ ಸರ್ಕಾರ ಮೂರು ಮಕ್ಕಳನ್ನು ಹೊಂದಲು ಅನುಮತಿ ನೀಡಿತು. ಆದರೆ ಹೆಚ್ಚುತ್ತಿರುವ ವೆಚ್ಚಗಳ ಕಾರಣದಿಂದಾಗಿ ಜನರು ಹೆಚ್ಚು ಮಕ್ಕಳನ್ನು ಹೊಂದಲು ಬಯಸುತ್ತಿಲ್ಲ.

ಪಿಂಚಣಿ ಹೊರೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಚೀನಾ ಸರ್ಕಾರ ಕಳೆದ ತಿಂಗಳು ಪುರುಷರ ನಿವೃತ್ತಿ ವಯಸ್ಸನ್ನು 60 ರಿಂದ 63 ವರ್ಷಕ್ಕೆ ಹೆಚ್ಚಿಸಿತ್ತು. ಮಹಿಳಾ ಉದ್ಯೋಗಿಗಳ ನಿವೃತ್ತಿ ವಯಸ್ಸನ್ನು 55ರಿಂದ 58ಕ್ಕೆ ಹೆಚ್ಚಿಸಲಾಗಿದೆ.

# ಬಂಜೆತನ ಶಾಪವೆಂದು ಗ್ರಹಿಸುವುದು ತಪ್ಪು : ಡಾ. ವರದಾ ಕಿರಣ್



ಮಲೇಬೆನ್ನೂರು, ಅ.27- ಬಂಜೆತನ ಶಾಪ ಎಂದು ಗ್ರಹಿಸುವುದು ತಪ್ಪು ಎಂದು ದಾವಣಗೆರೆಯ ಕಡ್ಲಿ ಐವಿಎಫ್ ಸೆಂಟರ್‌ನ ಡಾ. ವರದಾಕಿರಣ್ ತಿಳಿಸಿದರು.

ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮಲೇಬೆನ್ನೂರು ಲಯನ್ಸ್ ಕ್ಲಬ್, ಶ್ರೀ ವೀರಭದ್ರೇಶ್ವರ ಚಾರಿಟೇಬಲ್ ಟ್ರಸ್ಟ್ ಮತ್ತು ದಾವಣಗೆರೆಯ ಕಡ್ಲಿ ಐವಿಎಫ್ ಸೆಂಟರ್ ವತಿಯಿಂದ ಇಂದು ಹಮ್ಮಿಕೊಂಡಿದ್ದ ಉಚಿತ ಬಂಜೆತನ ನಿವಾರಣಾ ಸಮಾಲೋಚನಾ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರತಿ 8 ಹೆಣ್ಣು ಮಕ್ಕಳಲ್ಲಿ ಒಬ್ಬರಿಗೆ ಬಂಜೆತನ ಸಮಸ್ಯೆ ಕಾಣುತ್ತದೆ. ಸಾಮಾಜಿಕ ಸಮಸ್ಯೆಗೆ ಸಿಲುಕಿ ಹಲವಾರು ಕುಟುಂಬಗಳು ಮನೋವ್ಯಾಧಿ ಅನುಭವಿಸುತ್ತಿವೆ. ವೈಜ್ಞಾನಿಕ ಯುಗದಲ್ಲೂ ಜನರು ನಕಲಿ ವೈದ್ಯರು, ಮಾಟ ಮಂತ್ರ - ತಂತ್ರ, ಹರಕೆ, ಪೂಜೆ ಮೊರೆ ಹೋಗುತ್ತಿದ್ದಾರೆ. ಆದರೆ, ಅತ್ಯಾಧುನಿಕ ಚಿಕಿತ್ಸೆ ಮೂಲಕ ಸಂತಾನ ಪಡೆಯಲು ಅವಕಾಶ ಇದೆ.

ಸರ್ಕಾರದ ಯಶಸ್ವಿನಿ, ಇಎಸ್‌ಐ, ಆಯುಷ್ಮಾನ್ ವಿಮಾ ಯೋಜನೆಯಡಿ ಚಿಕಿತ್ಸೆ ಲಭ್ಯವಿದೆ. ಸಂತಾನ ಸಮಸ್ಯೆ ಇರುವವರು ಇದರ ಲಾಭ ಪಡೆಯಿರಿ ಎಂದು ಅವರು ಕೋರಿದರು.

ಲಯನ್ಸ್ ಕ್ಲಬ್ ವಲಯಾಧ್ಯಕ್ಷ ಚಿಟ್ಟಕ್ಕಿ ನಾಗರಾಜ್ ಮಾತನಾಡಿದರು. ಲಯನ್ಸ್ ಕ್ಲಬ್ ಅಧ್ಯಕ್ಷರಾದ ಪಾರ್ವತಮ್ಮ ಇ.ಎಂ. ಮರುಳಸಿದ್ದೇಶ್, ಕಾರ್ಯದರ್ಶಿ ರೂಪಾ ಪಾಟೀಲ್, ಡಾ.ಹೆಚ್.ಜೆ.ಚಂದ್ರಕಾಂತ್, ಓ.ಜಿ. ರುದ್ರಗೌಡ, ಎನ್.ಜಿ.ಶಿವಾಜಿ ಪಾಟೀಲ್, ಎನ್.ಜಿ.ಬಸವನಗೌಡ್ರು, ಟಿ.ಹೆಚ್.ಓ ಡಾ. ಅಬ್ದುಲ್ ಖಾದರ್, ಡಾ. ಲಕ್ಷ್ಮಿದೇವಿ, ಅಕ್ಕನ ಬಳಗದ ಅಧ್ಯಕ್ಷೆ ಸರೋಜಮ್ಮ ಡಾ.ಎಂ.ಜಿ.ರಂಗನಾಥ್, ವೀರಭದ್ರೇಶ್ವರ ದೇವಸ್ಥಾನದ ಬಿ.ಎನ್. ವೀರೇಶ್ ಭಾಗವಹಿಸಿದ್ದರು.

# ಚನ್ನಗಿರಿ: ಅದ್ದೂರಿ ರಾಜ್ಯೋತ್ಸವಕ್ಕೆ ಸಿದ್ಧತೆ



ಚನ್ನಗಿರಿ, ಅ.27- 69 ನೇ ಕರ್ನಾಟಕ ರಾಜ್ಯೋತ್ಸವದ ಕಾರ್ಯಕ್ರಮವನ್ನು ಪಟ್ಟಣದಲ್ಲಿ ಅದ್ದೂರಿಯಾಗಿ ಆಚರಿಸಲು ಸಕಲ ರೀತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ಚನ್ನಗಿರಿ ತಹಶೀಲ್ದಾರ್ ಜಿ.ಎಸ್.ಶಂಕರಪ್ಪ ತಿಳಿಸಿದರು.

ಇಲ್ಲಿನ ಪ್ರಜಾಸೌಧದಲ್ಲಿ ಕರೆಯಲಾಗಿದ್ದ 69ನೇ ರಾಜ್ಯೋತ್ಸವ ಮತ್ತು ಭುವನೇಶ್ವರಿ ರಥಯಾತ್ರೆ, ಕಾರ್ಯಕ್ರಮದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿಕೊಂಡು ಅವರು ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕಾಧ್ಯಕ್ಷ ಎಲ್.ಜಿ. ಮಧುಕುಮಾರ್ ಮಾತನಾಡಿದರು.

ಈ ವೇಳೆ ಮುಖಂಡ ಸಿ.ಹೆಚ್.ಶ್ರೀನಿವಾಸ್, ಕ್ಷೇತ್ರ ಶಿಕ್ಷಣಾಧಿಕಾರಿ ಎಲ್. ಜಯಪ್ಪ, ಪುರಸಭೆ ಮುಖ್ಯಾಧಿಕಾರಿ ಕೃಷ್ಣಪ್ಪ ಡಿ.ಕಟ್ಟಿಮನಿ, ಕನ್ನಡ ನಾಡು ಹಿತರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಕೃಷ್ಣಮೂರ್ತಿ, ಕರ್ನಾಟಕ ರಕ್ಷಣಾ ವೇದಿಕೆಯ ತಾಲ್ಲೂಕಾಧ್ಯಕ್ಷ ಮಲ್ಲನಾಯ್ಕ್ , ಕಸಾಪ ಹೋಬಳಿ ಅಧ್ಯಕ್ಷ ಜಿ.ಚಿನ್ನಸ್ವಾಮಿ, ಬುಳ್ಳಿ ನಾಗರಾಜ್, ಶಿರಸ್ತೆದಾರ್ ಮೋಹನ್ ಮತ್ತಿತರಿದ್ದರು.

# ಸಾಂಸ್ಥಿಕ ಮಧ್ಯಸ್ಥಿಕೆಗೆ ಉತ್ತೇಜನ ನೀಡಲು ಕರಡು ಮಸೂದೆ

ನವದೆಹಲಿ, ಅ. 27 - ಸಾಂಸ್ಥಿಕ ಮಧ್ಯಸ್ಥಿಕೆಗೆ ಹೆಚ್ಚಿನ ಉತ್ತೇಜನ ನೀಡಲು ಹಾಗೂ ಇಂತಹ ಪ್ರಕರಣಗಳಲ್ಲಿ ನ್ಯಾಯಾಲಯದ ಮಧ್ಯಪ್ರವೇಶ ಕಡಿಮೆ ಮಾಡಲು ಕೇಂದ್ರ ಸರ್ಕಾರ ಕರಡು ಮಸೂದೆ ಒಂದನ್ನು ರೂಪಿಸಿದೆ.

ಮಧ್ಯಸ್ಥಿಕೆ ಹಾಗೂ ಸಂಧಾನ (ತಿದ್ದುಪಡಿ) ಮಸೂದೆ, 2024 ಕರಡನ್ನು ಕೇಂದ್ರ ಸರ್ಕಾರ ರೂಪಿಸಿದೆ. ಕೇಂದ್ರ ಕಾನೂನು ಸಚಿವಾಲಯದ ಕಾನೂನು ವ್ಯವಹಾರಗಳ ಇಲಾಖೆಯು ಈ ಕರಡು ಮಸೂದೆಯ ಬಗ್ಗೆ ನಿಲುವುಗಳನ್ನು ತಿಳಿಸುವಂತೆ ಕೇಳಿದೆ. ಈ ಕರಡು ಮಸೂದೆಯ ಮೂಲಕ ಸಾಂಸ್ಥಿಕ ಮಧ್ಯಸ್ಥಿಕೆಗೆ ಉತ್ತೇಜನ ನೀಡಲು, ನ್ಯಾಯಾಲಯದ ಮಧ್ಯಪ್ರವೇಶ ಕಡಿಮೆ ಮಾಡಲು ಹಾಗೂ ಕಾಲಮಿತಿಯಲ್ಲಿ ಸಂಧಾನ ಪ್ರಕ್ರಿಯೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಮಾಜಿ ಕಾನೂನು ಕಾರ್ಯದರ್ಶಿ ಟಿ.ಕೆ. ವಿಶ್ವನಾಥನ್ ಅವರ ನೇತೃತ್ವದ ಸಮಿತಿಯು ಕಾಯ್ದೆ ತಿದ್ದುಪಡಿ ಕುರಿತು ಕೆಲ ತಿಂಗಳ ಹಿಂದೆ ವರದಿಯೊಂದನ್ನು ಸಲ್ಲಿಸಿತು. ಈ ವರದಿಯ ಆಧಾರದ ಮೇಲೆ ತುರ್ತು ಮಧ್ಯಸ್ಥಿಕೆ ಎಂಬ ಪರಿಕಲ್ಪನೆ ರೂಪಿಸಲಾಗಿದೆ.

ಈ ಮೂಲಕ, ಮಧ್ಯಸ್ಥಿಕೆ ಸಂಸ್ಥೆಯು ಮಧ್ಯಂತರ ಕ್ರಮಗಳಿಗಾಗಿ ಮಧ್ಯಸ್ಥಿಕೆ ಟ್ರಿಬ್ಯೂನಲ್ ಸ್ಥಾಪಿಸುವುದಕ್ಕಿಂತ ಮುಂಚೆ ತುರ್ತು ಸಂಧಾನಕಾರರನ್ನು ನೇಮಿಸಬಹುದು ಎಂದು ಕರಡು ಮಸೂದೆಯಲ್ಲಿ ತಿಳಿಸಲಾಗಿದೆ.

# ಕ್ಷಿಪಣಿ ಯೋಜನೆ ತಾಣಗಳಿಗೆ ಹಾನಿ

**(1ನೇ ಪುಟದಿಂದ)** ನಾಶವಾಗಿರುವುದು ಕಂಡು ಬಂದಿದೆ. ಇಂತಹ ತಾಣಗಳನ್ನು ನಾಶಗೊಳಿಸುವುದರಿಂದ ಇರಾನ್ ಕ್ಷಿಪಣಿ ಉತ್ಪಾದಿಸುವ ಸಾಮರ್ಥ್ಯ ಕುಂಠಿತವಾಗಲಿದೆ. ಇಸ್ರೇಲ್ ಮೇಲೆ ಇರಾನ್ ಈಗಾಗಲೇ ಎರಡು ಬಾರಿ ಕ್ಷಿಪಣಿ ದಾಳಿ ನಡೆಸಿದೆ.

ಇಸ್ರೇಲ್ ನಡೆಸಿದ ದಾಳಿಯಲ್ಲಿ ನಾಗರಿಕರ ನೆಲೆಗಳಿಗೆ ಯಾವುದೇ ಹಾನಿಯಾದ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಕಂಡು ಬಂದಿಲ್ಲ. ಹೀಗಾಗಿ ಇಸ್ರೇಲ್ ನಡೆಸಿದ ದಾಳಿ ಹೆಚ್ಚು ನಿಖರವಾಗಿದೆ ಎಂದು ಪರಿಣಿತರು ಹೇಳುತ್ತಿದ್ದಾರೆ. ಆದರೆ, ತೆಹರಾನ್ ದಕ್ಷಿಣದಲ್ಲಿರುವ ಶಮ್ಸಾಬಾದ್ ಕೈಗಾರಿಕಾ ನಗರದ ಮೇಲೆ ದಾಳಿ ನಡೆದಿರುವುದು ಕಂಡು ಬಂದಿದೆ. ಈ ನಗರವು ಇರಾನ್‌ನ ಪ್ರಮುಖ ವಿದೇಶಿ ಸಂಪರ್ಕ ತಾಣವಾಗಿದೆ.

ಈ ನಡುವೆ ಹೇಳಿಕೆ ನೀಡಿರುವ ಇಸ್ರೇಲ್ ಪ್ರಧಾನ ಮಂತ್ರಿ ಬೆಂಜಮಿನ್ ನೇತನ್ಯಾಹು, ದಾಳಿಯ ಎಲ್ಲಾ ಗುರಿಗಳನ್ನು ತಲುಪಲಾಗಿದೆ. ಇರಾನ್ ದಾಳಿ ನಡೆಸುವ ಸಾಮರ್ಥ್ಯಕ್ಕೆ ತೀವ್ರ ಹಾನಿಯಾಗಿದೆ ಎಂದಿದ್ದಾರೆ.

# ವಿಶ್ವಚೇತನ ಶಾಲೆಯಲ್ಲಿ ವಾಲ್ಮೀಕಿ ಜಯಂತಿ



ದಾವಣಗೆರೆ, ಅ. 27- ನಗರದ ವಿಶ್ವಚೇತನ ವಿದ್ಯಾನಿಕೇತನ ವಸತಿಯುತ ಶಾಲೆ ಹಾಗೂ ಪದವಿ ಪೂರ್ವ ಕಾಲೇಜಿನಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು.

ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಜಿ. ವಿನೋದ್, ಪ್ರೌಢಶಾಲೆ ಪ್ರಾಂಶುಪಾಲ ಪ್ರಕಾಶ್ ಜೋಗಿ, ಮುಖ್ಯೋಪಾಧ್ಯಾಯ ಬಿ.ಎಂ. ಬಸವರಾಜಯ್ಯ, ಹಿ.ಪ್ರಾ. ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಶಾಜಿಯಾ ಬಾನು, ಕಿ.ಪ್ರಾ.ಶಾಲೆಯ ಶೈಕ್ಷಣಿಕ ಸಂಯೋಜಕರಾದ ಶ್ರೀಮತಿ ಅಪೇಕ್ಷ, ಉಪ ಪ್ರಾಂಶುಪಾಲ ಯುವರಾಜ್ ಕಾಂಬಳೆ, ಕನ್ನಡ ವಿಭಾಗದ ಮುಖ್ಯಸ್ಥ ಬಿ. ನಾಗರಾಜ ಉಪಸ್ಥಿತರಿದ್ದರು.

ಕನ್ನಡ ಶಿಕ್ಷಕ ಸಿದ್ದಪ್ಪ ವಾಲ್ಮೀಕಿ ಅವರ ಕುರಿತ ಮಾತನಾಡಿದರು. ಎರ್ರಿಸ್ವಾಮಿ ಸ್ವಾಗತಿಸಿದರು. ಶಿಕ್ಷಕ ಸಂಜಯ್ ವಂದಿಸಿದರು.

# 34ನೇ ವಾರ್ಡಿನಲ್ಲಿ ಬಿಜೆಪಿ ಸದಸ್ಯತ್ವ ಅಭಿಯಾನ



ದಾವಣಗೆರೆ, ಅ.27- ನಗರದ 34ನೇ ವಾರ್ಡ್‌ನಲ್ಲಿ ಬಿಜೆಪಿ ಸದಸ್ಯತಾ ಅಭಿಯಾನ ನಡೆಸಲಾಯಿತು. ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯ ರೈತ ಮೋರ್ಚಾ ಉಪಾಧ್ಯಕ್ಷ ಲೋಕಿಕೆರೆ ನಾಗರಾಜ್, ಜಿಲ್ಲಾಧ್ಯಕ್ಷ ರಾಜಶೇಖರ್ ನಾಗಪ್ಪ, ಬಿಜೆಪಿ ಮುಖಂಡ ಎನ್. ಹೆಚ್. ಹಾಲೇಶ್, ಸಹ ಸಂಚಾಲಕರಾದ ಸವಿತಾ ರವಿಕುಮಾರ, ಬೂತ್ ಅಧ್ಯಕ್ಷ ನಾಗರಾಜ್, ವಾಟರ್ ಮಂಜುನಾಥ್, ಮಂಜುಳಮ್ಮ ಮಂಜುನಾಥ್ ಶಶಿಕುಮಾರ್, ಶಕುಂತಲಮ್ಮ ವಸಂತ್ ಇತರರಿದ್ದರು.

# ಹಿರಿಯ ಪತ್ರಕರ್ತ ವಿ.ಟಿ. ಸುಂದರ್ ನಿಧನ



ದಾವಣಗೆರೆ, ಅ.27-ನಗರದ ಹಿರಿಯ ಪತ್ರಕರ್ತ ವಿ.ಟಿ. ಸುಂದರ್ ಅವರು ಇಂದು ರಾತ್ರಿ 11.30ಕ್ಕೆ ಹೃದಯಾಘಾತದಿಂದ ನಿಧನರಾದರು.

ಮೃತರಿಗೆ ಸುಮಾರು 70 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಮೃತರ ಪಾರ್ಥಿವ ಶರೀರವನ್ನು ಎಸ್.ಓ.ಜಿ.ಕಾಲೋನಿಯಲ್ಲಿರುವ ಅವರ ನಿವಾಸದಲ್ಲಿಡಲಾಗಿದ್ದು, ನಾಳೆ ದಿನಾಂಕ 28ರ ಸೋಮವಾರ ಸಂಜೆ 4.30ಕ್ಕೆ ಆರ್.ಹೆಚ್. ಬೃಂದಾವನದಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

# ಸಮಾಜದ ಹಿತಕ್ಕೆ ಪಕ್ಷಾತೀತವಾಗಿ ಒಗ್ಗೂಡಿ

**(1ನೇ ಪುಟದಿಂದ)** ಶಿವಸೈನ್ಯ ಸಂಘ ಕೇವಲ ರಾಜ್ಯ, ಜಿಲ್ಲೆಗೆ ಸೀಮಿತವಾಗದೇ ತಾಲ್ಲೂಕು, ಹೋಬಳಿ ಮತ್ತು ಗ್ರಾಮ ಮಟ್ಟದಲ್ಲಿ ಸಂಘಟನೆ ಮಾಡುವ ಮೂಲಕ ಸಮಾಜ ಮುಖಿ ಕಾರ್ಯಚಟುವಟಿಕೆಗಳನ್ನು ನಡೆಸಬೇಕೆಂದು ಸಲಹೆ ನೀಡಿದರು.

ತರಳಬಾಳು ಶಿವಸೈನ್ಯ ಸಂಘವು ಯಾವುದೇ ಸಮಾಜದ ಪ್ರತಿಸ್ಪರ್ಧಿಯಲ್ಲ. ಬದಲಾಗಿ ಸಮಾಜವನ್ನು ಮತ್ತಷ್ಟು ಸದೃಢಗೊಳಿಸಲು, ಸಮಾಜ ಮುಖಿ ಕಾರ್ಯಗಳನ್ನು ಮಾಡುವ ಸಲುವಾಗಿ ರಚನೆಗೊಂಡಿದೆ ಎಂದು ಸಮಾಜದ ಮುಖಂಡರಾದ ಪಿ. ಮಹಾಬಲೇಶ್ವರ ಗೌಡ್ರು ಹೇಳಿದರು.

ಸಮಾಜದಲ್ಲಿ ಏನೇ ಭಿನ್ನಾಭಿಪ್ರಾಯಗಳು, ನಿಲುವು ಗಳು, ವ್ಯತ್ಯಾಸಗಳಿದ್ದರೂ ನಮ್ಮ ಸಮಾಜಕ್ಕೆ ತರಳಬಾಳು ಜಗದ್ಗುರುಗಳೇ ಪಿತಾಮಹಾ ಹೊರತು ಬೇರೆಯವರಲ್ಲ ಎಂಬುದನ್ನು ನಾವೆಲ್ಲರೂ ಮನಗಾಣಬೇಕೆಂದರು.

ನಮ್ಮ ಸಮಾಜ ಮತ್ತು ಸಂಘ ತರಳಬಾಳು ಗುರುಪರಂಪರೆಯ ಗುರುಪೀಠದ ಆದೇಶದಂತೆ ಚಾಚೂ ತಪ್ಪದೇ ಪಾಲಿಸಿಕೊಂಡು ಬರುತ್ತಿದೆ ಎಂದರು.

ಮಹಾನಗರ ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್ ಮಾತನಾಡಿ, ತರಳಬಾಳು ಶಿವಸೈನ್ಯ ಸಂಘ ತನ್ನ ಜಿಲ್ಲಾ ವ್ಯಾಪ್ತಿಯಿಂದ ರಾಜ್ಯ ವ್ಯಾಪ್ತಿಯವರೆಗೂ ವಿಸ್ತರಿಸಿಕೊಂಡಿದ್ದು, ಇದರಿಂದ ಪದಾಧಿಕಾರಿಗಳಿಗೆ, ಸದಸ್ಯರಿಗೆ ಇನ್ನೂ ಜವಾಬ್ದಾರಿ ಹೆಚ್ಚಿದೆ ಎಂದರು.

ಸಂಘದ ಉತ್ತಮ ಕೆಲಸಗಳಿಗೆ ನನ್ನ ಸಹಕಾರ ಯಾವತ್ತೂ ಇರುತ್ತದೆ. ಸಮಾಜದಲ್ಲಿ ಯಾರೇ ಆಗಲಿ ಸಮಾಜಮುಖಿ ಕೆಲಸಗಳನ್ನು ಮತ್ತು ಸಮಾಜದ ಒಳಿತಿಗೆ ದುಡಿಯುವವರನ್ನು ಪ್ರೋತ್ಸಾಹಿಸಬೇಕೆಂದು ಹೇಳಿದರು.

ರೈತ ಮುಖಂಡ ಹೊನ್ನೂರು ಮುನಿಯಪ್ಪ ಮತ್ತಿತರೆ ಗಣ್ಯರು ಸಮಾಜ ಸಂಘಟನೆ ಬಗ್ಗೆ ಮಾತನಾಡಿದರು. ಇದೇ ವೇಳೆ 2003 ರಿಂದ ಇದುವರೆಗೂ ತರಳಬಾಳು ಶಿವಸೈನ್ಯ ಸಂಘದಲ್ಲಿ ಕೆಲಸ ಮಾಡಿದ ಪದಾಧಿಕಾರಿಗಳು ಮತ್ತು ನೂತನ ರಾಜ್ಯ ಘಟಕದ ಪದಾಧಿಕಾರಿಗಳನ್ನು ಗೌರವಿಸಲಾಯಿತು.

ಕಕ್ಕರಗೊಳ್ಳ ಜಿ.ಪಂ. ಮಾಜಿ ಸದಸ್ಯರಾದ ಕೆ.ಜಿ.ಬಸವನಗೌಡ್ರು ಅಧ್ಯಕ್ಷತೆ ವಹಿಸಿದ್ದರು. ಸಮಾಜದ ಮುಖಂಡರಾದ ರಾಮಗೊಂಡನಹಳ್ಳಿ ಜಯಣ್ಣ, ಬೇತೂರು ರೇವಣಸಿದ್ಧಪ್ಪ ಮರಡಿ, ಕಂಸಾಗರದ ಪಂಚಣ್ಣ, ಬೇತೂರು ಸಂಗನಗೌಡ್ರು, ಮಾಗನೂರು ಉಮೇಶ ಗೌಡ್ರು, ಯಶವಂತಗೌಡ್ರು, ಶ್ರೀನಿವಾಸ ಶಿವಗಂಗಾ, ಕ್ಯಾರಕಟ್ಟೆ ನಾಗಪ್ಪ ಮೇಷ್ಟ್ರು, ಕಾವಲಹಳ್ಳಿ ಪ್ರಭು, ಶಶಿಧರ ಹೆಮ್ಮನಬೇತೂರು, ಶಿವರಾಜ ಕಬ್ಬೂರು, ಬಿ.ಎಸ್.ಪ್ರಕಾಶ್, ಕೊರಟಿಕೆರೆ ಶಿವಕುಮಾರ್ ಉಪಸ್ಥಿತರಿದ್ದರು.

ಜಗದೀಶ್ ಕೂಲಂಬಿ ಸ್ವಾಗತಿಸಿದರು, ಶಿವರಾಜ್ ಕಬ್ಬೂರು ನಿರೂಪಿಸಿ, ವಂದಿಸಿದರು.

ರಾಜ್ಯ ಘಟಕದ ಪದಾಧಿಕಾರಿಗಳು ಆಯ್ಕೆ: ಶಶಿಧರ ಹೆಮ್ಮನಬೇತೂರು (ಅಧ್ಯಕ್ಷರು), ಪಿ. ಮಹಾಬಲೇಶ್ವರ ಗೌಡ್ರು, ಶ್ರೀನಿವಾಸ ಶಿವಗಂಗಾ ( ಗೌರವಾಧ್ಯಕ್ಷರು), ಕೆ.ಬಿ. ಮೋಹನ್ ಸಿರಿಗೆರೆ, ಅಶ್ವಿನ್ ಕೆ.ಪಿ. ನಿಂಬೆಗುಂದಿ, ಶಿಕಾರಿಪುರ ವೀರಣ್ಣ ಮಾಕನೂರು, ಕೆ.ಬಿ. ಶ್ರೀಧರ್ ಪಾಟೀಲ್ ಭದ್ರಾ ವತಿ, ಲಿಂಗರಾಜ್ ಅಗಸನಕಟ್ಟೆ (ಉಪಾಧ್ಯಕ್ಷರು), ವಕೀಲ ರಾದ ಬಸವನ ಗೌಡರು ವಿಜಯನಗರ (ಕಾರ್ಯ ದರ್ಶಿ), ಶಿವಕುಮಾರ್ ಕೊರಟಿಕೆರೆ (ಕೋಶಾಧ್ಯಕ್ಷ) ಸೇರಿದಂತೆ 39 ಪದಾಧಿಕಾರಿಗಳು ಸೇವಾ ದೀಕ್ಷೆ ಸ್ವೀಕರಿಸಿದರು.

# ನಗರದ ಮಾಸಬ ಕಾಲೇಜಿನಲ್ಲಿ ಇಂದು ಜಾಗೃತಿ ಅರಿವು ಸಪ್ತಾಹ

ಮಾಸಬ ಕಲಾ ಮತ್ತು ವಾಣಿಜ್ಯ ಕಾಲೇಜಿನ ಸಮಾಜಶಾಸ್ತ್ರ ವಿಭಾಗ ಮತ್ತು ಕರ್ನಾಟಕ ಲೋಕಾಯುಕ್ತ ಇವರುಗಳ ಸಂಯುಕ್ತಾಶ್ರಯದಲ್ಲಿ ಭ್ರಷ್ಟಾಚಾರದ ವಿರುದ್ಧ ಜಾಗೃತಿ ಅರಿವು ಸಪ್ತಾಹ-2024 'ದೇಶದ ಅಭಿವೃದ್ಧಿಗಾಗಿ, ಭ್ರಷ್ಟಾಚಾರ ಮುಕ್ತ ಭಾರತ' ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 11ಕ್ಕೆ ನಗರದ ಶ್ರೀಮತಿ ಪಾರ್ವತಮ್ಮ ಸಭಾಂಗಣದಲ್ಲಿ ನಡೆಯಲಿದೆ.

ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಜಿ.ಸಿ. ನೀಲಾಂಬಿಕ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಲೋಕಾಯುಕ್ತ ಅಧೀಕ್ಷಕ ಎಂ.ಎಸ್. ಕೌಲಾಪುರೆ ಭಾಗವಹಿಸಲಿದ್ದಾರೆ.

ಅತಿಥಿಗಳಾಗಿ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರಾದ ಕಲಾವತಿ, ಲೋಕಾಯುಕ್ತ ಪೊಲೀಸ್ ಇನ್ಸ್‌ಪೆಕ್ಟರ್‌ಗಳಾದ ಸಿ. ಮಧುಸೂದನ್, ಬಿ.ಪ್ರಭು ಸೂರಿನ, ಪಿ. ಸರಳ ಪಾಲ್ಗೊಳ್ಳುವರು.ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಆರ್. ರಾಘವೇಂದ್ರ ಉಪಸ್ಥಿತರಿರುವರು.

# ಭಾರೀ ಮಳೆಯಿಂದ ಕುಸಿದ ಮನೆಗಳು

## ಶಾಸಕ ಕೆ.ಎಸ್.ಬಸವಂತಪ್ಪ ಭೇಟಿ, ನಿರಾಶ್ರಿತರಿಗೆ ಸಾಂತ್ವನ



ದಾವಣಗೆರೆ, ಅ.27- ಮಾಯಕೊಂಡ ಕ್ಷೇತ್ರದ ವ್ಯಾಪ್ತಿಯಲ್ಲಿ ಈಚೆಗೆ ಸುರಿದ ಧಾರಾಕಾರ ಮಳೆಯಿಂದಾಗಿ ಹಾನಿಗೊಳಗಾದ ಪ್ರದೇಶಗಳಿಗೆ ಭಾನುವಾರ ಶಾಸಕ ಕೆ.ಎಸ್.ಬಸವಂತಪ್ಪ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ತಾಲ್ಲೂಕಿನ ದಿಂಡದಹಳ್ಳಿ ಮತ್ತು ಕೊಗ್ಗನೂರು ಗ್ರಾಮದಲ್ಲಿ ಸುರಿದ ಮಳೆಯಿಂದ ಕುಸಿದು ಬಿದ್ದಿರುವ ಮನೆ ವೀಕ್ಷಿಸಿ, ನಿರಾಶ್ರಿತರಿಗೆ ಸರ್ಕಾರ ಪರಿಹಾರವನ್ನೂ ಕೊಡುತ್ತದೆ. ಮನೆಯನ್ನೂ ಮಂಜೂರು ಮಾಡುತ್ತದೆ. ಯಾವುದೇ ಕಾರಣಕ್ಕೂ ನಿರಾಶ್ರಿತರು ಆತಂಕ ಪಡಬೇಡಿ ಎಂದು ಧೈರ್ಯ ತುಂಬಿದರು.

ಈಚೆಗೆ ಸುರಿದ ಮಳೆಗೆ ಕ್ಷೇತ್ರದ ಸಾಕಷ್ಟು ಗ್ರಾಮಗಳಲ್ಲಿ ಮನೆಗಳು ಭಾಗಶಃ ಹಾನಿಯಾಗಿವೆ. ಅಲ್ಲದೇ ಮೆಕ್ಕೆಜೋಳ ಸೇರಿದಂತೆ ಇನ್ನಿತರೆ ಬೆಳೆಗಳೂ ಹಾಳಾಗಿವೆ. ಅಧಿಕಾರಿಗಳು ಹಾನಿಗೊಳಗಾದ ಪ್ರದೇಶಗಳಿಗೆ ಭೇಟಿ ನೀಡಿ ನಿರಾಶ್ರಿತರಿಗೆ ಪರಿಹಾರ ನೀಡುವ ಜೊತೆಗೆ ಮನೆಗಳನ್ನು ನಿರ್ಮಿಸಿಕೊಡಬೇಕೆಂದು ಸೂಚನೆ ನೀಡಿದರು.

ಇದೇ ವೇಳೆ ಜೆಜೆಎಂ ಯೋಜನೆಯಡಿ ಕುಡಿಯುವ ನೀರಿನ ಪೈಪ್‌ಲೈನ್ ಕಳಪೆ ಗುಣಮಟ್ಟದಿಂದ ಕೂಡಿದ್ದು, ಗುಣಮಟ್ಟದ ಕಾಮಗಾರಿ ನಡೆಸಿ ಗ್ರಾಮಸ್ಥರಿಗೆ ಸಮರ್ಪಕ ಕುಡಿಯುವ ನೀರು ಪೂರೈಸುವಂತೆ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಪರಶುರಾಮ್, ಗಣೇಶಪ್ಪ, ಹೊನ್ನೂರಪ್ಪ, ಬಸಣ್ಣ, ಶ್ರೀಕಾಂತ್, ಕೆಂಚಪ್ಪ ಹಾಗೂ ಗ್ರಾಮಸ್ಥರು ಇದ್ದರು.

**ವಾಲ್ಮೀಕಿ ಜಯಂತಿ:** ದಿಂಡದಹಳ್ಳಿ ಗ್ರಾಮದಲ್ಲಿ ನಡೆದ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಶಾಸಕ ಕೆ.ಎಸ್.ಬಸವಂತಪ್ಪ, ಮಹರ್ಷಿ ವಾಲ್ಮೀಕಿಯವರ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಮಕ್ಕಳಿಗೆ ಶಿಕ್ಷಣ ಕೊಡಿಸಿ ಸತ್ಪ್ರಜೆಗಳನ್ನಾಗಿ ಮಾಡಬೇಕೆಂದು ಕಿವಿಮಾತು ಹೇಳಿದರು.

ಈ ವೇಳೆ ಕಾಂಗ್ರೆಸ್ ಮುಖಂಡ ಮಂಜುನಾಥ್, ನಾಗರಾಜ್, ಗಣೇಶ್, ಪರಶುರಾಮ್, ಬಸಣ್ಣ ಇತರರು ಭಾಗವಹಿಸಿದ್ದರು.

## ಗಂಗಮ್ಮ ಎಂ. ಮಾಗನೂರು ನಿಧನ



ದಾವಣಗೆರೆ ಎಸ್.ಎಸ್ ಬಡಾವಣೆ 'ಎ' ಬ್ಲಾಕ್, 4ನೇ ಕ್ರಾಸ್, ಕರ್ನಾಟಕ ಬ್ಯಾಂಕ್ ರಸ್ತೆ, ಬೂಸ್ನೂರ್ ಪ್ರಿಂಟರ್ಸ್ ಹಿಂಭಾಗ, ಡೋ. ನಂ. 1656/11 ನಿವಾಸಿ ದಿ. ಮಾಗನೂರು ರುದ್ರಪ್ಪನವರ ಧರ್ಮಪತ್ನಿ

**ಶ್ರೀಮತಿ ಗಂಗಮ್ಮ ಎಂ. ಮಾಗನೂರು**

ಇವರು ದಿನಾಂಕ 27.10.2024ರ ಭಾನುವಾರ ಮಧಾಹ್ನ 12.15 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 92 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ದಿನಾಂಕ 28.10.2024ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ಗ್ಲಾಸ್ ಹೌಸ್ ಹತ್ತಿರದ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

**ದುಃಖತಪ್ತ ಕುಟುಂಬ ವರ್ಗ, ಮೊ.99807 26269, 86186 53083**

## ಸಲ್ಲಳ್ಳಿ ಪಾಂಡುರಂಗಪ್ಪ ನಿಧನ



ದಾವಣಗೆರೆ ಸಿಟಿ ವಿನೋಬನಗರ 3ನೇ ಮೇನ್, 11 ನೇ ಕ್ರಾಸ್ ವಾಸಿ ಸಲ್ಲಳ್ಳಿ ಪಾಂಡುರಂಗಪ್ಪ (55) ರವರು ದಿನಾಂಕ 27.10.2024ರ ಭಾನುವಾರ ಮಧ್ಯಾಹ್ನ 3.15 ಗಂಟೆಗೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 28.10.2024ರ ಸೋಮವಾರ 12 ಗಂಟೆಗೆ ಬೂದಾಳ್ ರೋಡ್, ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ನೇತ್ರ ದಾನ ಶ್ರೇಷ್ಠ ದಾನ

# ಗುಂಪುಗಾರಿಕೆ ವಿರುದ್ಧ ನಿಷ್ಠಾವಂತ ಕಾರ್ಯಕರ್ತರ ಆಕ್ರೋಶ

**(1ನೇ ಪುಟದಿಂದ)**

ಜಿಗುಪ್ಸೆಯಾಗುವಂತೆ ವರ್ತಿಸುತ್ತಿದ್ದಾರೆ. ಜಿಲ್ಲೆಯ ಇಬ್ಬರು ಹಿರಿಯ ನಾಯಕರ ನಡುವೆ ಭಿನ್ನಾಭಿ ಪ್ರಾಯ ಮೂಡಿಸಿ ಮತ್ತೆ ಮತ್ತೆ ಅವರಿ ಬ್ಬರ ನಡುವೆ ತಂದಿಡುವ ಕೆಲಸ ಮಾಡಿ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಪತ್ರಿಕಾ ಗೋಷ್ಠಿ ಮೂಲಕ ಮಾಧ್ಯಮಗಳಲ್ಲಿ ಹೇಳಿಕೆ ಕೊಡುವುದು, ತಾವಿದ್ದರೆ ಮಾತ್ರ ಪಕ್ಷ, ತಾವು ಇಲ್ಲದಿದ್ದರೆ ಪಕ್ಷವೇ ಇಲ್ಲ ಎಂಬಂತೆ ವರ್ತಿಸುತ್ತಿದ್ದಾರೆ.

ರಾಜ್ಯದಲ್ಲಿ ಆಡಳಿತದಲ್ಲಿರುವ ಕಾಂಗ್ರೆಸ್ ಪಕ್ಷದ ಅಧಿಕಾರದಲ್ಲಿ ಅಭಿವೃದ್ಧಿ ಎಂಬುದು ಮರೀಚಿಕೆಯಾಗಿದೆ. ಅಧಿಕಾರಕ್ಕೇರಲು ಕಾರಣವಾದ ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ಕಾಂಗ್ರೆಸ್ ಸರ್ಕಾರ ದರ ಏರಿಕೆ ಕ್ರಮ ಅನುಸರಿಸುತ್ತಿದೆ ಎಂಬಂತೆ ಹಾಲು, ಬಸ್ಸು, ವಿದ್ಯುತ್, ಪೆಟ್ರೋಲ್, ಅಬಕಾರಿ ಸುಂಕ, ಮನೆ ಕಂದಾಯ, ದೃಢೀಕೃತ ನಕಲು ಪ್ರತಿಗಳ ದರ, ಛಾಪಾ ಕಾಗದಗಳ ಬೆಲೆ ಸೇರಿದಂತೆ ರೈತರ ಪಂಪ್‌ಸೆಟ್‌ಗಳಿಗೆ ಬೇಕಾಗುವ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ಬೆಲೆ ಏರಿಕೆ, ಹೀಗೆ ಎಲ್ಲಾ ರೀತಿಯ ಬೆಲೆ ಏರಿಕೆಯ ಬರೆ ನೀಡುತ್ತಾ ರಾಜ್ಯದ ಜನತೆಗೆ ಹಿಂಸೆ ನೀಡುತ್ತಿದೆ. ರಾಜ್ಯದಲ್ಲಿ ಇತ್ತೀಚಿಗೆ ಸುರಿದ ಅತಿವೃಷ್ಟಿ ಯಿಂದಾಗಿ ರೈತರಿಗೆ ತಾವು ಬೆಳೆದ ಬೆಳೆ ಕೈಗೆ ಬಂದರೂ ಬಾಯಿಗೆ ಬಾರದಂತಾಗಿದೆ. ರೈತರ ನೆರವಿಗೆ ಬಾರದ ಸರ್ಕಾರ, ಅಭಿವೃದ್ಧಿ ಶೂನ್ಯ ಸರ್ಕಾರದ ವಿರುದ್ಧ ಜನಪರ ಹೋರಾಟಕ್ಕೆ ನಿರ್ಧರಿಸಲಾಯಿತು. ಅದಕ್ಕಾಗಿ ಎಲ್ಲಾ ವಾರ್ಡ್‌ಗಳಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ ಜನರ ಬಳಿ ತೆರಳಿ ಪಕ್ಷದ ಸಂಘಟನೆಗೆ ನಿರ್ಧರಿಸಲಾಯಿತು.



ಭಿನ್ನಮತಕ್ಕೆ ಕಾರಣವಾಗುತ್ತಿರುವ ಸ್ವಾರ್ಥ ಮುಖಂಡರ ವಿರುದ್ಧ ರಾಜ್ಯ ನಾಯಕರಿಗೆ ಮತ್ತು ರಾಷ್ಟ್ರ ನಾಯಕರಿಗೆ ನಿಯೋಗದ ಮೂಲಕ ಮನವಿ ಪತ್ರ ಸಲ್ಲಿಸಿ, ಅವರ ವಿರುದ್ಧ ಕ್ರಮ ಕೈಗೊಳ್ಳಲು ಒತ್ತಾಯಿಸಲು ನಿರ್ಧರಿಸಲಾಯಿತು.

ಮಾಜಿ ಉಪಮಹಾಪೌರರು ಹಾಗೂ ಉತ್ತರ ವಿಧಾನಸಭಾ ಕ್ಷೇತ್ರದ ಮಾಜಿ ಅಧ್ಯಕ್ಷ ಪಿ.ಎಸ್. ಜಯಣ್ಣ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಾಜಿ ಮಹಾಪೌರರಾದ ಕೆ.ಆರ್. ವಸಂತ್ ಕುಮಾರ್, ಎಚ್.ಎನ್. ಗುರುನಾಥ್ ಪಾಲಿಕೆಯ ಮಾಜಿ ಸದಸ್ಯರುಗಳಾದ ಹೆಚ್.ಎನ್. ಶಿವಕುಮಾರ್, ಸಂಕೋಳ್ ಚಂದ್ರಶೇಖರ್, ಜಿ. ಸುರೇಶ್, ಶಿವನಹಳ್ಳಿ ರಮೇಶ್,

ದೂಡಾ ಮಾಜಿ ಅಧ್ಯಕ್ಷ ಎ.ವೈ. ಪ್ರಕಾಶ್, ಮುಖಂಡರುಗಳಾದ ಕೊಂಡಜ್ಜಿ ಜಯಪ್ರಕಾಶ್, ಶಿವರಾಜ್ ಪಾಟೀಲ್, ಬಿ.ಜಿ. ಸಿದ್ದೇಶ್, ಬೇತೂರು ಬಸವರಾಜ್, ರಘು, ಆದಿನಾಥ್, ಮುಪ್ಪಣ್ಣ, ಗುಡ್ಡಪ್ಪ, ಸಿದ್ದರಾಮಪ್ಪ, ಹನುಮಂತರಾವ್, ಅಮರೇಶ್ ಮತ್ತಿತರರು ಇದ್ದರು.

ಹಳೆ ಊರಲ್ಲಿನ ಹಳೆಯ ಕಾಲದ ದೀಪಾವಳಿ ಸ್ವಾರಸ್ಯಗಳು...



## ನಮ್ಮ ಬಾಲ್ಯದಲ್ಲಿನ ದೀಪಾವಳಿಯ ಕೆಲವು ಸ್ವಾರಸ್ಯಗಳು ಹಾಗೂ ನೆನಪುಗಳು

# 'ಒದ್ದೆ ಪಟಾಕಿ ಅರೆದವ ವಿದೇಶದಲ್ಲಿ ಮೆರೆದ ?!

**ಹೆಚ್.ಬಿ. ಮಂಜುನಾಥ್**
ಹಿರಿಯ ಪತ್ರಕರ್ತ, ದಾವಣಗೆರೆ.

ದಶಕಗಳ ಹಿಂದೆ ದೀಪಾವಳಿ ಪಟಾಕಿಗಳೆಂದರೆ ಕಿವಿ ಗಡ ಚಿಕ್ಕುವ 'ಢಮ್ ಢಮ್' ಶಬ್ದಗಳಿಗೆ ಆದ್ಯತೆ ಇಲ್ಲದೇ ಕಣ್ಣಿಗೆ ಹಬ್ಬ ನೀಡುವ ಹೂ ಮತಾಪುಗಳೇ ಹೆಚ್ಚಾಗಿ ಬಳಕೆಯಲ್ಲಿದ್ದವು. ಈಗಿನಂತೆ ಅಗ್ಗದ ನೆಪದಲ್ಲಿ ಅಪಾಯಕಾರಿ ಚೀನಾ ದೇಶದ ಪಟಾಕಿಗಳೂ ಆಗ ಇರಲಿಲ್ಲ. ದೇಶೀಯ ಪಟಾಕಿಗಳು ಪ್ರಾದೇಶಿಕ ಹೆಸರುಗಳಲ್ಲಿ ಬಿಕರಿಯಾಗುತ್ತಿದ್ದವು.

ಹನುಮಂತನ ಬಾಲ, ಹಾವಿನ ಗುಳಿಗೆ, ನಕ್ಷತ್ರಕಡ್ಡಿ, ಮಸಿ ಕುಡಿಕೆ, ಪೆಟ್ಲುಸರ, ಭೂ ಚಕ್ರ, ವಿಷ್ಣುಚಕ್ರ, ಆಕಾಶಬಾಣ, ಬೆಳ್ಳುಳ್ಳಿ, ಕುಬಸದ ಕಣ, ಸುರ್ಸುರ್ ಬತ್ತಿ, ನೆಲಗುಮ್ಮ, ಮೆಣಸಿನಕಾಯಿ, ದಢಾಕಿ, ಗರ್ನಾಲು ಮುಂತಾಗಿ ಪ್ರಾದೇಶಿಕ ಹೆಸರುಗಳಿದ್ದವೇ ಹೊರತು ಫ್ಲವರ್ ಪಾಟ್, ಗ್ರೌಂಡ್ ವೀಲ್, ಸ್ಪಾರ್ಕ್ಲರ್ಸ್, ಪೀ ಕ್ರಾಕರ್ಸ್, ಬಾಸ್ ಬಾಂಬ್, ಸರ್ಪೆಂಟ್ ಎಗ್, ರೋಮನ್ ಕ್ಯಾಂಡಲ್, ಸ್ಮೋಕ್ ಬಾಂಬ್, ರಾಕೆಟ್ ಬಾಂಬ್, ಜೂಟ್ ಟ್ವೈನ್ ಬಾಂಬ್, ಗಾರ್ಲ್ಯಾಂಡ್ ಎಂಬ ಹೆಸರುಗಳೇ ಇರಲಿಲ್ಲ.

ಮಾರುದ್ದ ಮೈಲುದ್ದದ ಪಟಾಕಿ ಸರಗಳನ್ನು ಆಗ ಅಷ್ಟಾಗಿ ಯಾರೂ ಹಚ್ಚುತ್ತಿರಲಿಲ್ಲ. ಹಾಗೆ 'ಡಮ್ ಢಮ್' ಮಾಡಿದರೆ ಯಾವ ಪಿಶಾಚಿಯೂ ಓಡಿ ಹೋಗುವುದೂ ಇಲ್ಲ, ಯಾವ ಲಕ್ಷ್ಮಿಯೂ ಓಡಿ ಬರುವುದೂ ಇಲ್ಲ, ಹಕ್ಕಿ ಪಕ್ಷಿಗಳು ಹೆದರಿ ಹೋಗುತ್ತವೆ. ನಮ್ಮ ಕಿವಿಗಳಿಗೆ ನಿಧಾನವಾಗಿ ಕಿವುಡುತನ ಬರುತ್ತದೆ ಅಷ್ಟೇ.

ನಮ್ಮ ಬಾಲ್ಯದಲ್ಲಿ ನಾನು ಕಂಡ ಹಾಗೆ ಮಂಡಿಪೇಟೆಯ ಕಾಸಲ ಶ್ರೀನಿವಾಸ



ಶ್ರೇಷ್ಠಿಯವರ ಅಂಗಡಿಯ ಆಜುಬಾಜಿನಲ್ಲಿ ಯಾರೋ ಒಬ್ಬರು ಸುಮಾರು ಮೂರ್ನಾಲ್ಕು ಮಾರುದ್ದದ ಪಟಾಕಿ ಸರವನ್ನು ಉದ್ದದ ಬಂಬೊವೊಂದಕ್ಕೆ ಕಟ್ಟಿ ನೇತುಬಿಟ್ಟು ಮಹಡಿಯ ಮೇಲೆ ನಿಂತು ಅದನ್ನು ಸಿಡಿಸುತ್ತಿದ್ದರು. ಇದನ್ನು ನೋಡಲು ಮಕ್ಕಳು ದೊಡ್ಡವರು ಎಲ್ಲರೂ ಅಲ್ಲಿ ಸೇರುತ್ತಿದ್ದರು. ಪಟಾಕಿಗಳೆಲ್ಲಾ ಸುಟ್ಟ ಮೇಲೆ ಅನೇಕ ಪಟಾಕಿಗಳು ಸಿಡಿಯದೇ ಹಾಗೆ ಬಿದ್ದಿರುತ್ತಿದ್ದವು. ಅದನ್ನೆಲ್ಲಾ ಮಕ್ಕಳು ಆಯ್ದುಕೊಂಡು ಹೋಗಿ ಹೊರಗಿನ ಕಾಗದದ ಸುರಳಿಯನ್ನೆಲ್ಲಾ ಕಲ್ಲಿನಿಂದ ಜಜ್ಜಿ ಒಳಗಿನ ಮದ್ದು ಪುಡಿ, ತೆಗೆದು ಅದನ್ನು ಕಾಗದದಲ್ಲಿ ಸುತ್ತಿ ಬೆಂಕಿ ಕೊಟ್ಟಾಗ ಅದು ಸಣ್ಣ ಮಸಿ ಕುಡಿಕೆಯಂತೆ ಉರಿಯುತ್ತಿತ್ತು.

ಒಮ್ಮೆ ಹಳೆಪೇಟೆ ಆಸುಪಾಸಿನ ಕಡೆಯ ಬಾಲಕ ಬಹುಷಃ ಶ್ರೀಧರ ಎಂದಿರಬೇಕು. ಅರೆಬರೆ ಸುಟ್ಟ ಪಟಾಕಿಗಳನ್ನು ಆರಿಸಿಕೊಂಡು ಹೋಗಿ ಮನೆಯಲ್ಲಿ ಇಟ್ಟಿದ್ದ. ಅದನ್ನು ಜಜ್ಜಿ ಕುಟ್ಟಿ ಮದ್ದು ತೆಗೆಯಲು ಹೋಗಿ ಮಗ ಏನಾದರೂ ಅಪಾಯ ಮಾಡಿಕೊಂಡಾನೆಂದು ತಾಯಿ ನಾಗರತ್ನಮ್ಮ ಅದಕ್ಕೆ ನೀರು ಹಾಕಿದರಂತೆ. ಒದ್ದೆ ಮುದ್ದೆಯಾದ ಪಟಾಕಿಗಳನ್ನು ನೋಡುತ್ತಾ ಶ್ರೀಧರ ಅಳುತ್ತಲೇ ಅದನ್ನು ಕಲ್ಲಿನಿಂದ ಚೆನ್ನಾಗಿ ಜಜ್ಜಿದನಂತೆ. ಒದ್ದೆಯಾದ ಪಟಾಕಿಗಳಿಗೆ ಸುತ್ತಿದ ಕಾಗದದ ಸುರಳಿಗಳು ಒಂದು ರೀತಿ ಗಟ್ಟಿ ಪೇಸ್ಟ್ ನಂತಾಯಿತು.

ಆ ಪೇಸ್ಟಿನಿಂದ ಶ್ರೀಧರ ಮಸಿ ಕುಡಿಕೆಯ ಆಕಾರ ಮಾಡಿ ಒಣಗಿಸಿ ಅದಕ್ಕೆ ಬಣ್ಣ ಕೊಟ್ಟನಂತೆ!, ಅದು ಎಷ್ಟು ಚೆನ್ನಾಗಿ ಬಂದಿತೆಂದರೆ ನಾಗರತ್ನಮ್ಮ ಅದನ್ನು ಆಚೀಚೆ ಮನೆಯವರಿಗೆಲ್ಲಾ ತೋರಿಸಿದರಂತೆ. ಎಲ್ಲರೂ ಶ್ರೀಧರನ ಆ ಪೇಪರ್ ಪೇಸ್ಟ್ ಕಲೆಗಾರಿಕೆಯನ್ನು ಕೊಂಡಾಡಿದಾರಂತೆ. ಇದನ್ನೆಲ್ಲಾ ನಾಗರತ್ನಮ್ಮನೇ ಹೇಳುತ್ತಿದ್ದರು.

ಅದಾಗಿ ಕೆಲ ದಶಕಗಳ ಬಳಿಕ ಯಾರೋ ಹೇಳಿದರು, ಶ್ರೀಧರ ಪೇಪರ್ ಪಲ್ಪಿನ ಕಲೆಗಾರಿಕೆಯಲ್ಲಿ ಅಪಾರ ನೈಪುಣ್ಯತೆ ಸಾಧಿಸಿ, ಯಾವುದೋ ಪಾಶ್ಚಿಮಾತ್ಯ ದೇಶದಲ್ಲಿ ಉತ್ತಮ ಬದುಕು ಕಟ್ಟಿಕೊಂಡಿದ್ದಾನೆ. ತಾಯಿ - ಮಗ ಫಾರಿನ್‌ನಲ್ಲಿ ಚೆನ್ನಾಗಿದ್ದಾರೆ ಎಂದು **'ಒದ್ದೆ ಪಟಾಕಿ ಅರೆದವ ವಿದೇಶದಲ್ಲಿ ಮೆರೆದ!'.**

# ನ್ಯಾಯದೇವತೆ ಚಿಹ್ನೆ ಬದಲಾವಣೆ




ಕೋರ್ಟ್‌ಗಳಲ್ಲಿ ಈ ಹಿಂದೆ ಇದ್ದ ನ್ಯಾಯದೇವತೆ ಚಿಹ್ನೆಯನ್ನು ಯಥಾವತ್ತಾಗಿ ಉಳಿಸಿಕೊಳ್ಳಬೇಕೆಂಬುದೇ ನನ್ನ ಆಶಯವಾಗಿದೆ. ಕಾರಣ ಕೋರ್ಟ್ ಹಾಲ್‌ನಲ್ಲಿ ನೀಡುವ ತೀರ್ಪು ಏಕಪಕ್ಷೀಯ ಹಾಗೂ ಸ್ವಜನಪಕ್ಷಪಾತಿಯಾಗಿರಬೇಕೆಂಬ ಕಾರಣದಿಂದ ನ್ಯಾಯದೇವತೆಯ ಮುಖಕ್ಕೆ (ಕಣ್ಣಿಗೆ) ಬಟ್ಟೆ ಕಟ್ಟಿರುತ್ತಾರೆ.

ಅಂದರೆ ವಕೀಲರ ವಾದ-ವಿವಾದದ ನಂತರ ಜಡ್ಜ್‌ಗಳು ತಮ್ಮ ವಿವೇಚನಾ ಶಕ್ತಿ ಮತ್ತು ಕಾನೂನಾತ್ಮಕವಾಗಿ ತೀರ್ಪು ಕೊಡಬೇಕು ಮತ್ತು ತಪ್ಪು ಮಾಡಿದ, ಅನ್ಯಾಯ ಮಾಡಿದ, ಕೊಲೆ-ಸುಲಿಗೆ ಮಾಡಿದ ವ್ಯಕ್ತಿಗಳಿಗೆ ಕಾನೂನಾತ್ಮ ಕವಾಗಿ ಶಿಕ್ಷೆ ಕೊಡಬೇಕೆಂಬ ಸಂಕೇತವೇ ನ್ಯಾಯ ದೇವತೆಯ ಎಡಗೈನಲ್ಲಿದ್ದ ಕತ್ತಿಯ ಸೂಚನೆಯಾಗಿರುತ್ತದೆ.

ಈ ಅಂತಾರ್ಥವನ್ನು ಅರಿಯದೇ ಕಾನೂನು ಕುರುಡು ಅದು ಅಮಾಯಕರಿಗೆ ಶಿಕ್ಷೆ ಕೊಡುತ್ತದೆ. ಆದ್ದರಿಂದ ನ್ಯಾಯದೇವತೆಯ ಕಣ್ಣಿಗೆ ಕಟ್ಟಿರುವ ಬಟ್ಟೆ ತೆಗೆಯಲಾಗಿದೆಯೇ? ಮತ್ತು ಈಗಿನ ಸರ್ಕಾರಗಳು ಸಂವಿಧಾನವನ್ನು ಉಲ್ಲಂಘಿಸುತ್ತಿವೆ. ಅದರ ನೆನಪನ್ನು ಮಾಡುವ ಉದ್ದೇಶದಿಂದ ಆಕೆಯ ಕೈಯಲ್ಲಿ ಸಂವಿಧಾನ ಪುಸ್ತಕವನ್ನು ಇಟ್ಟಿರುವರೆ? ಎಂಬ ಸಂಶಯ ಕಾಡುತ್ತಿದೆ.

ಈ ಹಿಂದೆ ಕೋರ್ಟ್‌ನಲ್ಲಿ 'ಭಗವದ್ಗೀತೆ'ಯ ಪುಸ್ತಕವನ್ನು ಮುಟ್ಟಿ ಪ್ರಮಾಣ ಮಾಡಬೇಕಿತ್ತು. ಆದರೆ ಓಟು ಬ್ಯಾಂಕಿನ ಭಯದಿಂದ ಇಂದು ಭಗವದ್ಗೀತೆಯ ಪುಸ್ತಕದ ಮೇಲೆ ಕೈಇಟ್ಟು ಪ್ರಮಾಣ ಮಾಡುವ ಪದ್ಧತಿ ನಿಂತು ಹೋಗಿದೆ.

ನ್ಯಾಯದೇವತೆಯ ಕಣ್ಣಿಗೆ ಕಟ್ಟುವುದು ಮತ್ತು ಆಕೆಯ ಎಡಗೈನಲ್ಲಿ ಖಡ್ಗ ಹಿಡಿದಿರುವಂತೆಯ ಮುಂದುವರೆಸ ಬೇಕೆಂಬ ವಿಚಾರವಾಗಿ ನಾನು ಈ ಕೆಳಕಂಡ ಕಥೆಯನ್ನು ಬರೆಯುತ್ತಿರುವೆ.

ಒಂದು ಊರಿನಲ್ಲಿ ಒಬ್ಬ ರಾಜನಿದ್ದ. ಆತನು ಧರ್ಮದಿಂದ, ನ್ಯಾಯಪರತೆಯಿಂದ ರಾಜ್ಯವನ್ನು ಆಳುತ್ತಿದ್ದ. ಕಾಲಕಾಲಕ್ಕೆ ತನ್ನ ಪ್ರಜೆಗಳಿಗೆ ಆಗುತ್ತಿದ್ದ ತೊಂದರೆ / ಸಮಸ್ಯೆಗಳಿಗೆ ಶೀಘ್ರವೇ ಸ್ಪಂದಿಸಿ, ಶೀಘ್ರವೇ ಪ್ರಜೆಗಳಿಗೆ ನ್ಯಾಯವನ್ನು ದೊರಕಿಸಿ ಕೊಡುತ್ತಿದ್ದ. ಹೀಗಿರಲಾಗಿ ಒಮ್ಮೆ ಅವರ ರಾಜ್ಯಕ್ಕೆ ಪ್ರಖ್ಯಾತ ದರೋಡೆಕಾರರು ಆಗಮಿಸಿದರು. ಒಂದು ಹಂತದಲ್ಲಿ ರಾಜನ ಮಗನ ಸಖ್ಯವನ್ನು ಬೆಳೆಸಿದ ದರೋಡೆಕೋರರು ರಾಜನ ಮಗನಿಂದ ಗ್ರಾಮದ ವಿಚಾರಗಳನ್ನು ತಿಳಿದುಕೊಂಡು, ಆ ಗ್ರಾಮದ ಜನರಿಗೆ ಪೀಡಿಸಿ-ಕಾಡಿಸಿ ಅವರಲ್ಲಿ ಇದ್ದುದೆಲ್ಲವನ್ನು ಚಾಣಾಕ್ಷತನದಿಂದ ದೋಚುತ್ತಿದ್ದರು. ಇವರ ಉಪಟಳವನ್ನು ರಾಜರಿಗೆ ತಿಳಿಸಬೇಕೆಂದುಕೊಂಡರು.

ರಾಜನ ಮಗನೆ ದರೋಡೆಕೋರರಿಗೆ ಸಹಾಯಕನಾಗಿರುವ ವಿಷಯ ತಿಳಿದು ಸುಮ್ಮನಾದರು. ಆದರೆ ದಿನೇ ದಿನೇ ಅವರ ಉಪಟಳ ಜಾಸ್ತಿಯಾದಾಗ ನಿರ್ವಾಹವಿಲ್ಲದೆ ರಾಜನ ಬಳಿ ಬಂದು ನಿಯೋಗ ಹೊರಟು ಇದ್ದ ವಿಷಯವನ್ನು ತಿಳಿಸಿದರು. ಆ ದರೋಡೆಕೋರರಿಗೆ ತನ್ನ ಮಗ ಸಹಾಯಕನಾಗಿರುವ ವಿಷಯ ತಿಳಿದು ಚಿಂತಿತನಾದ, ಪುತ್ರವಾತ್ಸಲ್ಯಕ್ಕಿಂತ ಪ್ರಜೆಗಳ ಹಿತವೇ ಕ್ಷೇಮ ಎಂದು ಭಾವಿಸಿ, ಒಂದು ರಾತ್ರಿ ಮಾರು ವೇಷದಲ್ಲಿ ದರೋಡೆಕೋರರು ಆಗಮಿಸುವ ಸ್ಥಳದಲ್ಲಿ ತನ್ನ ರಾಜಭಟರೊಂದಿಗೆ ಕಾಯುತ್ತಿದ್ದ.

ಇದನ್ನು ಅರಿಯದ ದರೋಡೆ ಕೋರರು ರಾಜಭಟರ ಕೈಗೆ ಸಿಲುಕಿ ಕೊಂಡರು. ಅವರೆಲ್ಲರನ್ನು ಗೋಣಿ ಚೀಲ ದಲ್ಲಿ ಪ್ರತ್ಯೇಕ, ಪ್ರತ್ಯೇಕವಾಗಿ ಬಂದಿಸಿ, ಮಾರನೇ ದಿನ ರಾಜನ ಆಸ್ಥಾನದಲ್ಲಿ ಅವರನ್ನು ಹಾಜರುಪಡಿಸಲಾಗಿತ್ತು. ಆಗ ಸ್ವತಃ ರಾಜನೇ ತನ್ನ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಗೋಣಿಚೀಲದಲ್ಲಿರುವ ಡಕಾಯಿತರುಗಳಿಗೆ ಛಡಿ ಏಟನ್ನು ನೀಡಲಾರಂಭಿಸಿದ.

ಇದನ್ನೆಲ್ಲವನ್ನು ಮೂಕ ಪ್ರೇಕ್ಷಕರಂತೆ ನೋಡುತ್ತಿದ್ದ ಸಭಾ ಸದಸ್ಯರು, ಕುತೂಹಲ ತಾಳಲಾರದೆ ರಾಜನನ್ನು ಪ್ರಶ್ನಿಸಿದರು. ಹೇ ರಾಜನ್ ತಾವು ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಏಕೆ ಛಡಿಏಟು ನೀಡಿದಿರಿ ಎಂದು ಪ್ರಶ್ನಿಸಿದರು. ಆಗ ರಾಜನ ಮಾತು ಮಾರ್ಮಿಕವಾಗಿತ್ತು ಮತ್ತು ಗಂಭೀರವಾಗಿತ್ತು.

ಒಂದು ವೇಳೆ ಈ ಮೂಟೆಗಳಲ್ಲಿ ನನ್ನ ಮಗ ಇದ್ದರೆ ನಾನು ಅವನನ್ನು ದಂಡಿಸಲು ಆಗುತ್ತಿರಲಿಲ್ಲ. ಪುತ್ರವಾತ್ಸಲ್ಯವು ಅವನಿಗೆ ಶಿಕ್ಷೆ ಕೊಡಲು ಹಿಂಜರಿಯುತ್ತಿತ್ತು. ಹಾಗಾಗಿ ನಾನು ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಶಿಕ್ಷಿಸಿದೆನು ಎಂದನು. ಆತನ ನ್ಯಾಯನಿಷ್ಠುರತೆ ಕಂಡ ಪುರಜನರು ರಾಜನಿಗೆ ಜೈಕಾರ ಹಾಕಿದರು.

ಆದ್ದರಿಂದ ಕೋರ್ಟ್ ಹಾಲ್‌ಗಳಲ್ಲಿ ಈ ಮುಂಚೆಯೇ ಇದ್ದಂತೆ ನ್ಯಾಯದೇವತೆಯನ್ನು ಅಲಂಕರಿಸಬೇಕು ಎಂಬುದು ನನ್ನ ಆಶಯವಾಗಿದೆ.

**- ಸಿ. ಕೆ. ಆನಂದತೀರ್ಥಾಚಾರ್,**
ದಾವಣಗೆರೆ.

## ಸರ್ಕಾರಿ ನೌಕರರ ಸಂಘಕ್ಕೆ ಚುನಾವಣೆ

ದಾವಣಗೆರೆ,ಅ. 27- ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆಯ ಕಾರ್ಯಕಾರಿ ಸಮಿತಿ ನಿರ್ದೇಶಕರ ಚುನಾವಣೆ ನವೆಂಬರ್ 16ರಂದು ನಗರದ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿರುವ ಸರ್ಕಾರಿ ಬಾಲಕರ ಪದವಿಪೂರ್ವ ಕಾಲೇಜಿನಲ್ಲಿ ನಡೆಯಲಿದೆ.

# ಗುಪ್ತಚರಕ್ಕೆ ಪತ್ತೆಯಾಗದೆ ಕಣಿವೆಯಲ್ಲಿ ನುಸುಳುವಿಕೆ

ನವದೆಹಲಿ, ಅ. 27 - ಕಳೆದ ಒಂದು ವರ್ಷದಲ್ಲಿ ನಿಯಂತ್ರಣ ರೇಖೆಯಲ್ಲಿ ಸಂಗ್ರಹಿಸಲಾದ ಗುಪ್ತಚರ ಮಾಹಿತಿ ಹಾಗೂ ಪತ್ತೆ ಮಾಡದೇ ನಡೆದಿರುವ ನುಸುಳಿಯುಕೆ ನಡುವೆ ಸಾಕಷ್ಟು ಅಂತರ ಇದೆ ಎಂದು ಕಾಶ್ಮೀರದಲ್ಲಿ ಇತ್ತೀಚಿಗೆ ನಡೆದ ಉಗ್ರವಾದಿ ದಾಳಿಗಳು ಇಂಗಿತ ವ್ಯಕ್ತಪಡಿಸುತ್ತಿವೆ.

ಕಳೆದ ಅಕ್ಟೋಬರ್ 20ರಂದು ಉಗ್ರರು ಜಮ್ಮು ಮತ್ತು ಕಾಶ್ಮೀರದ ಗಗನಗಿರ್ ಎಂಬಲ್ಲಿ ದಾಳಿ ನಡೆಸಿ ಸ್ಥಳೀಯ ವೈದ್ಯ ಹಾಗೂ ಬಿಹಾರದ ಇಬ್ಬರು ಕಾರ್ಮಿಕರು ಸೇರಿದಂತೆ ಏಳು ಜನರನ್ನು ಹತ್ಯೆ ಮಾಡಿದ್ದರು. ಕಳೆದ ವರ್ಷದಲ್ಲಿ ಸ್ಥಳೀಯ ಯುವಕರು ಉಗ್ರವಾದಿ ಸಂಘಟನೆಗಳಿಗೆ ಸೇರಿರುವ ಮಾಹಿತಿ ಗುಪ್ತಚರ ಸಂಸ್ಥೆಗಳಿಗೆ ಲಭ್ಯವಾಗದೆ ಇರಬಹುದು ಎಂಬ ಕಳವಳ ವ್ಯಕ್ತವಾಗುತ್ತಿದೆ.

ಅಕ್ಟೋಬರ್ 20ರಂದು ಸುರಂಗ ನಿರ್ಮಾಣ ಕಾಮಗಾರಿ ಕೈಗೊಳ್ಳುತ್ತಿದ್ದವರ ಮೇಲೆ ಉಗ್ರರು ದಾಳಿ ನಡೆಸಿದ್ದರು. ದಾಳಿಯಲ್ಲಿ ಭಾಗಿಯಾದ ಇಬ್ಬರ ಪೈಕಿ ಓರ್ವ ದಕ್ಷಿಣ ಕಾಶ್ಮೀರದ ಕುಲ್ಗಾಂ ಎಂಬಲ್ಲಿನ ಸ್ಥಳೀಯ ಯುವಕ. ಈತ 2023ರಲ್ಲಿ ಉಗ್ರವಾದಿ ಸಂಘಟನೆಗೆ ಸೇರ್ಪಡೆಯಾಗಿದ್ದ. ಇನ್ನೋರ್ವ ಪಾಕಿಸ್ತಾನದಿಂದ ಬಂದಿದ್ದ ಎಂದು ಹೇಳಲಾಗುತ್ತಿದೆ.

ಕಾಶ್ಮೀರದ ಸ್ಥಳೀಯ ಯುವಕರಲ್ಲಿ ತೀವ್ರವಾದ ಹೆಚ್ಚಾಗುತ್ತಿರುವ ಬಗ್ಗೆ ಭದ್ರತಾ ಅಧಿಕಾರಿಗಳು ಎಚ್ಚರಿಕೆ ಗಂಟೆ ಭಾರಿಸಿದ್ದಾರೆ. ಇಂತಹ ವ್ಯಕ್ತಿಗಳನ್ನು ಗುರುತಿಸಲು ಮಾನವ ಗುಪ್ತಚರ ಬಲಪಡಿಸಬೇಕಿದೆ ಎಂದವರು ಅಭಿಪ್ರಾಯಪಟ್ಟಿದ್ದಾರೆ.

ಇತ್ತೀಚೆಗೆ ನಡೆದ ಉಗ್ರವಾದಿ ದಾಳಿಗಳಲ್ಲಿ ಸ್ಥಳೀಯ ಉಗ್ರರು, ಪಾಕಿಸ್ತಾನದಿಂದ ನುಸುಳುವಿಕೆಗೆ ನೆರವಾಗಿರಬಹುದು ಎಂದು ಅಧಿಕಾರಿಗಳು ಹೇಳಿದ್ದಾರೆ. ಕಳೆದ ವರ್ಷ ಡಿಸೆಂಬರ್ ನಂತರ ಕಾಶ್ಮೀರದ ಹಲವು ಭಾಗಗಳಲ್ಲಿ ನುಸುಳವಿಕೆ ಪ್ರಯತ್ನ ನಡೆದಿರುವುದನ್ನು ಗುಪ್ತಚರ ವರದಿಗಳು ತಿಳಿಸಿದ್ದವು. ಆದರೆ ಈ ವರದಿಗೆ ಸೂಕ್ತ ಮಾಹಿತಿಗಳು ಲಭ್ಯವಾಗದ ಕಾರಣ ಸೈನ್ಯ ನುಸುಳುವಿಕೆಯನ್ನು ನಿರಾಕರಿಸಿತ್ತು.

ಗುರುವಾರ ಬೊಟಾಪತ್ರಿ ಎಂಬಲ್ಲಿ ಉಗ್ರರು ದಾಳಿ ನಡೆಸಿ ಇಬ್ಬರು ಸೈನಿಕರು ಹಾಗೂ ಇಬ್ಬರು ಸೈನ್ಯದ ಪೋರ್ಟರ್‌ಗಳನ್ನು ಹತ್ಯೆಗೈದಿದ್ದರು. ಈ ಉಗ್ರರು ಆಗಸ್ಟ್ ಆರಂಭದಿಂದ ಅಫ್ರಾವತ್ ಎಂಬಲ್ಲಿ ಅವಿತಿದ್ದರು ಎನ್ನಲಾಗುತ್ತಿದೆ.

ಕಳೆದ ತಿಂಗಳು ಜಮ್ಮು ಮತ್ತು ಕಾಶ್ಮೀರದಲ್ಲಿ ಚುನಾವಣೆ ನಡೆದಿತ್ತು. ಈ ಹಿನ್ನೆಲೆಯಲ್ಲಿ ವ್ಯಾಪಕ ಭದ್ರತಾ ವ್ಯವಸ್ಥೆ ಕೈಗೊಂಡಿದ್ದ ಕಾರಣ, ಉಗ್ರವಾದಿ ಸಂಘಟನೆಗಳು ಸಕ್ರಿಯವಾಗಿರಲಿಲ್ಲ. ಚುನಾವಣೆ ನಂತರ ಮತ್ತೆ ಉಗ್ರವಾದಿ ಘಟನೆಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ, ತುರ್ತಾಗಿ ನಿಗಾ ವ್ಯವಸ್ಥೆ ಬಲಪಡಿಸುವ ಅಗತ್ಯವಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಇತ್ತೀಚಿಗೆ ಆನ್‌ಲೈನ್ ವೇದಿಕೆಗಳ ಮೂಲಕ ಯುವಕರನ್ನು ಉಗ್ರವಾದಕ್ಕೆ ಸೆಳೆಯಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕೆಲ ಸಾಮಾಜಿಕ ಜಾಲತಾಣ ವೇದಿಕೆಗಳನ್ನು ಜಮ್ಮು ಮತ್ತು ಕಾಶ್ಮೀರದ ಕೆಲ ಭಾಗಗಳಲ್ಲಿ ನಿಷೇಧಿಸಲಾಗಿದೆ.

# ಹಿರಿಯ ವಿದ್ಯಾರ್ಥಿಗಳ ಮಾರ್ಗದರ್ಶನ ಅಗತ್ಯ

## ಮಾಸಬ ಕಾಲೇಜಿನ 'ಸ್ನೇಹ ಸಮ್ಮಿಲನ' ಕಾರ್ಯಕ್ರಮದಲ್ಲಿ ಜಿ.ಸಿ ನೀಲಾಂಬಿಕ

ದಾವಣಗೆರೆ, ಅ.27- ಹಿರಿಯ ವಿದ್ಯಾರ್ಥಿಗಳು ಕಾಲೇಜಿನೊಂದಿಗೆ ನಿರಂತರ ಸಂಪರ್ಕ ಹೊಂದುವ ಮೂಲಕ ಕಿರಿಯ ವಿದ್ಯಾರ್ಥಿಗಳಿಗೆ ಉದ್ಯೋಗ ಮಾಹಿತಿ, ಸಮಾಜಮುಖಿಯಾಗಲು ಸೂಕ್ತ ಮಾರ್ಗದರ್ಶನ ನೀಡಬೇಕೆಂಬ ಆಶಯವನ್ನು ಮಾ.ಸ.ಬ ಕಲಾ ಮತ್ತು ವಾಣಿಜ್ಯ ಕಾಲೇಜಿನ ಪ್ರಾಂಶುಪಾಲರಾದ ಜಿ.ಸಿ. ನೀಲಾಂಬಿಕ ವ್ಯಕ್ತಪಡಿಸಿದರು.

ಕಾಲೇಜಿನಲ್ಲಿ ಮೊನ್ನೆ ಆಯೋಜಿಸಲಾಗಿದ್ದ 'ಸ್ನೇಹ ಸಮ್ಮಿಲನ' ಕಾರ್ಯಕ್ರಮದ ಅಧ್ಯಕ್ಷತೆ ಅವರು ಮಾತನಾಡಿದರು.

ಹಳೆಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಇಂದೂಧರ ನಿಶಾನಿಮಠ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿ, ಹಳೆಯ ವಿದ್ಯಾರ್ಥಿಗಳು ತಾವು ಓದಿದ ಕಾಲೇಜನ್ನು ಮರೆಯಬಾರದು, ಇಂತಹ ಕಾರ್ಯಕ್ರಮಗಳನ್ನು ಮಾಡುವ ಮೂಲಕ ಸಲಹೆ, ಸಹಕಾರ ನೀಡಬೇಕು ಎಂದು ಹೇಳಿದರು.

ಕಾರ್ಯದರ್ಶಿ ಇ. ಬಸವರಾಜ ಮಾತನಾಡಿ, ಕಾಲೇಜಿನ ಶಿಕ್ಷಣ ನಮ್ಮ ಬದುಕಿಗೆ ದಾರಿ ದೀಪವಾಗುತ್ತದೆ, ಒಂದು ರೀತಿ ಬದುಕಿಗೆ ಬಂಡವಾಳವೂ ಹೌದು ಎಂದು ಹೇಳಿದರು.

ರಾಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ. ಓ. ಪ್ರವೀಣ್ ಕುಮಾರ್ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಎಂ. ಮಂಜಪ್ಪ ವಂದಿಸಿದರು. ಹಳೆಯ ವಿದ್ಯಾರ್ಥಿ ಚೇತನ್ ಕುಮಾರ್ ಪ್ರಾರ್ಥಿಸಿದರು. ಕುಮಾರಿ ನಿಖಿತಾ ನಿರೂಪಿಸಿದರು.

ಈ ಸಂದರ್ಭದಲ್ಲಿ ಪ್ರೊ. ರಂಗಸ್ವಾಮಿ. ಟಿ. ಆರ್., ಡಾ. ವಿಜಯ್ ಕುಮಾರ್ ಎ. ಬಿ, ಡಾ. ರಾಘವೇಂದ್ರ ಆರ್, ಪ್ರೊ. ಈಶ್ವರ್ ಕೆ.ವೈ ಹಾಗೂ ಇತರರು ಉಪಸ್ಥಿತರಿದ್ದರು.



# ಚೌಕಾಸಿ ಸಾಮರ್ಥ್ಯ ಕಳೆದುಕೊಂಡ ಕಾಂಗ್ರೆಸ್

## ಮಹಾರಾಷ್ಟ್ರ, ಜಾರ್ಖಂಡ್‌ಗಳಲ್ಲಿ ಕಡಿಮೆ ಸ್ಥಾನಗಳಲ್ಲಿ ಸ್ಪರ್ಧೆ

ನವದೆಹಲಿ, ಅ. 27 – ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಸೋಲು ಕಂಡಿರುವ ಕಾಂಗ್ರೆಸ್, ಐ.ಎನ್.ಡಿ.ಐ.ಎ. ಮೈತ್ರಿಕೂಟದಲ್ಲಿ ಸ್ಥಾನಗಳಿಗಾಗಿ ಚೌಕಾಸಿ ಮಾಡುವ ಸಾಮರ್ಥ್ಯ ಕಳೆದುಕೊಂಡಿದೆ. ಮುಂದಿನ ತಿಂಗಳು ನಡೆಯಲಿರುವ ಮಹಾರಾಷ್ಟ್ರ ಹಾಗೂ ಜಾರ್ಖಂಡ್ ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಅತಿ ಕಡಿಮೆ ಸ್ಥಾನಗಳಲ್ಲಿ ಸ್ಪರ್ಧಿಸುವ ಸಾಧ್ಯತೆ ಇದೆ.

ಎರಡೂ ರಾಜ್ಯಗಳಲ್ಲಿ ಸ್ಥಾನಗಳ ಹಂಚಿಕೆಗಾಗಿ ಮಾತುಕತೆ ನಡೆಯುತ್ತಿದೆ. ಆದರೆ, 288 ಸದಸ್ಯರ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 110ಕ್ಕೂ ಕಡಿಮೆ ಸ್ಥಾನಗಳಲ್ಲಿ ಸ್ಪರ್ಧಿಸುವ ಸಾಧ್ಯತೆ ಇದೆ.

2019ರಲ್ಲಿ ಕಾಂಗ್ರೆಸ್ ಮಹಾರಾಷ್ಟ್ರದಲ್ಲಿ 147 ಸ್ಥಾನಗಳಲ್ಲಿ ಸ್ಪರ್ಧಿಸಿತ್ತು ಹಾಗೂ 44 ಸ್ಥಾನಗಳಲ್ಲಿ ಗೆಲುವು ಸಾಧಿಸಿತ್ತು. ಅವಿಭಜಿತ ಶಿವಸೇನೆ 126 ಕ್ಷೇತ್ರಗಳಲ್ಲಿ ಸ್ಪರ್ಧಿಸಿ 56 ಕ್ಷೇತ್ರಗಳಲ್ಲಿ ಗೆದ್ದಿತ್ತು. ಅವಿಭಜಿತ ಎನ್.ಸಿ.ಪಿ. 121 ಕ್ಷೇತ್ರಗಳಲ್ಲಿ ಸ್ಪರ್ಧಿಸಿ 54 ಸ್ಥಾನ ಪಡೆದಿತ್ತು. ಬಿಜೆಪಿ 164 ಕ್ಷೇತ್ರಗಳಲ್ಲಿ ಸ್ಪರ್ಧಿಸಿ 105 ಸ್ಥಾನ ಪಡೆದಿತ್ತು.

ಮುಂಬೈ ಪ್ರಾಂತ್ಯವು ಕಾಂಗ್ರೆಸ್ ಬಿಗಿ ಹಿಡಿತದಲ್ಲಿತ್ತು. ಇಲ್ಲೂ ಸಹ ಸಾಕಷ್ಟು ಸ್ಥಾನಗಳನ್ನು ಕಾಂಗ್ರೆಸ್ ತನ್ನ ಮಿತ್ರ ಪಕ್ಷವಾದ ಶಿವಸೇನೆ (ಯು.ಬಿ.ಟಿ) ಗೆ ಬಿಟ್ಟು ಕೊಡಲಿದೆ. ಈ ಪ್ರಾಂತ್ಯದ 36 ಸ್ಥಾನಗಳ ಪೈಕಿ 10 ಈಗಾಗಲೇ ಶಿವಸೇನೆಗೆ ದೊರೆತಿವೆ. ಕಾಂಗ್ರೆಸ್ ಕಡಿಮೆ ಸ್ಥಾನ ಪಡೆದಿರುವ ಕಾರಣ, ಕಾರ್ಯಕರ್ತರಲ್ಲಿ ಅಸಮಾಧಾನ ಸಹ ಉಂಟಾಗಿದೆ.

81 ಕ್ಷೇತ್ರಗಳ ಜಾರ್ಖಂಡ್‌ನಲ್ಲೂ ಇದೇ ಪರಿಸ್ಥಿತಿ ಇದೆ. ಐ.ಎನ್.ಡಿ.ಐ.ಎ. ಮೈತ್ರಿ ಪಕ್ಷಗಳಾದ ಕಾಂಗ್ರೆಸ್ ಹಾಗೂ ಜೆ.ಎಂ.ಎಂ.ಗಳು ಜೊತೆಯಾಗಿ 70 ಸ್ಥಾನಗಳಲ್ಲಿ ಸ್ಪರ್ಧಿಸಲಿವೆ. ಯಾವ ಪಕ್ಷಕ್ಕೆ ಎಷ್ಟು ಸ್ಥಾನ ಎಂಬುದು ಸ್ಪಷ್ಟವಾಗಿಲ್ಲ. ಆದರೆ, ಕಾಂಗ್ರೆಸ್ ಹೆಚ್ಚು ಸ್ಥಾನ ಪಡೆಯುವ ಸಾಧ್ಯತೆ ಇಲ್ಲ.

2019ರಲ್ಲಿ ಕಾಂಗ್ರೆಸ್ ಪಕ್ಷ ತಾನು ಸ್ಪರ್ಧಿಸಿದ್ದ 31 ಸ್ಥಾನಗಳ ಪೈಕಿ 16ರಲ್ಲಿ ಗೆಲುವು ಸಾಧಿಸಿತ್ತು. ಜೆ.ಎಂ.ಎಂ. ಪಕ್ಷವು 43 ಸ್ಥಾನಗಳ ಪೈಕಿ 30ರಲ್ಲಿ ಗೆಲುವು ಸಾಧಿಸಿತ್ತು. ಆರ್.ಜೆ.ಡಿ. ಹಾಗೂ ಎಡಪಕ್ಷಗಳು ತಲಾ ಏಳು ಸ್ಥಾನ ಗಳಿಸಿದ್ದವು.

ಈ ಬಾರಿ ಆರ್.ಜೆ.ಡಿ.ಗೆ 11 ಸ್ಥಾನಗಳನ್ನು ನೀಡಲಾಗಿದೆ. ತನಗೆ ಹೆಚ್ಚು ಸ್ಥಾನ ನೀಡಿದ್ದರೆ ಬೇರೆ ಮಾರ್ಗ ನೋಡಿಕೊಳ್ಳುವುದಾಗಿ ಆರ್.ಜೆ.ಡಿ. ತಿಳಿಸಿತ್ತು. ಪಕ್ಷವನ್ನು ಸಮಾಧಾನ ಪಡಿಸಲು ಹೆಚ್ಚು ಸ್ಥಾನ ನೀಡಲಾಗಿದೆ.

ಹೀಗಾಗಿ ಕಾಂಗ್ರೆಸ್ ಕಳೆದ ಬಾರಿಯಂತೆಯೇ 31 ಸ್ಥಾನಗಳಲ್ಲಿ ಸ್ಪರ್ಧಿಸಬೇಕಾದರೆ, ಜೆ.ಎಂ.ಎಂ. ತನ್ನ ಪಾಲಿನ 43 ಸ್ಥಾನಗಳಲ್ಲಿ ಕೆಲವನ್ನು ಬಿಟ್ಟು ಕೊಡಬೇಕಿದೆ. ಆದರೆ, ಆ ರೀತಿ ಆಗುವ ಸಾಧ್ಯತೆ ಕಂಡು ಬರುತ್ತಿಲ್ಲ.

ಉತ್ತರ ಪ್ರದೇಶದಲ್ಲಂತೂ, ಉಪ ಚುನಾವಣೆ ನಡೆಯಲಿರುವ ಎಲ್ಲಾ ಹತ್ತು ಸ್ಥಾನಗಳನ್ನು ಕಾಂಗ್ರೆಸ್ ಪಕ್ಷವು ಸಮಾಜವಾದಿ ಪಾರ್ಟಿಗೆ ಬಿಟ್ಟು ಕೊಟ್ಟಿದೆ.

# ಯೋಚಿಸಿ, ಕ್ರಮ ತೆಗೆದುಕೊಳ್ಳಿ

**(1ನೇ ಪುಟದಿಂದ)** ಬಲಿಪಶುಗಳಾಗುತ್ತಿದ್ದಾರೆ ಎಂದು ಪ್ರಧಾನಿ ಹೇಳಿದರು.

ಇಂತಹ ಕರೆಗಳು ಬಂದಾಗ ಹೆದರಬಾರದು. ಯಾವುದೇ ತನಿಖಾ ಸಂಸ್ಥೆ ಫೋನ್ ಕರೆ ಇಲ್ಲವೇ ವಿಡಿಯೋ ಕಾಲ್ ಮೂಲಕ ವಿಚಾರಣೆ ನಡೆಸುವುದಿಲ್ಲ. ಹೀಗಾಗಿ ಸೈಬರ್ ಸುರಕ್ಷತೆಗೆ ಮೂರು ವಿಚಾರಗಳು ಬಹಳ ಮುಖ್ಯ. ಮೊದಲು ಇಂತಹ ವಂಚನೆ ಕರೆ ಬಂದಾಗ ನೀವು ಮಾಡುತ್ತಿರುವ ಕೆಲಸ ನಿಲ್ಲಿಸಿ. ಎರಡನೆಯದಾಗಿ ಸರಿಯಾಗಿ ಯೋಚಿಸಿ ಹಾಗೂ ಮೂರನೆಯದಾಗಿ ಕ್ರಮ ತೆಗೆದುಕೊಳ್ಳಿ ಎಂದು ಮೋದಿ ಸಲಹೆ ನೀಡಿದ್ದಾರೆ.

ಈ ರೀತಿಯ ಕರೆ ಬಂದಾಗ ಹೆದರದೆ ತಾಳ್ಮೆಯಿಂದ ಇರಿ ಯಾವುದೇ ಅವಸರದ ಕ್ರಮ ತೆಗೆದುಕೊಳ್ಳಬೇಡಿ. ಯಾವುದೇ ವೈಯಕ್ತಿಕ ಮಾಹಿತಿಯನ್ನು ಯಾರ ಜೊತೆಗೂ ಹಂಚಿಕೊಳ್ಳಬೇಡಿ. ಸಾಧ್ಯವಾದರೆ ಸ್ಕ್ರೀನ್ ಶಾಟ್ ಪಡೆಯಿರಿ. ನಂತರ ರಾಷ್ಟ್ರೀಯ ಸೈಬರ್ ಸಹಾಯವಾಣಿಯಾದ 1930ಗೆ ಕರೆ ಮಾಡಿ ಹಾಗೂ ಇಂತಹ ವಂಚನೆಗಳ ಬಗ್ಗೆ https://cybercrime.gov.in/ ವೆಬ್ ಪೋರ್ಟಲ್ ನಲ್ಲಿ ದೂರು ದಾಖಲಿಸಿ. ವಂಚಕರ ಕರೆಯ ದಾಖಲೆಗಳನ್ನು ರಕ್ಷಿಸಿಕೊಳ್ಳಿ ಎಂದು ಪ್ರಧಾನಿ ತಿಳಿಸಿದ್ದಾರೆ.

# ಆನ್‌ಲೈನ್ ವಂಚಕರ ಅಸ್ತ್ರ

**(1ನೇ ಪುಟದಿಂದ)** ಬೇರೆ ರೀತಿಯ ಉತ್ಪನ್ನಗಳನ್ನು ಕಳಿಸುತ್ತಾರೆ.

ಇನ್ನು ಕೆಲವೊಮ್ಮೆ ತಪ್ಪಾಗಿ ಹಣ ವರ್ಗಾವಣೆ ನಡೆದಿದೆ ಎಂದು ಹೇಳಿ ವಂಚಿಸುತ್ತಾರೆ. ಈ ಸಂದರ್ಭದಲ್ಲಿ ನಕಲಿ ವಹಿವಾಟು ರಸೀದಿಯನ್ನು ಸೃಷ್ಟಿಸಿ ಜನರಿಗೆ ಕಳಿಸಲಾಗುತ್ತದೆ. ನಮ್ಮ ಹಣ ತಪ್ಪಾಗಿ ನಿಮಗೆ ಬಂದಿದೆ ವಾಪಸ್ ಕೊಡಿ ಎಂದು ಕೇಳುತ್ತಾರೆ.

ಟೆಲಿಕಾಂ ನಿಯಂತ್ರಣ ಸಂಸ್ಥೆಯ ಹೆಸರಿನಲ್ಲಿ ನಕಲಿ ಕರೆ ಮಾಡಿ, ಬ್ಯಾಂಕ್ ಇಲ್ಲವೇ ಬೇರೆ ವಿಷಯಗಳಿಗೆ ಸಂಬಂಧಿಸಿದ ಒ.ಟಿ.ಪಿ. ಪಡೆದು ಜನರನ್ನು ವಂಚಿಸಲಾಗುತ್ತಿದೆ.

ಇನ್ನು ಕೆಲವರಿಗೆ ಪಾರ್ಸಲ್ ಹಗರಣದ ಮೂಲಕ ವಂಚಿಸಲಾಗುತ್ತಿದೆ. ನಿಮಗೆ ಸಂಬಂಧಿಸಿದ ಪಾರ್ಸಲ್ ಒಂದರಲ್ಲಿ ಮಾದಕ ಪತ್ತೆಯಾಗಿದೆ, ಇದಕ್ಕಾಗಿ ನಿಮ್ಮನ್ನು ಬಂಧಿಸಲಾಗುವುದು ಎಂದು ಬೆದರಿಸಿ ಹಣ ವಸೂಲಿ ಮಾಡಲಾಗುತ್ತಿದೆ.

ತ್ವರಿತ ಸಾಲ ನೀಡುವುದಾಗಿ ಹಾಗೂ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುವುದಾಗಿ ಆಮಿಷ ಒಡ್ಡಿ, ಸಾಲದ ಹೆಸರಿನಲ್ಲಿ ಶುಲ್ಕ ಪಡೆದು ವಂಚನೆಗಳು ನಡೆಯುತ್ತಿವೆ ಎಂದು ಸೈಬರ್ ಸುರಕ್ಷತಾ ಸಂಸ್ಥೆ ತಿಳಿಸಿದೆ.

# ಬಿಪಿ ಕಾಯಿಲೆಗೆ ದುಷ್ಪರಿಣಾಮವಿಲ್ಲದ ಪರಿಣಾಮಕಾರಿ ಔಷಧಗಳಿವೆ

ದಾವಣಗೆರೆ, ಅ.27- ಅಧಿಕ ರಕ್ತದೊತ್ತಡ ಅಥವಾ ಬಿ.ಪಿ. ಕಾಯಿಲೆಗೆ ಈಗ ನಮ್ಮಲ್ಲಿ ಲಭ್ಯವಿರುವ ಔಷಧಿಗಳು ತುಂಬಾ ಪರಿಣಾಮಕಾರಿಯಾಗಿವೆ. ಅಲ್ಲದೇ ಯಾವುದೇ ದುಷ್ಪರಿಣಾಮವೂ ಇರುವುದಿಲ್ಲ ಎಂದು ಜೆಜೆಎಂಎಂಸಿ ನಿವೃತ್ತ ಪ್ರಾಧ್ಯಾಪಕ ಡಾ.ಬಿ.ಎಂ ವಿಶ್ವನಾಥ್ ಹೇಳಿದರು.

ನಗರದ ಬಾಪೂಜಿ ಮಕ್ಕಳ ಆಸ್ಪತ್ರೆ ಸಭಾಂಗಣದಲ್ಲಿ ಮೊನ್ನೆ ಏರ್ಪಾಡಾಗಿದ್ದ ವಿವೇಕ ಪೋಷಕರ ಆರೋಗ್ಯ ಕಾರ್ಯಾಗಾರದಲ್ಲಿ ಅವರು ಅಧಿಕ ರಕ್ತದೊತ್ತಡ ಕಾಯಿಲೆ ಕುರಿತಂತೆ ಅವರು ವಿಶೇಷ ಉಪನ್ಯಾಸ ನೀಡಿದರು.

ಮಾತ್ರೆಗಳು ಅಪಾಯಕಾರಿ ಎಂದು ಎಷ್ಟೋ ಜನ ಬಿ.ಪಿ ಕಾಯಿಲೆಯಿಂದ ಉಂಟಾಗುವ ಮೂತ್ರಪಿಂಡ, ಹೃದಯ ಮತ್ತು ಪಾರ್ಶ್ವವಾಯು ಕಾಯಿಲೆಗಳಿಂದ ನರಳುತ್ತಿದ್ದಾರೆ ಎಂದು ತಿಳಿಸಿದ ಅವರು ಗುಳಿಗೆ ಸೇವನೆಗೆ ಹೆದರಬೇಕಾಗಿಲ್ಲ ಎಂದು ತಿಳಿಸಿದರು.

ನಮ್ಮ ದೇಶದಲ್ಲಿ ಶೇ. 10 ರಿಂದ 30 ಜನರಿಗೆ ಬಿಪಿ ಕಾಯಿಲೆ ಇದ್ದು, ಪ್ರಪಂಚದಾದ್ಯಂತ 1 ಬಿಲಿಯನ್ ಜನರಿಗೆ ಈ ಕಾಯಿಲೆ ಇದೆ, ಮುಂದಿನ 5 ರಿಂದ 10 ವರ್ಷಗಳಲ್ಲಿ 1.5 ಬಿಲಿಯನ್ ಜನರಿಗೆ ಈ ಕಾಯಿಲೆ ಬರಬಹುದು ಎಂದು ಅಂದಾಜಿದೆ.

ನಮ್ಮ ಹೃದಯ ನಿಮಿಷಕ್ಕೆ 70 ರಿಂದ 80 ಬಾರಿ ಬಡಿದುಕೊಳ್ಳುತ್ತದೆ. ಪ್ರತಿಯೊಂದು ಬಡಿತದಲ್ಲಿ ಹೃದಯ ಹಿಗ್ಗುತ್ತದೆ ಮತ್ತು ಕುಗ್ಗುತ್ತದೆ. ಅಂದರೆ ಸಂಕುಚಿತಗೊಳ್ಳುತ್ತದೆ. ಹಿಗ್ಗಿದಾಗ ಹೃದಯಕ್ಕೆ ರಕ್ತ ಬಂದು ಸೇರುತ್ತದೆ ಮತ್ತು ಸಂಕುಚಿತಗೊಂಡಾಗ ರಕ್ತ ಹೃದಯದಿಂದ ರಕ್ತನಾಳಗಳ ಮೂಲಕ ದೇಹದ ಎಲ್ಲಾ ಜೀವಕೋಶಗಳಿಗೆ ಆಮ್ಲಜನಕ ಒದಗಿಸುತ್ತದೆ. (ಆಮ್ಲಜನಕ ರಕ್ತದ ಹಿಮೋಗ್ಲೋಬಿನ್‌ನಲ್ಲಿ ಇರುತ್ತದೆ). ರಕ್ತನಾಳಗಳಲ್ಲಿ ರಕ್ತ ಹರಿಯುವಾಗ ರಕ್ತನಾಳಗಳ ಗೋಡೆಗಳ ಮೇಲೆ ಬೀಳುವ ಒತ್ತಡಕ್ಕೆ ರಕ್ತದ ಒತ್ತಡವೆಂದು ಕರೆಯುತ್ತೇವೆ.

ಬಿ.ಪಿ. ಕಾಯಿಲೆಯಲ್ಲಿ ಪ್ರೈಮರಿ ಮತ್ತು ಸೆಕೆಂಡರಿ ಎಂದು ಎರಡು ವಿಧಗಳಿವೆ. ಶೇ. 90 ಜನರಿಗೆ ಪ್ರೈಮರಿ ಬಿ.ಪಿ. ಕಾಯಿಲೆ ಇದ್ದರೆ ಇನ್ನು ಶೇ. 10 ಜನರಿಗೆ ಸೆಕೆಂಡರಿ



**ವಿವೇಕ ಪೋಷಕರ ಆರೋಗ್ಯ ಕಾರ್ಯಾಗಾರದಲ್ಲಿ ಡಾ.ಬಿ.ಎಂ ವಿಶ್ವನಾಥ್ ಅಭಯ**

ಬಗೆಯ ಬಿ.ಪಿ. ಕಾಯಿಲೆ ಇರುತ್ತದೆ. ಪ್ರೈಮರಿ ವಿಧದ ಬಿ.ಪಿ. ಕಾಯಿಲೆಗೆ ಯಾವ ಕಾರಣಗಳನ್ನು ಗುರುತಿಸಲಾಗುವುದಿಲ್ಲ. ಸೆಕೆಂಡರಿ ವಿಧದ ಬಿ.ಪಿ. ಕಾಯಿಲೆ ಮೂತ್ರಪಿಂಡ, ಹಾರ್ಮೋನ್ ಗಳ ಕಾಯಿಲೆ, ರಕ್ತನಾಳದ ಕಾಯಿಲೆ, ಕೆಲವು ಹಾರ್ಮೋನ್ ಮಾತ್ರೆಗಳು ಈ ಕಾಯಿಲೆ ಬರಲು ಕಾರಣವಾಗಬಹುದು. ಹಾಗೂ ಕೆಲವು ಬಾರಿ ಸೆಕೆಂಡರಿ ಬಿ.ಪಿ. ಕಾಯಿಲೆಯನ್ನು ಗುಣಪಡಿಸಲು ಸಾಧ್ಯವಾಗುತ್ತದೆ. ಆದರೆ ಪ್ರೈಮರಿ ವಿಧದ ಬಿ.ಪಿ ಕಾಯಿಲೆಗೆ ಜೀವನ ಪೂರ್ತಿ ಮಾತ್ರೆ ನುಂಗಬೇಕಾಗುತ್ತದೆ.

ಬಿ.ಪಿ ಪ್ರಾರಂಭದ ಹಂತದಲ್ಲಿ ಯಾವ ಲಕ್ಷಣಗಳು ಇರುವುದಿಲ್ಲ, ಯಾವುದೋ ಕಾರಣಕ್ಕೆ ವೈದರಲ್ಲಿ ಹೋದಾಗ ನಿಮಗೆ ಬಿ.ಪಿ. ಇದೆ ಎಂದು ಹೇಳಬಹುದು, ಅದಕ್ಕೆ ಈ ಕಾಯಿಲೆಗೆ 'ಸೈಲೆಂಟ್ ಕಿಲ್ಲರ್' ಎಂಬ ಹೆಸರಿದೆ. ರಕ್ತದ ಒತ್ತಡ ಏರುತ್ತಾ ಹೋದಾಗ ತಲೆಸುತ್ತು, ತಲೆನೋವು, ಆಯಾಸ, ಕಣ್ಣು ಮಂಜಾಗುವುದು, ಎದೆಬಡಿತ, ಎದೆನೋವು ಕಾಣಿಸಿಕೊಳ್ಳಬಹುದು.

ನಡಿಗೆ, ಯೋಗ, ಆಟಗಳಲ್ಲಿ ಭಾಗವಹಿಸು ವುದು ಈಜು, ಮುಂತಾದ ಚಟುವಟಿಕೆಗಳಲ್ಲಿ ತೊಡಗುವುದು. ಆಹಾರದಲ್ಲಿ ಉಪ್ಪಿನ ಅಂಶ ಮತ್ತು ಕೊಬ್ಬಿನ ಅಂಶ ಕಡಿಮೆ, ಕರಿದ ಪದಾರ್ಥಗಳ ಸೇವನೆಗೆ ಮಿತಿ, ಹಸಿರು ತರಕಾರಿ ಹಾಗೂ ಹಣ್ಣುಗಳಲ್ಲಿ ಪೊಟ್ಯಾಸಿಯಂ ಮತ್ತು ನಾರಿನ ಅಂಶ ಹೆಚ್ಚಿರುವುದರಿಂದ ಬಿ.ಪಿ. ಕಾಯಿಲೆ ಹತೋಟಿಗೆ ಸಹಾಯ ಮಾಡುತ್ತದೆ. ತೂಕ ಹೆಚ್ಚಿದ್ದರೆ ಕಡಿಮೆ ಮಾಡಿಕೊಳ್ಳಬೇಕು

ಬಿ.ಪಿ. ಕಾಯಿಲೆ ಜೊತೆಗೆ ಸಕ್ಕರೆ ಕಾಯಿಲೆ, ಹೃದಯದ ಕಾಯಿಲೆ, ಕೊಲೆಸ್ಟ್ರಾಲ್ ಹೆಚ್ಚಿರುವುದು ಇನ್ನು ಮುಂತಾದ ಕಾಯಿಲೆಗಳಿದ್ದರೆ ಅದಕ್ಕೆ ಅನುಗುಣವಾಗಿ ಮಾತ್ರೆಗಳನ್ನು ನಿರ್ಧರಿಸಬೇಕಾಗುತ್ತದೆ.

ನಿಯಮಿತವಾಗಿ ಪ್ರತಿದಿನ ಅದೇ ಸಮಯಕ್ಕೆ ಮಾತ್ರೆ ತೆಗೆದು ಕೊಳ್ಳಬೇಕು. ತಿಂಗಳಿಗೆ ಎರಡು ಅಥವಾ ಮೂರು ಬಾರಿ ಬಿ.ಪಿ. ಪರೀಕ್ಷೆ ಮಾಡಿಕೊಳ್ಳಬೇಕು.

ಇದ್ದಕ್ಕಿದ್ದಂತೆ ಬಿ.ಪಿ ಮಾತ್ರೆ ನಿಲ್ಲಿಸುವುದು ಅಪಾಯಕರ, ಮಾತ್ರೆ ಕಡಿಮೆ ಮಾಡುವ ಅವಕಾಶ ಇದ್ದಲ್ಲಿ ವೈದ್ಯರು ನಿಧಾನವಾಗಿ ಕಡಿಮೆಗೊಳಿಸುತ್ತಾರೆ.

## ಬಿಪಿ ಹತೋಟಿ ಸಾಧ್ಯ



**'ಉಪ್ಪು, ಕೊಬ್ಬು ಹೆಚ್ಚಿರುವ ಆಹಾರ ಸೇವನೆ, ದೈಹಿಕ ಶ್ರಮದ ಕೊರತೆ, ಬೊಜ್ಜು, ಮಾನಸಿಕ ಒತ್ತಡ, ಧೂಮಪಾನ, ಮದ್ಯ, ಮಾದಕ ವಸ್ತುಗಳ ಸೇವನೆ ಮತ್ತು ಅನುವಂಶಿಕತೆ ಅಧಿಕ ರಕ್ತದೊತ್ತಡ ಬರಲು ಪ್ರಮುಖ ಕಾರಣ. ಉತ್ತಮ ಜೀವನ ಶೈಲಿಯಿಂದ ಬಿ.ಪಿ ಇದ್ದರೆ ಕಡಿಮೆ ಪ್ರಮಾಣದ ಮಾತ್ರೆಗಳಿಂದಲೇ ಕಾಯಿಲೆ ಹತೋಟಿಗೆ ತರಬಹುದು'**

**- ಡಾ.ಬಿ.ಎಂ ವಿಶ್ವನಾಥ್,**
ನಿವೃತ್ತ ಪ್ರಾಧ್ಯಾಪಕರು, ಜೆಜೆಎಂಎಂಸಿ.

ನೋವಿನ ಮಾತ್ರೆ, ಹಾರ್ಮೋನ್ ಮಾತ್ರೆಗಳಿಂದ ಬಿ.ಪಿ ಹೆಚ್ಚಾಗಬಹುದು. ವೈದ್ಯರ ಸಲಹೆ ಇಲ್ಲದೇ ಮಾತ್ರೆ ಉಪಯೋಗಿಸಬಾರದು.

ವರ್ಷಕ್ಕೆ ಒಂದು ಅಥವಾ ಎರಡು ಬಾರಿ ರಕ್ತ, ಮಾತ್ರೆ, ಇಸಿಜಿ ಪರೀಕ್ಷೆ ಮಾಡಿಸಿಕೊಳ್ಳುವುದರಿಂದ ಮೂತ್ರಪಿಂಡ, ಹೃದಯದ ಕಾಯಿಲೆ, ಕೊಲೆಸ್ಟ್ರಾಲ್ ಮತ್ತು ಥೈರಾಯ್ಡ್ ಕಾಯಿಲೆ ಇದ್ದರೆ ಗುರುತಿಸಬಹುದು ಮತ್ತು ಅವುಗಳಿಗೆ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಬಹುದು. ಅಲ್ಲದೆ ಈ ಪರೀಕ್ಷೆಗಳಿಂದ ಔಷಧಿಗಳ ದುಷ್ಪರಿಣಾಮಗಳನ್ನು ಸಹ ಗುರುತಿಸಬಹುದು ಎಂದು ಡಾ.ಬಿ.ಎಂ ವಿಶ್ವನಾಥ್ ವಿವರಿಸಿದರು.

ಬಾಪೂಜಿ ಮಕ್ಕಳ ಆಸ್ಪತ್ರೆ ನಿರ್ದೇಶಕ ಡಾ.ಜಿ. ಗುರುಪ್ರಸಾದ್, ಡಾ.ಸುರೇಶ್‌ಬಾಬು, ಡಾ.ರೇವಪ್ಪ, ವ್ಯವಸ್ಥಾಪಕ ಸಿದ್ದೇಶ್ವರ ಗುಬ್ಬಿ ಮತ್ತಿತರರು ಉಪಸ್ಥಿತರಿದ್ದರು. ಪೋಷಕರು, ನರ್ಸಿಂಗ್ ವಿದ್ಯಾರ್ಥಿಗಳು ಮತ್ತು ಆಸ್ಪತ್ರೆ ಸಿಬ್ಬಂದಿ ವರ್ಗದವರು ಹಾಜರಿದ್ದರು.





# ಆಟ ನಿಲ್ಲಿಸಿ ಮೌನವಾದ ಚಿತ್ರಮಂದಿರಗಳು

## ಇತಿಹಾಸದ ಪುಟ ಸೇರಿದ ಐತಿಹಾಸಿಕ ಸಿನಿಮಾ ಟಾಕೀಸ್‌ಗಳು

ದಾವಣಗೆರೆ ಮಧ್ಯ ಭಾಗದಲ್ಲಿರುವ ಮೋತಿ ಚಿತ್ರಮಂದಿರ (ಎಡಚಿತ್ರ) ಆಟ ನಿಲ್ಲಿಸಿ ಹಲವು ವರ್ಷಗಳಾಯ್ತು. ಇತ್ತೀಚೆಗಷ್ಟೇ ಮೌನವಾದ ಪುಷ್ಪಾಂಜಲಿ (ಬಲಚಿತ್ರ)

ಕೆ.ಎನ್. ಮಲ್ಲಿಕಾರ್ಜುನ ಮೂರ್ತಿ

ದಾವಣಗೆರೆಯಲ್ಲಿ ಸಿಂಗಲ್ ಥಿಯೇಟರ್‌ಗಳ ಕಾಲ ಮುಗಿಯುತ್ತಾ ಬಂದಿದೆ. ಮೊದಲಿಗೆ ಮಲ್ಟಿಪ್ಲೆಕ್ಸ್‌ಗಳಿಂದಾಗಿ ಆಘಾತಕ್ಕೊಳಗಾಗಿ, ಇದೀಗ 'ಓಟಿಟಿ' ಹಾವಳಿಯಿಂದಾಗಿ ಬಹುತೇಕ ಚಿತ್ರಮಂದಿರಗಳು ತಮ್ಮ 'ಆಟ' ನಿಲ್ಲಿಸಿವೆ.

ರಂಗಭೂಮಿ ಕಲಾವಿದರನ್ನೂ ಪೋಷಿಸುತ್ತಿದ್ದ ದೇವನಗರಿಯಲ್ಲಿ ಹತ್ತಾರು ಚಿತ್ರಮಂದಿರಗಳಿದ್ದವು. ಶತಕಗಳ ಕಾಲ ಮನೋರಂಜನಾ ಕೇಂದ್ರವಾಗಿದ್ದವು. ತಾವಿದ್ದ ಸ್ಥಳದ ಗುರುತು ಹೆಚ್ಚಿಸಿದ್ದ ಚಿತ್ರಮಂದಿರಗಳು ಈಗ ಗುರುತೇ ಇಲ್ಲದಂತಾಗುತ್ತಿವೆ.

ಪ್ರಸ್ತುತ ದಾವಣಗೆರೆಯಲ್ಲಿರುವ ಅಶೋಕ, ಅರುಣ, ಗೀತಾಂಜಲಿ, ಪುಷ್ಪಾಂಜಲಿ, ಪದ್ಮಾಂಜಲಿ, ತ್ರಿನೇತ್ರ, ತ್ರಿಶೂಲ್, ವಸಂತ, ಶಿವಾಲಿ ಚಿತ್ರಮಂದಿರ ಗಳ ಪೈಕಿ ಸದ್ಯ ಐದು ಚಿತ್ರಮಂದಿರಗಳಲ್ಲಿ ಮಾತ್ರ ಪ್ರದರ್ಶನಗಳು ನಡೆಯುತ್ತಿವೆ.

ಮಲ್ಟಿಪ್ಲೆಕ್ಸ್‌ಗಳ ಹೊಡೆತವನ್ನು ಹಾಗೋ-ಹೀಗೋ ತಾಳಿಕೊಂಡಿದ್ದ ಕೆಲವು ಚಿತ್ರಮಂದಿರಗಳು ಕೊರೊನಾ ಹೊಡೆತಕ್ಕೆ ಇನ್ನಷ್ಟು ಬಡಕಲಾಗಿದ್ದವು. ಆದರೆ ಮತ್ತೆ ಗಟ್ಟಿತನ ತೋರಿಸಲು ಸಾಧ್ಯವಾಗದೇ ಆಗಲೋ-ಈಗಲೋ ಧರೆಗುರುಳಲು ಸಜ್ಜಾಗಿ ನಿಂತಿವೆ. ದಶಕಗಳ ಕಾಲ ಜನರನ್ನು ಮನರಂಜಿಸಿ ಜನರಲ್ಲಿ ಮನೆಮಾತಾಗಿದ್ದ ಚಿತ್ರಮಂದಿರಗಳು ಈಗ ಇತಿಹಾಸದ ಪುಟ ಸೇರುತ್ತಿರುವುದು ವಿಪರ್ಯಾಸ.

ಮೊದಲಿನಂತೆ ಆದಾಯ ಬರುತ್ತಿಲ್ಲ. ವಿದ್ಯುತ್ ಶುಲ್ಕ, ನಿರ್ವಹಣೆ ಶುಲ್ಕ ಮತ್ತಿತರೆ ಶುಲ್ಕಗಳನ್ನು ಪಾವತಿಸಲು ಹಣ ಸಾಲುತ್ತಿಲ್ಲ. ಸಿಬ್ಬಂದಿಗೆ ಸಂಬಳ, ಚಿತ್ರಮಂದಿರದ ನಿರ್ವಹಣೆ, ಬಾಡಿಗೆ, ಕಂದಾಯ ಕಟ್ಟಲು ಹಣದ ಕೊರತೆ ಎದುರಾಗಿದೆ ಮಾಲೀಕರಿಗೆ.

ನೆಚ್ಚಿನ ನಾಯಕ ನಟನ ಚಿತ್ರಗಳಿಗಾಗಿ ಬೆಳ್ಳಂ ಬೆಳಿಗ್ಗಿಯೇ ಸರದಿಯಲ್ಲಿ ನಿಂತು ಟಿಕೆಟ್ ಖರೀದಿಸಿ, ಅಥವಾ ದುಪ್ಪಟ್ಟು ಹಣ ನೀಡಿ ಬ್ಲಾಕ್ ನಲ್ಲಿ ಟಿಕೆಟ್ ಖರೀದಿಸಿ ಸಿನಿಮಾ ನೋಡುತ್ತಿದ್ದ ದಿನಗಳು ಈಗ ಮರೆಯಾಗಿವೆ.

ಈ ಸಿನಿಮಾ ಮಂದಿರಗಳು ಸಿನಿ ರಸಿಕರನ್ನು ಆಕರ್ಷಿಸುವ ಜೊತೆಗೆ ನಗರದ ಆರ್ಥಿಕ ವಹಿವಾ ಟಿಗೂ ತಮ್ಮ ಕೊಡುಗೆ ನೀಡುತ್ತಿದ್ದವು. ಸಿನಿಮಾ ನೋಡಲೆಂದು ಬಂದವರು ಜೊತೆಗೆ ಊಟ-ತಿಂಡಿ ಸವಿಯುತ್ತಿದ್ದುದರಿಂದ ಸನಿಹದ ಹೋಟೆಲ್‌ಗಳಿಗೂ ವ್ಯಾಪಾರವಾಗುತ್ತಿತ್ತು. ಮಾರುಕಟ್ಟೆಗೆ ಹೋಗಿ ಬೇಕಾದ ವಸ್ತುಗಳನ್ನು ಕೊಂಡೇ ಹೋಗುತ್ತಿದ್ದರು. ಪ್ರತಿ ಚಿತ್ರಮಂದಿರವೂ ಹತ್ತಾರು ಜನರಿಗೆ ಉದ್ಯೋಗ ನೀಡಿದ್ದವು. ಇದೀಗ ಇವುಗಳನ್ನೇ ನೆಚ್ಚಿಕೊಂಡಿದ್ದ ಕುಟುಂಬಗಳೂ ಸಂಕಷ್ಟಕ್ಕೊಳಗಾಗಿವೆ.

ಅಂದ ಹಾಗೆ ದಾವಣಗೆರೆಯ ಪ್ರಥಮ ಚಿತ್ರಮಂದಿರದ ಹೆಸರು 'ಧನಲಕ್ಷ್ಮಿ'. ಮೂಕಿ ಚಿತ್ರಗಳ ಕಾಲದಲ್ಲಿ ಪ್ರಾಜೆಕ್ಟರ್ ಇಟ್ಟು ಸಿನಿಮಾ ತೋರಿಸುತ್ತಿದ್ದ ಕಾಲವದು. ಇದು ಇದ್ದದ್ದು ಚಾಮರಾಜ ಪೇಟೆಯಲ್ಲಿ. ವ್ಯಾಪಾರಕ್ಕೆಂದು ಬಂದವರು ಧನಲಕ್ಷ್ಮಿಯಲ್ಲಿ ಸಿನಿಮಾ ನೋಡಿ ಪಕ್ಕದಲ್ಲಿಯೇ ಇದ್ದ ದೇವೀ ಭವನದಲ್ಲಿ ತಿಂಡಿ ತಿಂದು ಹೋಗುತ್ತಿದ್ದರು. ನಂತರದ ದಿನಗಳಲ್ಲಿ ಕಾರಣಾಂತರಗಳಿಂದ ಧನಲಕ್ಷ್ಮಿ ಥಿಯೇಟರ್ ಡ್ರಾಮಾ ಥಿಯೇಟರ್ ಆಗಿ ಬದಲಾಗಿ ಮರೆಯಾಯ್ತು.

### ಡಾ. ರಾಜ್ ಚಿತ್ರಗಳಿಗೆ ಫೇಮಸ್ ಆಗಿದ್ದ ಗೀತಾಂಜಲಿ ಟಾಕೀಸ್

**ಒಂದು ಕಾಲದಲ್ಲಿ ದಾವಣಗೆರೆಯಲ್ಲಿ ಗೀತಾಂಜಲಿ ಚಿತ್ರಮಂದಿರ ಫೇಮಸ್ ಎಂದೇ ಹೇಳಲಾಗುತ್ತಿತ್ತು. ಡಾ.ರಾಜ್ ಕುಮಾರ್ ಅವರ ಚಿತ್ರಗಳೆಲ್ಲವೂ ಇದೇ ಚಿತ್ರಮಂದಿರದಲ್ಲಿ ಬಿಡುಗಡೆಯಾಗುತ್ತಿದ್ದವು. ಹಲವಾರು ಚಿತ್ರಗಳು 25 ವಾರಗಳನ್ನು ಪೂರೈಸಿವೆ.**

**ಈ ಚಿತ್ರಮಂದಿರ ಸ್ಥಾಪನೆಯಾದದ್ದು 1963ರಲ್ಲಿ ಶ್ರೀ ರಾಮಾಂಜನೇಯ ಯುದ್ಧ ಇಲ್ಲಿ ಪ್ರದರ್ಶನ ಕಂಡ ಪ್ರಥಮ ಚಿತ್ರವಾಗಿತ್ತು. ಗೀತಾಂಜಲಿ ಸೇರಿದಂತೆ ಸನಿಹದಲ್ಲಿಯೇ ಇರುವ ಪುಷ್ಪಾಂಜಲಿ, ಪದ್ಮಾಂಜಲಿ ಚಿತ್ರಮಂದಿರಗಳು ರಾಜನಹಳ್ಳಿ ಶ್ರೀನಿವಾಸ ಮೂರ್ತಿ ಅವರ ಮಾಲೀಕತ್ವದಲ್ಲಿದ್ದವು.**

**ಗೀತಾಂಜಲಿ ಚಿತ್ರಮಂದಿರದ ಆರಂಭದ ದಿನ ಜನರು ಥಿಯೇಟರ್ ಒಳ ಹೋಗಲು ಹೆದರುತ್ತಿದ್ದರು. ಹೀಗಾಗಿ ಸಿನಿಮಾ ನೋಡಿ ಬಂದವರಿಗೆ ಬಹುಮಾನ ಕೊಡಲಾಗಿತ್ತು. ಜೀವನಚೈತ್ರ, ಒಡ ಹುಟ್ಟಿದವರು, ಅನುರಾಗ ಸಂಗಮ, ಶಿವರಾಜ್ ಕುಮಾರ್ ಅವರ ಸಿಂಹದ ಮರಿ, ರವಿಚಂದ್ರನ್ ಅವರ ರಾಮಾಚಾರಿ ಸೇರಿದಂತೆ ಹಲವು ಚಿತ್ರಗಳು 25 ವಾರಗಳನ್ನು ಪೂರೈಸಿದ್ದವು.**

**ವಿನೋದ ಟಾಕೀಸ್ :** ಈಗಲೂ ಚಾಲ್ತಿಯಲ್ಲಿರುವ ರಾಜನಹಳ್ಳಿ ಮುದ್ದುರಾಯಪ್ಪ ಲಕ್ಷ್ಮಣ ಶೆಟ್ರು ಕುಟುಂಬಕ್ಕೆ ಸೇರಿದ ಅಶೋಕ ಚಿತ್ರಮಂದಿರ ಇದ್ದ ಜಾಗದಲ್ಲಿ ವಿನೋದ ಹೆಸರಿನ ಟಾಕೀಸ್ ಇತ್ತು. ಅದಕ್ಕೂ ಮುಂಚೆ ಅಲ್ಲಿನ ಜಾಗವನ್ನು ಎಮ್ಮೆ ಹೊಂಡ ಎಂದು ಕರೆಯಲಾಗುತ್ತಿತ್ತು. ಮಳೆನೀರು ನಿಂತು ಕೆಸರಾಗುತ್ತಿದ್ದ ಈ ಜಾಗದಲ್ಲಿ ಎಮ್ಮೆಗಳು ಮಲಗುತ್ತಿದ್ದ ಕಾರಣ. ಅದನ್ನು 'ಎಮ್ಮೆ ಹೊಂಡ' ಎನ್ನಲಾಗುತ್ತಿತ್ತು. ಈ ಜಾಗದಲ್ಲಿಯೇ ವಿನೋದ ಟಾಕೀಸ್ ತಲೆ ಎತ್ತಿತ್ತು. ಈಗಿನ ಅಶೋಕ ರಸ್ತೆಯನ್ನು ಅಂದು ವಿನೋದ ರಸ್ತೆ ಎಂದೂ ಕರೆಯಲಾಗುತ್ತಿತ್ತು ಎಂದು ಹಿರಿಯ ಪತ್ರಕರ್ತ ಹೆಚ್.ಬಿ ಮಂಜುನಾಥ್ ನೆನಪಿಸಿಕೊಂಡರು.

**ಶಾಂತಿ:** ಚನ್ನಗಿರಿ ರಂಗಪ್ಪ ಅವರ ಕುಟುಂಬಕ್ಕೆ ಸೇರಿದ ಶಾಂತಿ ಚಿತ್ರಮಂದಿರ ಅಂದಿನ ದಿನಗಳಲ್ಲಿ ದೊಡ್ಡ ಚಿತ್ರಮಂದಿರವಾಗಿತ್ತು. ನಗರದ ಕೆ.ಆರ್. ರಸ್ತೆಯಲ್ಲಿತ್ತಾದರೂ, ಆ ರಸ್ತೆಯನ್ನು ಅದಕ್ಕೆ 'ಶಾಂತಿ ಟಾಕೀಸ್ ರಸ್ತೆ' ಎಂದೇ ಕರೆಯಲಾಗುತ್ತಿತ್ತು. ಇತಿಹಾಸ ಪುಟ ಸೇರಿದ ಈ ಚಿತ್ರಮಂದಿರದ ನಂತರ ಕಲ್ಯಾಣ ಮಂಟಪವಾಗಿ ಬದಲಾಯಿತಾದರೂ, ಅದು ಬಹು ದಿನ ಉಳಿಯಲಿಲ್ಲ.

**ಮೋತಿ:** ನಗರದ ಹೃದಯ ಭಾಗದಲ್ಲಿರುವ ಮೋತಿ ಚಿತ್ರಮಂದಿರ ಒಂದು ಕಾಲದಲ್ಲಿ ಫೇಮಸ್. ಖಾಸಗಿ ಬಸ್ ನಿಲ್ದಾಣದ ಸನಿಹದಲ್ಲಿಯೇ ಇದ್ದುದರಿಂದ ಗ್ರಾಮೀಣರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿದ್ದರು. ಮೋತಿಯಲ್ಲಿ ಪ್ರದರ್ಶನಕ್ಕೆ ಬರುತ್ತಿದ್ದ ಎಲ್ಲಾ ಚಿತ್ರಗಳೂ ಮಾಲೀಕರಿಗೆ ಲಾಭ ಮಾಡಿಕೊಡುತ್ತಿದ್ದವು. ಹಳ್ಳಿಗರನ್ನೇ ಆಕರ್ಷಿಸುವ ಧಾರ್ಮಿಕ ಚಿತ್ರಗಳು ಹೆಚ್ಚಾಗಿ ಪ್ರದರ್ಶನಗೊಳ್ಳುತ್ತಿದ್ದವು.

ಕೆಲವು ದೇವೀ ಚಿತ್ರಗಳ ನಡುವೆ ದೇವರಿಗೆಂದು ಮಂಗಳಾರತಿ ಮಾಡಿದ ಉದಾಹರಣೆಗಳೂ ಇಲ್ಲಿದ್ದವು. ನಟಿ ಶೃತಿ ಚಿತ್ರಗಳನ್ನು ನೋಡುತ್ತಿದ್ದವರು ಅಳುತ್ತಲೇ ಹೊರ ಬರುತ್ತಿದ್ದ ದಿನಗಳಿದ್ದವು. ಆದರೆ ಈಗ ಮೋತಿ ಆಟ ನಿಲ್ಲಿಸಿದೆ. ಟಾಕೀಸ್ ಬಳಿ ಮಳಿಗೆಗಳು ತಲೆ ಎತ್ತಿವೆ. ಮೋತಿ ಚಿತ್ರಮಂದಿರ ಇದ್ದ ಜಾಗ ಕಾಯಿಪೇಟೆಯ ಬಾಬುಲಾಲ್ ಹಾಗೂ ದೊಡ್ಡಪೇಟೆ ಧರಮ್ ಚಂದ್ ಲಕುಮಾಜಿ ಕುಟುಂಬದವರಿಗೆ ಸೇರಿತ್ತು. ಅದನ್ನು ಮೋತಿ ವೀರಪ್ಪ ಅವರಿಗೆ 1961ರಲ್ಲಿ ಲೀಜ್‌ಗೆ ಕೊಟ್ಟಿದ್ದರು. ಆಗ ಅದು ಬಿದಿರಿನ ಬಂಬುಗಳಿಂದ ನಿರ್ಮಿಸಲಾಗಿದ್ದ ಟೂರಿಂಗ್ ಟಾಕೀಸ್ ಆಗಿತ್ತು. ನಂತರ ಮೋತಿ ವೀರಪ್ಪ ಅವರು ಕಟ್ಟಡ ನಿರ್ಮಿಸಿ ಚಿತ್ರಮಂದಿರ ನಿರ್ಮಿಸಿದ್ದರು ಎನ್ನುತ್ತಾರೆ ಹೆಚ್.ಬಿ. ಮಂಜುನಾಥ್ .

ನಗರದ ಬಂಧೀಖಾನೆ ಪಕ್ಕದಲ್ಲಿ ಇರುವ ವಸಂತ ಚಿತ್ರಮಂದಿರವೂ ಮೋತಿ ವೀರಪ್ಪ ಅವರದ್ದು. ಇದರ ಮುಂಭಾಗದ ರಸ್ತೆಯನ್ನು ವಸಂತ ರಸ್ತೆ ಎಂದೇ ಕರೆಯಲಾಗುತ್ತಿದೆ. ಅನೇಕ ಏಳು-ಬೀಳುಗಳ ನಡುವೆಯೂ ವಸಂತ ಚಿತ್ರಮಂದಿರದಲ್ಲಿ ಈಗಲೂ ಚಿತ್ರಗಳು ಪ್ರದರ್ಶನವಾಗುತ್ತಿವೆ. ಕಂದನಕೋವಿ ಬೆಳ್ಳೂಡಿ ರುದ್ರಪ್ಪ ಅವರ ಕುಟುಂಬದ ತ್ರಿಶೂಲ್-ತ್ರಿನೇತ್ರಗಳಲ್ಲೂ ಪ್ರದರ್ಶನಗಳು ನಡೆಯುತ್ತಿವೆ.

ಇವುಗಳಲ್ಲದೆ, ವಿನೋಬನಗರದಲ್ಲಿ ಅಮಿತ್ ಚಿತ್ರಮಂದಿರವಿತ್ತು. ಇದು ರಾಜನಹಳ್ಳಿ ಲಕ್ಷ್ಮಣ ಶೆಟ್ಟಿಯವರ ಮಗ ಆರ್.ಎಲ್. ಪ್ರಭಾಕರ್ ಅವರಿಗೆ ಸೇರಿತ್ತು. ಇಳಕಲ್ ಜಯಣ್ಣ ಶಿವಾಲಿ ಚಿತ್ರಂದಿರದ ನಿರ್ಮಿಸಿದ್ದರು. ಈಗ ಅದೂ ಚಾಲ್ತಿಯಲ್ಲಿಲ್ಲ. ಕಂಬಿಗನೂಲು ಕುಟುಂಬದವರ ಅರುಣ ಚಿತ್ರಮಂದಿರದಲ್ಲೂ ಸದ್ಯ ಪ್ರದರ್ಶನಗಳು ನಡೆಯುತ್ತಿಲ್ಲ.

**ಯಜಮಾನ್ :** ಮನರಂಜನೆ ಅಂದಾಕ್ಷಣ ನಿಟುವಳ್ಳಿ ಭಾಗದ ಜನತೆಗೆ ನೆನಪಾಗುತ್ತಿದ್ದುದು ಯಜಮಾನ್ ಥಿಯೇಟರ್. ಇದು ಡಾಂಗೆ ಪಾರ್ಕ್ ಸನಿಹ ಇತ್ತು. ಇಲ್ಲಿ ರವಿಚಂದ್ರನ್, ವಿಷ್ಣುವರ್ಧನ್ ಸೇರಿದಂತೆ ಹಿರಿಯ ನಾಯಕರು ಚಿತ್ರಗಳು ಚೆನ್ನಾಗಿಯೇ ಪ್ರದರ್ಶನಗೊಳ್ಳುತ್ತಿದ್ದವು. ಆದರೆ ದಿನ ಕಳೆದಂತೆ ಪ್ರೇಕ್ಷಕರ ಕೊರತೆ ಕಾಡತೊಡಗಿತ್ತು. ಕೊನೆಗೆ 1992ರಲ್ಲಿ ಚಿತ್ರಮಂದಿರ ಸ್ಥಗಿತಗೊಂಡಿತು.

**ಇಂಗ್ಲಿಷ್ ಚಿತ್ರಗಳಿಗೆ ಹೆಸರಾಗಿದ್ದ ವಿನಾಯಕ ವೀಡಿಯೋ:** ವಸಂತ ರಸ್ತೆ ಬಳಿ ಇದ್ದ ವಿನಾಯಕ ವಿಡಿಯೋ ಇಂಗ್ಲೀಷ್ ಆಕ್ಷನ್ ಚಿತ್ರಗಳಿಗೆ ಹೆಸರಾಗಿತ್ತು. 1994ರಲ್ಲಿ ಆರಂಭವಾಗಿದ್ದ ಈ ಚಿತ್ರಮಂದಿರದಲ್ಲಿ ಇಂಗ್ಲಿಷ್ ಚಿತ್ರಗಳ ವೀಕ್ಷಣೆಗೆ ಯುವ ಸಮೂಹವೇ ಹೆಚ್ಚಾಗಿ ಬರುತ್ತಿತ್ತು. ಈ ಸ್ಥಳದಲ್ಲಿ ಗಣೇಶನ ಮೂರ್ತಿ ಪ್ರತಿಷ್ಠಾಪಿಸುತ್ತಿದ್ದ ಹಿನ್ನೆಲೆಯಲ್ಲಿ ಥಿಯೇಟರ್‌ಗೆ ವಿನಾಯಕ ವೀಡಿಯೋ ಎಂದೇ ಹೆಸರಿಡಲಾಗಿತ್ತು. ಈಗಲೂ ವೀಡಿಯೋ ಚಾಲ್ತಿಯಲ್ಲಿರುವುದು ವಿಶೇಷ.

ಆಜಾದ್ ನಗರ ರಸ್ತೆಯಲ್ಲಿ ವೆಂಕಟೇಶ್ವರ, ಬೇತೂರು ರಸ್ತೆಯಲ್ಲಿ ಗಿರಿ ಟಾಕೀಸ್, ನಿಟುವಳ್ಳಿಯಲ್ಲಿದ್ದ ಆರ್.ಎಲ್. ಹನುಮಂತಪ್ಪನವರ ಶ್ರೀ ಚಾಮುಂಡೇಶ್ವರಿ ಚಿತ್ರಮಂದಿರಗಳೂ ಸಿನಿ ರಸಿಕರನ್ನು ರಂಜಿಸುತ್ತಿದ್ದವು. ಪೋಸ್ಟರ್ ಮೂಲಕವೇ ಪಡ್ಡೆ ಹುಡುಗರನ್ನು ಕೆಣಕುತ್ತಿದ್ದ ಬಂಬೂ ಬಜಾರ್ ರಸ್ತೆಯಲ್ಲಿ ವಿನಾಯಕ ಟಾಕೀಸ್ ಬಹುಬೇಗ ಮರೆಯಾಯ್ತು.

## ಪೋದಾರ್ ಇಂಟರ್‌ನಾಷನಲ್ ಶಾಲೆಯಲ್ಲಿ ಬೆಳಕಿನ ಹಬ್ಬ



ದಾವಣಗೆರೆ, ಅ.27- ನಗರದ ಪೋದಾರ್ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಶನಿವಾರ ಬೆಳಕಿನ ಹಬ್ಬ ದೀಪಾವಳಿಯನ್ನು ಆಚರಿಸಲಾಯಿತು.

ಈ ವೇಳೆ ಮುಖ್ಯ ಶಿಕ್ಷಕಿ ಮೊನಾಲಿಸ ಸಿಂಗ್ ಮಾತನಾಡಿ, ಕತ್ತಲೆಯ ಮೇಲೆ ಬೆಳಕಿನ ಶಕ್ತಿಗಳ ವಿಜಯವನ್ನು ಸಂಕೇತಿಸಲು ಬೆಳಕಿನ ಹಬ್ಬ ಆಚರಿಸಲಾಗುತ್ತದೆ. ಹಾಗೆಯೇ ನಮ್ಮ ಜೀವನದ ಕಷ್ಟಗಳನ್ನು ಹೊಡೆದೋಡಿಸಿ ಬೆಳಕನ್ನು ಕಂಡು ಸಂಭ್ರಮಿಸುವ ವಿಶೇಷ ಹಬ್ಬವೇ ದೀಪಾವಳಿಯಾಗಿದೆ ಎಂದರು.

ಮನುಷ್ಯನಲ್ಲಿರುವ ಅಂಧಕಾರ, ಅಜ್ಞಾನ, ಬುದ್ಧಿ, ಆಚಾರ, ವಿಚಾರಗಳಿಗೆ ಅಂಟಿಕೊಂಡಿರುವ ಕತ್ತಲೆ ಹಾಗೂ ನಮ್ಮ ಮನದ ಎಲ್ಲಾ ಋಣಾತ್ಮಕ ಅಂಶಗಳನ್ನು ಹೋಗಲಾಡಿಸಲು ನಾವು ದೀಪ ಬೆಳಗುತ್ತೇವೆ ಎಂದು ಹೇಳಿದರು.

ಈ ವೇಳೆ ಪ್ರಾಚಾರ್ಯರಾದ ಫಲ್ಗುರಿ ರೇವತಿ, ಡಾ. ಕೆ.ಎಲ್. ಮೂರ್ತಿ, ಶಾಲೆಯ ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಪಾಲಕರಿದ್ದರು.

## ಸಂತೇಬೆನ್ನೂರಿನ ಈಶ್ವರೀಯ ವಿವಿಯಲ್ಲಿ ಇಂಜಿನಿಯರ್‌ಗಳ ದಿನ



ಚನ್ನಗಿರಿ, ಅ.27- ತಾಲ್ಲೂಕಿನ ಸಂತೇಬೆನ್ನೂರಿನ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದಲ್ಲಿ ಭಾನುವಾರ ಇಂಜಿನಿಯರ್‌ಗಳ ದಿನ ಆಚರಿಸಲಾಯಿತು.

ಇದೇ ವೇಳೆ ಸರ್.ಎಂ. ವಿಶ್ವೇಶ್ವರಯ್ಯ ಅವರ ಸಾಧನೆ, ಸೇವೆ ಹಾಗೂ ಕೊಡುಗೆ ಸ್ಮರಿಸಿ, ದೇಶದ ಸುಭದ್ರತೆಗಾಗಿ ಇಂದಿನ ಇಂಜಿನಿಯರ್‌ಗಳು ಉತ್ತಮ ಸೇವೆ ನೀಡಲಿ ಎಂದು ಆಶಿಸಲಾಯಿತು.

ಕಾರ್ಯಕ್ರಮದಲ್ಲಿ ಇಂಜಿನಿಯರ್‌ಗಳಾದ ಜಗದೀಶ್, ಮಹೇಶ್ವರಪ್ಪ, ಪೋಸ್ಟ್ ಮಾಸ್ಟರ್ ನಾಗೇಂದ್ರಪ್ಪ, ಹೊನ್ನಮ್ಮ ಮತ್ತಿತರರಿದ್ದರು. ಈಶ್ವರೀಯ ವಿವಿ ಕೇಂದ್ರದ ಸಂಚಾಲಕರಾದ ಬ್ರಹ್ಮಾಕುಮಾರಿ ಮಮತ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

## ಜಿಲ್ಲಾ ಬಾಲ್ ಬ್ಯಾಡ್ಮಿಂಟನ್‌ಗೆ ಆಯ್ಕೆ



ಜಗಳೂರು

ಜಗಳೂರು, ಸೆ.27- ತಾಲ್ಲೂಕು ಮಟ್ಟದ ಪ್ರೌಢಶಾಲೆಗಳ ಕ್ರೀಡಾಕೂಟದಲ್ಲಿ ಪಟ್ಟಣದ ಬಾಲ ಭಾರತಿ ಪ್ರೌಢಶಾಲೆಯ ಬಾಲಕಿಯರು 'ಬಾಲ್ ಬ್ಯಾಡ್ಮಿಂಟನ್' ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುವ ಪ್ರತೀಕ್ಷ, ನಿವೇದಿತ, ಭಾವನ, ಸಂಧ್ಯಾ, ಕೃತಿಕ, ಲೇತಾಜ್ ಬಾನು ವಿದ್ಯಾರ್ಥಿನಿಯರಿಗೆ ಅಮರಭಾರತಿ ವಿದ್ಯಾಕೇಂದ್ರದ ಆಡಳಿತಾಧಿಕಾರಿ ಹಾಗೂ ಮುಖ್ಯ ಶಿಕ್ಷಕರಾದ ಶ್ರೀಮತಿ ವಿ.ಹೆಚ್. ಶ್ವೇತಾ ಅಭಿನಂದಿಸಿದ್ದಾರೆ.

## ಕಣವಿಹಳ್ಳಿ ಎಂ. ರಾಮಕೃಷ್ಣಗೆ ಸನ್ಮಾನ



ಹರಪನಹಳ್ಳಿ, ಅ.27- ಭ್ರಷ್ಟಾಚಾರದ ವಿರುದ್ಧ ಹೋರಾಡಿ ಸರ್ಕಾರಕ್ಕೆ ಅತಿ ಹೆಚ್ಚು ಭೂಮಿಯನ್ನು ಹಿಂದಿರುಗಿಸಿಕೊಟ್ಟ, ರಾಜ್ಯ ಮಾಹಿತಿ ಹಕ್ಕು ಮತ್ತು ಸಾಮಾಜಿಕ ಕಾರ್ಯಕರ್ತರ ವೇದಿಕೆಯ ವಿಜಯನಗರ ಜಿಲ್ಲಾಧ್ಯಕ್ಷ ತಾಲ್ಲೂಕಿನ ಕಣಿವಿಹಳ್ಳಿ ಗ್ರಾಮದ ಎಂ.ರಾಮಕೃಷ್ಣ ಅವರನ್ನು ನಿವೃತ್ತ ಲೋಕಾಯುಕ್ತ ಸಂತೋಷ ಹೆಗಡೆಯವರು ಈಚೆಗೆ ಬೆಂಗಳೂರಿನಲ್ಲಿ ನಡೆದ ರಾಜ್ಯ ಮಾಹಿತಿ ಹಕ್ಕು ಮತ್ತು ಸಾಮಾಜಿಕ ಕಾರ್ಯಕರ್ತರ ವೇದಿಕೆಯ 5ನೇ ವರ್ಷದ ದಿನಾಚರಣೆಯಲ್ಲಿ ಸನ್ಮಾನಿಸಿ, ಗೌರವಿಸಿದರು.

## ರೈಲು ಏರಲು ನೂಕು ನುಗ್ಗಲು, 9 ಜನರಿಗೆ ಗಾಯ

ಮುಂಬೈ, ಅ. 27 - ಪಶ್ಚಿಮ ರೈಲ್ವೆಯ ಬಾಂದ್ರ ಟರ್ಮಿನಸ್‌ನಲ್ಲಿ ಉತ್ತರಪ್ರದೇಶದ ಗೋರಖ್‌ಪುರಕ್ಕೆ ತೆರಳುತ್ತಿದ್ದ ರೈಲು ಏರಲು ಜನರು ನಡೆಸಿದ ನೂಕು ನುಗ್ಗಲಿನಲ್ಲಿ ಒಂಬತ್ತು ಜನ ಗಾಯಗೊಂಡಿದ್ದಾರೆ. ಗೋರಖ್‌ಪುರ ಅಂತ್ಯೋದಯ ಎಕ್ಸ್‌ಪ್ರೆಸ್‌ನ ಕಾಯ್ದಿರಿಸದ ಟಿಕೆಟ್ ಬೋಗಿಗಳಿಗೆ ತೆರಳಲು ಜನರು ನೂಕುನುಗ್ಗಲು ನಡೆಸಿದರು. ಈ ಘಟನೆಯ ದೃಶ್ಯಗಳು ಜಾಲತಾಣಗಳಲ್ಲಿ ವೈರಲ್ ಆಗಿವೆ. ಈ ಹಿನ್ನೆಲೆಯಲ್ಲಿ ಕೇಂದ್ರ ರೈಲ್ವೆಯು ಪ್ಲಾಟ್‌ಫಾರಂ ಟಿಕೆಟ್‌ಗಳ ಮಾರಾಟದ ಮೇಲೆ ನಿರ್ಬಂಧ ಹೇರಿದೆ. ಹಬ್ಬದ ದಿನಗಳ ಹಿನ್ನೆಲೆಯಲ್ಲಿ ರೈಲ್ವೆ ಪ್ರಯಾಣಿಕರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ.


**ವಾಣಿಜ್ಯ ಕಟ್ಟಡ ಬಾಡಿಗೆಗಿದೆ**
ದಾವಣಗೆರೆ ನರಸರಾಜ ರಸ್ತೆಯಲ್ಲಿ ಹೊಸದಾಗಿ ಕಟ್ಟಿರುವ 3 ಅಂತಸ್ತಿನ ಆರ್‌ಸಿಸಿ ರೂಫಿಂಗ್‌ವುಳ್ಳ, ಲಿಫ್ಟ್ ಸೌಕರ್ಯವುಳ್ಳ ಹಾಗೂ ಪ್ರತೀ ಫ್ಲೋರ್‌ಗೂ ಪ್ರತ್ಯೇಕ ವಾಷ್ ರೂಮ್, 24 ಗಂಟೆ ನೀರಿನ ಸೌಕರ್ಯವುಳ್ಳ ವಾಣಿಜ್ಯ ಉಪಯೋಗದ ವಿದ್ಯುತ್ ಸೌಲಭ್ಯವುಳ್ಳ ಆಧುನಿಕ 5080 ಚ.ಅಡಿ ಅಳತೆಯ ವಾಣಿಜ್ಯ ಕಟ್ಟಡ ಬಾಡಿಗೆಗೆ ದೊರೆಯುತ್ತದೆ. ಸಂಪರ್ಕಿಸಿ :
94812 62505

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80, 40x60 North, 120 ಅಡಿ ರೋಡಿಗಿದೆ. 50x80 East, 40x60 East, 30x50 East, 30x40 East.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಹೋಟೆಲ್ ಮಾರಾಟಕ್ಕಿದೆ**
ಲಕ್ಷ್ಮಿ ಫ್ಲೋರ್ ಮಿಲ್ ಹತ್ತಿರ ದಾವಣಗೆರೆ - 4. ಸಂಪರ್ಕಿಸಿ :
84948 20288

**Godown for Rent**
3000 Sq.Ft.
Power Available.
Karur Industrial Area, Near DC Office.
Ph: 90351 08160

**ಸೈಟುಗಳು ಮಾರಾಟಕ್ಕಿವೆ**
ಹೊಸ ಕುಂದುವಾಡ ಹತ್ತಿರ ಸುಶಿ ಕನ್‌ವೆನ್ಷನ್ ಹಾಲ್ ಹಿಂಭಾಗ ಹೊಸ ಬಡಾವಣೆಗಳಲ್ಲಿ 30x50 ಉತ್ತರ, 30x40 ಪಶ್ಚಿಮ, 30x5 ಪೂರ್ವ, 30x50 ಉತ್ತರ-ಪಶ್ಚಿಮ ಕಾರ್ನರ್.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿವೆ**
ಶಾಮನೂರು ಹತ್ತಿರ ಡಾಲರ್ಸ್ ಕಾಲೋನಿಯಲ್ಲಿ 40x60, 40x60 North ಅಕ್ಕ-ಪಕ್ಕ 30x40, 30x40 South ಅಕ್ಕ-ಪಕ್ಕ, 30x43 North, 30x50 North.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಪತ್ರಿಕಾ ಕಾರ್ಯಾಲಯದಲ್ಲಿ ಸಂಜೆ ಪಾಳಿಯದಲ್ಲಿ ಕೆಲಸ ಮಾಡಲು ಕನ್ನಡ ಭಾಷಾ ಜ್ಞಾನ ಹಾಗೂ ಕನ್ನಡ ಟೈಪಿಂಗ್ ಬಲ್ಲ ಕಂಪ್ಯೂಟರ್ ಆಪರೇಟರ್ ಹುದ್ದೆಗೆ ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ : ಮಧ್ಯಾಹ್ನ 12ರಿಂದ ಸಂಜೆ 5
ಫೋ. : 08192 254736

**ಬೇಕಾಗಿದ್ದಾರೆ**
ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡಲು ಪುರುಷ ಅಭ್ಯರ್ಥಿ ಬೇಕಾಗಿದ್ದಾರೆ. ವಿದ್ಯಾಭ್ಯಾಸ : ಎಸ್.ಎಸ್.ಎಲ್.ಸಿ. ವಯಸ್ಸು : 25 ರಿಂದ 40ರೊಳಗೆ
ಕೆಲಸದ ಸಮಯ : ಬೆಳಿಗ್ಗೆ 10 ರಿಂದ ಸಂಜೆ 8.30
ಪರಿಮಳ ಕಾಫೀ ಕಂಪನಿ
ಮಂಡಿಪೇಟೆ, ದಾವಣಗೆರೆ.
94482 72734

**ಹೋಟೆಲ್ ಬಾಡಿಗೆಗೆ ಇದೆ**
ಶಾಮನೂರು ರಸ್ತೆಯಲ್ಲಿ ಎಲ್ಲಾ ಸುವ್ಯವಸ್ಥೆ ಇರುವ ಹೋಟೆಲ್ ಬಾಡಿಗೆಗೆ ಇದೆ. ಬೋರ್‌ವೆಲ್, ಅಡುಗೆ ಸಾಮಾನು ಟೇಬಲ್, ಕುರ್ಚಿ ಇರುತ್ತದೆ.
98861 66432, 99006 02096, 76194 57200

**ಕಾರ್ನರ್ ಪ್ಲಾಟ್ ಮಾರಾಟಕ್ಕಿದೆ**
KHB ಜಡ್ಜ್ ಕಾಲೋನಿ ಹಿಂಭಾಗ ಇರುವ 30x40 ಕಾರ್ನರ್ ಪ್ಲಾಟ್ ಮಾರಾಟಕ್ಕೆ ಇದೆ.
99803 70486

**HOUSES FOR RENT AND LEASE**
1BHK, 2BHK, Vidyangara, Siddaveerappa Badavane, SS Layout A&B Block, Anjaneya Badavane, Mahalakshmi Layout & Flats also available for rent.
Dakshith Iyanahalli
96061 26471

**ಬೇಕಾಗಿದ್ದಾರೆ**
ಕಾಫೀ ಶಾಫ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತಿಯುಳ್ಳವರು ಸೂಕ್ತ ದಾಖಲೆಗಳೊಂದಿಗೆ ನೇರವಾಗಿ ಸಂಪರ್ಕಿಸಿ :
ಎ.ಎನ್.ಎಸ್. ಫುಡ್ಸ್
ಮಂಡಿಪೇಟೆ, ದಾವಣಗೆರೆ.
94482 72734

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಸೈಟು ಮಾರಾಟಕ್ಕಿದೆ**
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ 34 x73 ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ
94485 89727

**WANTED**
Male Required for Supervisor Job and Girls Required for Billing Work at Food Mart Supermarket.
98864 63531

**ಬೇಕಾಗಿದ್ದಾರೆ**
ಭಾರತ್ ಎಲೆಕ್ಟ್ರಾನಿಕ್ಸ್ ಲಿ. (BEL) ಬೆಂಗಳೂರು (ಭಾರತ ಸರ್ಕಾರದ ಅಂಗ ಸಂಸ್ಥೆ) ಕಛೇರಿ ಸಹಾಯಕರು ಹುದ್ದೆಗಳು - 50, ವಿದ್ಯಾರ್ಹತೆ - ಕನಿಷ್ಠ 7ನೇ ತರಗತಿ, ಸಂಬಳ - 17000 ರಿಂದ 20000/- PF ಮತ್ತು ESI ಸೌಲಭ್ಯವಿರುತ್ತದೆ. (ವಸತಿ ಸೌಲಭ್ಯವಿರುವುದಿಲ್ಲ)
98443 26560, 7676675944

**ಶ್ರೀ ವೆಂಕಟೇಶ್ವರ ಪಿ.ಜಿ.**
(ಮಹಿಳೆಯರಿಗೆ ಮಾತ್ರ)
Sri Venkateshwara P.G. (Ladies Only) Opp. Taralabalu School, # 782/4, Near ITI College, Hadadi Road. Srinivasa Nagara, 4th Cross, Davanagere-577004.
99723 42941
80502 01724, 81234 36901

**ಸೈಟು ಮಾರಾಟಕ್ಕಿದೆ**
ಹಳೆ ಕುಂದವಾಡದಲ್ಲಿರುವ 28.98×28.93 = 868 ಅಳತೆಯ ದಕ್ಷಿಣ ಸೈಟು ಹಾಗೂ ಹರಿಹರದ ಶೇರಾಪುರದಲ್ಲಿ 40×60 (ಉತ್ತರ) ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ :
99723 43286

**ಬೇಕಾಗಿದ್ದಾರೆ**
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ SBI Life Mitra ಹುದ್ದೆಗೆ ಬೇಕಾಗಿದ್ದಾರೆ. SSLC, PUC, Degree.
ವಯಸ್ಸು : 25 ರಿಂದ 60 ವರ್ಷಗಳು
78925 80847

**ಮನೆ ಮಾರಾಟಕ್ಕಿದೆ**
ದಾವಣಗೆರೆಯ ಕೆ.ಆರ್. ರಸ್ತೆ, ದೊಗ್ಗಳ್ಳಿ ಕೌಂಪೌಂಡಿನಲ್ಲಿರುವ ಕಮರ್ಷಿಯಲ್ ಮಳಿಗೆ ಸಹಿತ ಮನೆ (1116 ಚ.ಅಡಿ ವಿಸ್ತೀರ್ಣ) ಮಾರಾಟಕ್ಕಿದೆ.
ಆಸಕ್ತಿಯುಳ್ಳವರು ವಿಚಾರಿಸಿ :
98445 73074,
91138 53993, 98446 83143

**WANTED**
SS Distributors
Mineral Water and Beverages
Male candidate for sales and marketing. Male and Female candidate for accounts. Minimum 2 years of expierience. Davanagere.
94496 02786, 99808 96782

**ಖಾನಾವಳಿಗೆ ಮನೆ ಬೇಕಾಗಿದೆ**
ವಾಸವಾಗಿದ್ದುಕೊಂಡು ಖಾನಾವಳಿ ಮಾಡಲು ಅನುಕೂಲ ಇರುವ ಮನೆ ಅಥವಾ ಮಳಿಗೆ ಇದ್ದರೆ ತಿಳಿಸಿ, ಖಾನಾವಳಿ ಬಿಟ್ಟು ಕೊಡುವುದಿದ್ದರೆ ತಿಳಿಸಿ.
88842 41721

**ಬೇಕಾಗಿದ್ದಾರೆ**
ಫೀಲ್ಡ್ ಸೇಲ್ಸ್ ಎಕ್ಸಿಕ್ಯೂಟಿವ್ ಪುರುಷರಿಗೆ ಮಾತ್ರ
ಒಂದು ವರ್ಷ ಕಾರ್ಯಾನುಭವ ಇರುವ ಫೀಲ್ಡ್ ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ದ್ವಿಚಕ್ರ ವಾಹನ ಹೊಂದಿರುವ ಅಭ್ಯರ್ಥಿಗಳು ಸಂಪರ್ಕಿಸಿ.
ಕಾರ್ಯವ್ಯಾಪ್ತಿ ದಾವಣಗೆರೆ
7892229835

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಜಮೀನು ಮಾರಾಟಕ್ಕಿದೆ**
ದಾವಣಗೆರೆಯಿಂದ 12ಕಿ.ಮೀ ಹತ್ತಿರವಿರುವ ಜಮೀನು ಮಾರಾಟಕ್ಕಿದೆ 1 ಎಕರೆ 2 ವರ್ಷದ ಅಡಿಕೆ ಗಿಡಗಳು 2 ಬೋರ್ ವೆಲ್‌ಗಳಿವೆ.
ಬೆಲೆ ಐವತ್ತು ಲಕ್ಷ ಹಿರೇತೊಗಲೇರಿ.
82172 37969

**HOUSE FOR RENT**
# 5628/D-23, 2BHK Ground Floor, 4th main, 6th Cross (left) East facing, Near Indoor Nehru Stadium, S.S. Badavane `B' Block.
House Name : Shivaratna
94489 29509

**ಮನೆ ಬಾಡಿಗೆಗೆ ಇದೆ**
ಮೊದಲನೇ ಮಹಡಿ, 2 BHK ಜೆ.ಹೆಚ್. ಪಟೇಲ್ ಬಡಾವಣೆ 'ಸಿ' ಬ್ಲಾಕ್, 2ನೇ ಮೇನ್ ಶಾಮನೂರು.
98863 84948

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET / CLAT - Printed Notes + Study Materials
97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards,
NEET / IIT - JEE / Olympiads
Memory Techniques + Hand Writing
97398 65711, 94822 44114

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್‌ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ.
ಭೇಟಿಯ ಸಮಯ ಸಂಜೆ 6.30ರ ನಂತರ
ಶ್ರೀ ಗುರು ಎಂಟರ್‌ಪ್ರೈಸಸ್
#579, 6ನೇ ಮುಖ್ಯರಸ್ತೆ, ಪಿಜೆ ಬಡಾವಣೆ, ದಾವಣಗೆರೆ.

**ಉದ್ಯೋಗಾವಕಾಶ**
ಹೆಸರಾಂತ ಕಂಪನಿಯಾದ ಸಂಜೀವಿನಿ ಹೆಲ್ತ್‌ಕೇರ್‌ನಲ್ಲಿ ಹೋಂ ನರ್ಸಿಂಗ್ ಕೆಲಸ ಮಾಡಲು (ವಯೋವೃದ್ಧರನ್ನು ನೋಡಿಕೊಳ್ಳಲು) ಮಹಿಳೆಯರು, ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ 7th, 10th PUC, ANM, GNM, Any Degree ಉಚಿತ ಊಟ, ವಸತಿಯೊಂದಿಗ 18,000 ರೂ. ನಿಂದ 20,000 ರೂ. ಸಂಬಳವಿದೆ.
ಆಸಕ್ತಿ ಇರುವವರು ಸಂಪರ್ಕಿಸಿ.
95355 32369

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ ಫೈನಾನ್ಸ್,**
GST & Income Tax
ನೋಂದಣಿ ನವೀಕರಣ ಮಾಡಿಕೊಡುತ್ತೇವೆ.
Mob: 94838 62779

**ERA GROUP OF COMPANIES**
**CALL CENTRE**
ಮಹಿಳೆಯರು ಟೆಲಿಕಾಲರ್ಸ್ ಬೇಕಾಗಿದ್ದಾರೆ. ಕನ್ನಡ ಮತ್ತು ಇಂಗ್ಲಿಷ್ ಓದಲು ಮತ್ತು ಬರೆಯಲು ಬರಬೇಕು.
Qualification: Anything is OK
ಸ್ಥಳ: 1) K.R. Market, Davanagere
2) Charlie Pailwan Road, Davangere.
Contact: 99167 36057, 95350 51589

**ಮನೆ ಮಾರಾಟಕ್ಕೆ ಇದೆ**
3 BHK ಡ್ಯೂಪ್ಲೆಕ್ಸ್, 22 ಚದುರದ (30x50 ವಿಸ್ತೀರ್ಣ) ಸಿ ಬ್ಲಾಕ್, ಪಂಪ್‌ಹೌಸ್ ಹತ್ತಿರ, ಸರಸ್ವತಿ ನಗರ
ಎನ್. ಮಂಜುನಾಥ್ ಗೌಡ
99720 27005

**Requirement**
Receptionist (only female)
Age: 20-25, Salary: 10,000 - 15,000
HAIRPOINT SALON
MCC `B' block, 7th main 3rd cross, Davanagere.
9148319342, 9738664400
08192220755

# ಮಳೆ ಹಾನಿಗೆ ತಕ್ಷಣವೇ ಪರಿಹಾರ ನೀಡಲು ಒತ್ತಾಯ

ದಾವಣಗೆರೆ, ಅ. 27 - ಹಿಂಗಾರು ಮಳೆಯಿಂದ ರೈತರು ಕಂಗಾಲಾಗಿದ್ದಾರೆ. ದಾವಣಗೆರೆ ಜಿಲ್ಲೆಯಲ್ಲಿ ರೈತರು ಬೆಳೆ ಕಳೆದುಕೊಂಡು ಸಂಕಷ್ಟದಲ್ಲಿದ್ದು, ಕೂಡಲೇ ಪರಿಹಾರ ನೀಡಬೇಕು ಎಂದು ಸ್ವಾಭಿಮಾನಿ ಬಳಗದ ರಾಜ್ಯಾಧ್ಯಕ್ಷ ಜಿ.ಬಿ. ವಿನಯ್ ಕುಮಾರ್ ಒತ್ತಾಯಿಸಿದ್ದಾರೆ.



ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಜಿಲ್ಲೆಯಲ್ಲಿ ಮುಂಗಾರು ಹಾಗೂ ಹಿಂಗಾರು ಮಳೆ ಅಬ್ಬರಿಸಿದೆ. ಇದರಿಂದಾಗಿ ರೈತರು ಬೆಳೆದಿದ್ದ ಮೆಕ್ಕೆಜೋಳ, ರಾಗಿ, ಟೊಮ್ಯಾಟೊ, ಭತ್ತ ಸೇರಿದಂತೆ ಹಲವು ಬೆಳೆಗಳು ನೀರು ಪಾಲಾಗಿವೆ. ರೈತರು ಸಂಕಷ್ಟದಲ್ಲಿದ್ದರೂ ಇದುವರೆಗೆ ಪರಿಹಾರ ನೀಡುವ ಕಾರ್ಯ ನಡೆದಿಲ್ಲ. ಸಮೀಕ್ಷೆಯು ಪಾರದರ್ಶಕವಾಗಿ ನಡೆದು ಅರ್ಹ ಫಲಾನುಭವಿಗಳಿಗೆ ಸರ್ಕಾರದ ನೆರವು ಸಿಗುವಂತಾಗಬೇಕು ಎಂದು ಒತ್ತಾಯಿಸಿದ್ದಾರೆ.

ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಮಳೆ ಸುರಿದಿರುವುದರಿಂದ ಉತ್ತಮ ಬೆಳೆ ನಿರೀಕ್ಷೆಯಲ್ಲಿದ್ದ ರೈತರು ಬೆಳೆ ಕಳೆದುಕೊಳ್ಳುವಂತಾಗಿದೆ. ಮುಂಗಾರು ಮತ್ತು ಹಿಂಗಾರು ಮಳೆ ಅಬ್ಬರಕ್ಕೆ ಕನಿಷ್ಠ ಎಂದರೂ ಶೇ. 40 ರಷ್ಟು ಬೆಳೆ ಕಳೆದುಕೊಂಡಿರುವ ರೈತರು ಹಾಕಿರುವ ಅಸಲು ಬರುವುದು ಕಷ್ಟ ಎಂಬಂತಾಗಿದೆ. ಯಾವಾಗಲೂ ಬೆಳೆ ಹಾನಿ ಸಮೀಕ್ಷೆ ತಡವಾಗಿ ಆಗುತ್ತದೆ. ಅರ್ಹ ರೈತರಿಗೆ ನೆರವು ಸಿಗುವುದು ತಡವಾಗುತ್ತದೆ. ಆದಕಾರಣ ಎಷ್ಟು ಸಾಧ್ಯವೋ ಅಷ್ಟು ಬೇಗ ಪರಿಹಾರ ನೀಡಲು ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಜಗಳೂರು, ಹೊನ್ನಾಳಿ, ದಾವಣಗೆರೆ ದಕ್ಷಿಣ, ಚನ್ನಗಿರಿ ಸೇರಿದಂತೆ ಹಲವೆಡೆ ಹೆಚ್ಚು ಮಳೆಯಾಗಿದೆ. ಕೈಗೆ ಬಂದ ಫಸಲು ಬಾಯಿಗೆ ಬರಲಿಲ್ಲ ಎಂಬಂಥ ಸ್ಥಿತಿಯಲ್ಲಿದ್ದು, ಜನಪ್ರತಿನಿಧಿಗಳು ಇದುವರೆಗೆ ಭೇಟಿ ನೀಡದಿರುವುದು ಸರಿಯಲ್ಲ. ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸಂಸದರು ಆದಷ್ಟು ಬೇಗ ನೆರೆಯಿಂದ ತತ್ತರಿಸಿ ಹೋಗಿರುವ ರೈತರು ಹಾಗೂ ಜನರಿಗೆ ಸರ್ಕಾರದ ನೆರವು ದೊರಕಿಸಿಕೊಡಲು ಶ್ರಮಿಸಬೇಕು ಎಂದು ವಿನಯ್ ಕುಮಾರ್ ಒತ್ತಾಯಿಸಿದ್ದಾರೆ.

# ಭೂ ಸುಧಾರಣೆ ಕಾಯ್ದೆ ರದ್ದುಪಡಿಸಲು ರೈತ ಸಂಘ ಆಗ್ರಹ

ದಾವಣಗೆರೆ, ಅ. 27-ಚಿತ್ರದುರ್ಗದಲ್ಲಿ ನಡೆದ ಸಭೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಸಮಿತಿಯನ್ನು ಪೂರ್ಣ ಪ್ರಮಾಣದಲ್ಲಿ ರಚಿಸಲಾಗಿದೆ ಎಂದು ಸಂಘದ ಗೌರವಾಧ್ಯಕ್ಷ ಚಾಮರಸ ಮಾಲೀ ಪಾಟೀಲ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಂಘಟನೆಯ ಮೂಲ ಸಿದ್ಧಾಂತಕ್ಕೆ ಚ್ಯುತಿಯಾಗದಂತೆ ತಾತ್ವಿಕ ಚಿಂತನೆಯುಳ್ಳ ಪ್ರಾಮಾಣಿಕ ಹೋರಾಟಗಾರರ ಪಡೆ ರಚಿಸಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ರೈತ ವಿರೋಧಿ ನೀತಿಗಳ ವಿರುದ್ಧ ಸಮರ್ಥ ಹೋರಾಟ ನಡೆಸಲು ಯುವ ಪಡೆಗೂ ಹೆಚ್ಚಿನ ಗಮನ ನೀಡಲಾಗಿದೆ ಎಂದರು.

ಕಳೆದ ವರ್ಷ ರಾಜ್ಯದ 192 ತಾಲ್ಲೂಕುಗಳಲ್ಲಿ ಭೀಕರ ಬರಗಾಲ ಇತ್ತು. ಸರ್ಕಾರ ಸಮರ್ಪಕವಾಗಿ ಪರಿಹಾರ ನೀಡಿಲ್ಲ.

ಕಾಟಾಚಾರಕ್ಕೆ ಕೆಲವರಿಗೆ ನೀಡಿಲ್ಲ. ಪರಿಹಾರ ಬರುತ್ತದೆ ಎಂದು ಕಾಲ ತಳ್ಳುತ್ತಿದೆ.

ಈಗ ಅತಿವೃಷ್ಟಿ ಆಗಿದೆ. ಸರ್ಕಾರ ಸರಿಯಾಗಿ ಪರಿಹಾರ ನೀಡಬೇಕೆಂದು ಒತ್ತಾಯಿಸಿದರು.

ಸಂಘದ ರಾಜ್ಯಾಧ್ಯಕ್ಷ ಬಡಗಲಪುರದ ನಾಗೇಂದ್ರ ಮಾತನಾಡಿ, ಕುಲಾಂತರಿ ಬೀಜ ನೀತಿಯ ವಿರುದ್ಧ ರೈತರು ತೀವ್ರ ಸ್ವರೂಪದ ಹೋರಾಟ ನಡೆಸುತ್ತಿದ್ದಾರೆ.

ಆದರೂ ಕೇಂದ್ರ ಕುಲಾಂತರಿ ಬೀಜ ನೀತಿ ಜಾರಿಗೆ ಮುಂದಾಗಿದೆ. ರಾಜ್ಯ ಸರ್ಕಾರಕ್ಕೆ ತಿರಸ್ಕರಿಸುವ ಅಧಿಕಾರ ಇದೆ. ಅದರ ಪ್ರಕಾರ ರಾಜ್ಯ ಸರ್ಕಾರ ಕುಲಾಂತರಿ ಬೀಜಗಳಿಗೆ ಅನುಮತಿ ನೀಡಬಾರದು.

ಭೂ ಸುಧಾರಣೆ ಕಾಯ್ದೆ ರದ್ದುಪಡಿಸಬೇಕು. ವಿದ್ಯುತ್ ನೀತಿಯನ್ನೂ ಸಹ ಜಾರಿಗೆ ತರಬಾರದೆಂದು ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಅರುಣ್ ಕುಮಾರ್ ಕುರುಡಿ, ಶಿವಾನಂದ ಕುಗ್ವೆ, ಬುಳ್ಳಾಪುರದ ಹನುಮಂತಪ್ಪ ಮತ್ತಿತರರು ಉಪಸ್ಥಿತರಿದ್ದರು.

# ಕಾನೂನು ಯಾರನ್ನೂ ಭಯಪಡಿಸುವುದಿಲ್ಲ



## ನ್ಯಾ. ಮಹಾವೀರ ಕರೆಣ್ಣವರ

ದಾವಣಗೆರೆ, ಅ.27- ಕಾನೂನು ಇರುವುದು ಯಾರನ್ನೂ ಭಯಪಡಿಸಲು ಅಲ್ಲ. ಬದಲಿಗೆ ನೊಂದವರಿಗೆ ನ್ಯಾಯ ಕೊಡಿಸುವ ಮೂಲ ಉದ್ದೇಶವನ್ನು ಕಾನೂನು ಹೊಂದಿದೆ ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಕರೆಣ್ಣವರ ಹೇಳಿದರು.

ನಗರದ ರೋಟರಿ ಬಾಲಭವನದಲ್ಲಿ ವಾಲ್ಮೀಕಿ ಪ್ರತಿಷ್ಠಾನ, ಸಾರ್ವಜನಿಕ ವಾಲ್ಮೀಕಿ ಜಯಂತ್ಯೋತ್ಸವ ಸಮಿತಿಗಳ ಆಶ್ರಯದಲ್ಲಿ 3ನೇ ವರ್ಷದ ಶ್ರೀ ವಾಲ್ಮೀಕಿ ಜಯಂತಿ ಅಂಗವಾಗಿ ಮೊನ್ನೆ ಹಮ್ಮಿಕೊಂಡಿದ್ದ ಜನ ಸಾಮಾನ್ಯರಿಗೆ ಕಾನೂನು ಸೇವೆಗಳ ಕುರಿತು ಮಾಹಿತಿ ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಅನ್ಯಾಯವಾದಾಗ ನನಗೆ ನ್ಯಾಯ ಸಿಗುತ್ತದೆಯೋ ಇಲ್ಲವೋ ಎನ್ನುವ ಭಯ ಬಿಟ್ಟು, ಮೊದಲು ಕಾನೂನು ಸೇವಾ ಪ್ರಾಧಿಕಾರವನ್ನು ಸಂಪರ್ಕಿಸಿದರೆ ಉಚಿತ ಕಾನೂನು ನೆರವು ದೊರೆಯಲಿದೆ. ಹಾಗಾಗಿ ಕಾನೂನು ಈ ದೇಶದ ಜನರ ನೆರವಿಗೆ ಇದೆಯೇ ಹೊರತು ಭಯಪಡಿಸಲು ಅಲ್ಲ ಎಂದು ಹೇಳಿದರು.

ಪ್ರತಿಯೊಬ್ಬರೂ ಕಾನೂನಿನ ತಿಳುವಳಿಕೆ ಹೊಂದಿದಾಗ ಮಾತ್ರ ಅನ್ಯಾಯ ಪ್ರಶ್ನಿಸುವ ಗುಣ ಬರುತ್ತದೆ. ಆಗ ಸಮ ಸಮಾಜ ನಿರ್ಮಾಣ ಸಾಧ್ಯವಾಗಲಿದೆ. ಭಾರತದ ಸಂವಿಧಾನ ರಚನೆಗೆ ರಾಮಾಯಣ, ಮಹಾಭಾರತದಂತಹ ಮಹಾಕಾವ್ಯಗಳು ಮೂಲ ಪ್ರೇರಣೆಯಾಗಿವೆ. ಈ ಮಹಾಕಾವ್ಯಗಳಲ್ಲಿ ಬರುವ ನಮ್ಮ ಕೌಟುಂಬಿಕ ವ್ಯವಸ್ಥೆ, ನಮ್ಮ ಸಂಸ್ಕೃತಿ, ಆಚಾರ, ವಿಚಾರ, ಸಾಮಾಜಿಕ ಮೌಲ್ಯಗಳನ್ನು ನಮ್ಮ ಸಂವಿಧಾನ ಒಳಗೊಂಡಿದೆ. ಹಾಗಾಗಿ ರಾಮಾಯಣವನ್ನು ಭಾರತೀಯ ಸಂಸ್ಕೃತಿಯ ಮೊದಲ ಸಂವಿಧಾನ ಎಂದರೆ ತಪ್ಪಾಗಲಾರದು ಎಂದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್ ಮಾತನಾಡಿ, ಮನುಷ್ಯನಿಗೆ ಜೀವಿಸಲು ಹೇಗೆ ಆಹಾರ ಅಗತ್ಯವೋ ಸಮಾಜದಲ್ಲಿ ಬದುಕಲು ಕಾನೂನು ತಿಳುವಳಿಕೆ ಕೂಡ ಅಷ್ಟೇ ಮುಖ್ಯ, ದೌರ್ಜನ್ಯ, ಅನ್ಯಾಯವಾದಾಗ ಪ್ರಶ್ನಿಸುವ ಗುಣವನ್ನು ಸಂವಿಧಾನ ನಮಗೆ ನೀಡಿದೆ. ಈ ರೀತಿಯ ಸಂವಿಧಾನ ಜಗತ್ತಿನ ಯಾವ ದೇಶದಲ್ಲಿಯೂ ಇಲ್ಲ ಎಂದರು.

ಈ ರೀತಿಯ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಕಾನೂನು ತಿಳುವಳಿಕೆ ಪಡೆದು ಸಮಾಜದಲ್ಲಿ ತಮ್ಮ ಮೇಲೆ ನಡೆಯುವ ದಬ್ಬಾಳಿಕೆ, ದೌರ್ಜನ್ಯವನ್ನು ಪ್ರಶ್ನಿಸುವ ಗುಣ ಬೆಳೆಸಿಕೊಳ್ಳಬೇಕೆಂದು ಕರೆ ನೀಡಿದ ಅವರು, ಮಕ್ಕಳಿಗಾಗಿ ಮಕ್ಕಳ ಹಕ್ಕುಗಳಿವೆ. ಬಾಲ್ಯವಿವಾಹ, ಬಾಲ ಕಾರ್ಮಿಕ ಪದ್ಧತಿ ನಿಷೇಧ ಮೊದಲಾದ ಕಾನೂನುಗಳ ಅರಿವು ಪಡೆಯಬೇಕು ಮತ್ತು ಭವಿಷ್ಯದ ಪ್ರಜೆಗಳಾದ ವಿದ್ಯಾರ್ಥಿಗಳು ಕಾನೂನು ಕುರಿತು ಹೆಚ್ಚು ತಿಳುವಳಿಕೆ ಹೊಂದಬೇಕೆಂದು ತಿಳಿಸಿದರು.

ಹಿರಿಯ ನ್ಯಾಯವಾದಿ ಬಿ.ಎಂ.ಹನುಮಂತಪ್ಪ ಮಾತನಾಡಿ, ಮಕ್ಕಳು, ಪೋಷಕರು ಮತ್ತು ಶಿಕ್ಷಕರ ಮಾರ್ಗದರ್ಶನದಲ್ಲಿ ಮುನ್ನಡೆದರೆ ಉಜ್ವಲ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ಸಮಿತಿಯ ಮುಖಂಡ ಕರಿಯಪ್ಪ ನಾಯಕ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಅಣ್ಣಾಪುರದ ಹೇಮಣ್ಣ, ಹಿರಿಯ ವಕೀಲ ಆಂಜನೇಯ ಗುರೂಜಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಸಾರ್ವಜನಿಕ ವಾಲ್ಮೀಕಿ ಜಯಂತ್ಯೋತ್ಸವ ಸಮಿತಿ ಅಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್, ಸಮಿತಿ ಸದಸ್ಯೆ ನಳಿನಮ್ಮ, ರಾಮಚಂದ್ರಪ್ಪ, ಅಂತರರಾಷ್ಟ್ರೀಯ ಈಜುಪಟು ರೇವತಿ ನಾಯಕ ಸೇರಿದಂತೆ ಇತರರು ಭಾಗವಹಿಸಿದ್ದರು.

# ಜನರಲ್ ಕೆ.ಎಸ್ ತಿಮ್ಮಯ್ಯ ನಗದು ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

ದಾವಣಗೆರೆ, ಜು. 27 - ಎಸ್.ಎಸ್.ಎಲ್.ಸಿ ಮತ್ತು 2ನೇ ಪಿ.ಯು.ಸಿ ಸಾರ್ವತ್ರಿಕ ಪರೀಕ್ಷೆಗಳಲ್ಲಿ ಗರಿಷ್ಠ ಅಂಕ ಪಡೆದ ಕರ್ನಾಟಕದ ಮೂಲ ನಿವಾಸಿ ಮಾಜಿ ಸೈನಿಕರ ಮಕ್ಕಳಿಗೆ 'ಜನರಲ್ ಕೆ.ಎಸ್. ತಿಮ್ಮಯ್ಯ' ನಗದು ಪ್ರಶಸ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ಇದೇ ದಿನಾಂಕ 30 ರೊಳಗಾಗಿ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08182-220925 ಸಂಪರ್ಕಿಸಬಹುದೆಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಉಪ ನಿರ್ದೇಶಕರು ತಿಳಿಸಿದ್ದಾರೆ.

# ಪಠ್ಯದ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷಾ ತಯಾರಿ ಅತ್ಯಗತ್ಯ

## ಎಂಎಸ್‌ಬಿ ಕಾಲೇಜ್ ಪುನಶ್ಚೇತನ ಕಾರ್ಯಕ್ರಮದಲ್ಲಿ ಪ್ರೊ. ಎಸ್.ಬಿ ಶಿವಪ್ರಸಾದ್




ದಾವಣಗೆರೆ, ಅ.22- ಪದವಿ ಪಠ್ಯದ ಜೊತೆ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಯೂ ಸಹ ಇಂದು ತುಂಬಾ ಅಗತ್ಯವಾಗಿದೆ ಎಂದು ಚಿತ್ರದುರ್ಗದ ಸ್ನಾತಕೋತ್ತರ ಕೇಂದ್ರದ ಸಹಾಯಕ ಪ್ರಾಧ್ಯಾಪಕ ಪ್ರೊ. ಎಸ್.ಬಿ ಶಿವಪ್ರಸಾದ್ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ನಗರದ ಮಾಗನೂರು ಸರ್ವ ಮಂಗಳಮ್ಮ ಬಸಪ್ಪ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಬಿಎ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿದ್ದ ಪುನಶ್ಚೇತನ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿ ಅವರು ಮಾತನಾಡಿ, ಮಾನವೀಯ ಶಾಸ್ತ್ರಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರಕ ವಿಷಯಗಳ ಕುರಿತು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

ಪದವಿ ಶಿಕ್ಷಣ ಮುಗಿಯುವುದರೊಳಗೆ ಸ್ಪರ್ಧಾತ್ಮಕ ಪರೀಕ್ಷೆಯ ಭದ್ರ ಬುನಾದಿಯನ್ನು ಯಾವ ಯಾವ ಆಯಾಮದಲ್ಲಿ ನಿರ್ಮಿಸಿಕೊಳ್ಳಬೇಕು ಎಂಬುದನ್ನು ಅವರು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ನೀಲಾಂಬಿಕ ಜಿ.ಸಿ ಅವರು ಮಾತನಾಡಿ, ಆಧುನಿಕ ತಂತ್ರ ಜ್ಞಾನದ ಈ ಕಾಲದಲ್ಲಿ ಎಲ್ಲಾ ನಿಮ್ಮ ಅಂಗೈಯಲ್ಲಿ ಸಿಗುವ ಅವಕಾಶಗಳಿವೆ. ಅವುಗಳನ್ನು ಬಳಸಿಕೊಂಡು ಭವಿಷ್ಯವನ್ನು ರೂಪಿಸಿಕೊಳ್ಳಬೇಕೆಂದು ಹೇಳಿದರು.

ಇತಿಹಾಸ ವಿಭಾಗದ ಮುಖ್ಯಸ್ಥ ಪ್ರೊ. ಈಶ್ವರ್ ಕೆ. ವೈ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಎಂ ಮಂಜಪ್ಪ ವಂದಿಸಿದರು. ಕು. ಕವನ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಉಪನ್ಯಾಸಕಿ ಪವಿತ್ರ ನಿರೂಪಿಸಿದರು. ಈ ಸಂದರ್ಭದಲ್ಲಿ ಡಾ. ವಿಜಯ್ ಕುಮಾರ್ ಎ. ಬಿ, ಡಾ. ರಾಘವೇಂದ್ರ ಆರ್, ಡಾ. ಪ್ರವೀಣ್ ಕುಮಾರ್ ಓ, ಪ್ರೊ. ಸತೀಶ್ ಹಾಗೂ ಬೋಧಕ, ಬೋಧಕರ ವರ್ಗದವರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಪೈಪ್‌ಲೈನ್ ಒಡೆದು ನೀರು ಪೋಲು; ಜಲಸಿರಿ ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯ



ದಾವಣಗೆರೆ, ಅ.27- ನಗರದಲ್ಲಿ ಕುಡಿಯುವ ನೀರಿಗಾಗಿ ಕಲ್ಪಿಸಿರುವ 24/7 ಜಲಸಿರಿ ಯೋಜನೆಯ ನೀರಿನ ಪೈಪ್‌ಲೈನ್ ಒಡೆದು ಕುಡಿಯುವ ನೀರು ಪೋಲಾಗುತ್ತಿದ್ದರೂ ಅಧಿಕಾರಿಗಳು ಇತ್ತ ಕಡೆ ಗಮನ ವಹಿಸದೇ ನಿರ್ಲಕ್ಷಿಸಿರುವುದು ಜಲಸಿರಿ ಯೋಜನೆಯು ಸಾರ್ವಜನಿಕರಿಗೆ ಎಷ್ಟರ ಮಟ್ಟಿಗೆ ತಲುಪಿದೆ ಎಂಬುದು ತಿಳಿಸಬೇಕಿದೆ ಎಂದು 33ನೇ ವಾರ್ಡ್‌ನ ಸರಸ್ವತಿ ನಗರ 'ಸಿ' ಬ್ಲಾಕ್ ನಿವಾಸಿಗಳು ಬೇಸರ ವ್ಯಕ್ತಪಡಿಸಿದ್ದಾರೆ. ರಸ್ತೆಯಲ್ಲಿ ಜಲಸಿರಿ ಪೈಪ್‌ಲೈನ್ ಒಡೆದು ನೀರು ಪೋಲಾಗುತ್ತಿರುವುದನ್ನು ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಸ್ಪಂದನೆ ನೀಡದೇ ಇರುವುದಕ್ಕೆ ಬೇಸರ ವ್ಯಕ್ತಪಡಿಸಿದ ಸ್ಥಳೀಯರಾದ ಎಲ್‌ಐಸಿ ರುದ್ರೇಶ್ ಅವರು ವಾರ್ಡ್‌ನ ಸದಸ್ಯರು, ಮಹಾಪೌರರು ಮತ್ತು ಉಸ್ತುವಾರಿ ಸಚಿವರು ಇತ್ತ ಗಮನಹರಿಸಿ ಸಾರ್ವಜನಿಕರಿಗೆ ಜಲಸಿರಿ ಯೋಜನೆ ಫಲಪ್ರದವಾಗುವಂತೆ ಮಾಡಬೇಕೆಂದು ಕೋರಿದ್ದಾರೆ.

# ಎಲ್.ಐ.ಸಿ. ಶಾಖೆ -1ರ ಏಜೆಂಟರ ಸಂಘದ ಸಭೆಯಲ್ಲಿ ಸಂಸದರಿಗೆ ಸನ್ಮಾನ



ದಾವಣಗೆರೆ, ಅ. 27 - ಸ್ಥಳೀಯ ಎಲ್.ಐ.ಸಿ. ಏಜೆಂಟ್ಸ್ ಅಸೋಸಿಯೇಷನ್ ಶಾಖೆ-1ರ 18ನೇ ವಾರ್ಷಿಕ ಮಹಾಸಭೆಯು ಸಂಘದ ಸಮುದಾಯ ಭವನದಲ್ಲಿ ಸಂಘದ ಅಧ್ಯಕ್ಷ ಎಸ್.ಜಿ. ಪಂಪಣ್ಣನವರ ಅಧ್ಯಕ್ಷತೆಯಲ್ಲಿ ಕಳೆದ ವಾರ ನಡೆಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿದ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಸಂಘದ ವತಿಯಿಂದ ಸನ್ಮಾನಿಸಿ, ಗೌರವಿಸಲಾಯಿತು.

2023-24ನೇ ಸಾಲಿನ ಶತಕ ವೀರ ಪ್ರತಿನಿಧಿಗಳಿಗೆ ಬಹುಮಾನ ವಿತರಣೆ, 25 ವರ್ಷ ಸೇವೆ ಸಲ್ಲಿಸಿದ ಪ್ರತಿನಿಧಿಗಳಿಗೆ ಸನ್ಮಾನ, ಪ್ರತಿನಿಧಿಗಳ ಪ್ರತಿಭಾನ್ವಿತ ಮಕ್ಕಳಿಗೆ ಬಹುಮಾನ ವಿತರಣೆಯನ್ನು ಭಾರತೀಯ ಜೀವ ವಿಮಾ ನಿಗಮದ 1ನೇ ಶಾಖಾ ಹಿರಿಯ ಪ್ರಬಂಧಕ ಶಿವಪ್ಪ ನಾಯ್ಕ ಅವರು ಮಾಡಿದರು.

2024-25ನೇ ಕಾರ್ಯಕಾರಿ ಮಂಡಳಿಯನ್ನು ಸರ್ವಾನುಮತದಿಂದ ರಚಿಸಲಾಗಿದ್ದು, ಗೌರವಾಧ್ಯಕ್ಷರನ್ನಾಗಿ ಎಂ.ಎಸ್.ನಾಗರಾಜ್, ಅಧ್ಯಕ್ಷರನ್ನಾಗಿ ಎಸ್.ಜಿ.ಪಂಪಣ್ಣನವರನ್ನು ಉಪಾಧ್ಯಕ್ಷರನ್ನಾಗಿ ಎಸ್.ಬಿ. ಲೋಕೇಶ್, ಹೆಚ್.ಎಂ. ಚಂದ್ರಪ್ಪ, ಸಿ. ನಿಜಲಿಂಗಪ್ಪ, ಕಾರ್ಯದರ್ಶಿಯನ್ನಾಗಿ ಡಿ.ಸಿ. ಶಿವಮೂರ್ತಿ, ಖಜಾಂಚಿಯನ್ನಾಗಿ ಎಂ.ಎಂ. ಮಹಾದೇವಪ್ಪ, ಸಂಘಟನಾ ಕಾರ್ಯದರ್ಶಿ ಹೆಚ್. ಸಿದ್ದರಾಮೇಶ್ವರ್‌ರವರನ್ನು ಹಾಗೂ ನಿರ್ದೇಶಕರುಗಳನ್ನು ಆಯ್ಕೆ ಮಾಡಲಾಯಿತು.

# ಕುಂಬಳೂರು : ದೊಡ್ಡ ಎಡೆ ಜಾತ್ರೆ



ಮಲೇಬೆನ್ನೂರು, ಅ.27- ಕುಂಬಳೂರು ಗ್ರಾಮದ ಶ್ರೀ ಬೀರಲಿಂಗೇಶ್ವರ ಸ್ವಾಮಿಯ ದೇವಸ್ಥಾನದಲ್ಲಿ ಮರಿ ಬನ್ನಿ ಅಂಗವಾಗಿ ದೊಡ್ಡ ಎಡೆ ಜಾತ್ರೆ ಭಾನುವಾರ ಭಕ್ತರ ಸಮ್ಮುಖದಲ್ಲಿ ಸಂಭ್ರಮದಿಂದ ಜರುಗಿತು. ಬೀರಪ್ಪ ದೇವರಿಗೆ ಈರಗಾರರು ಶ್ರದ್ಧಾ -ಭಕ್ತಿಯಿಂದ ದೊಡ್ಡ ಎಡೆ ಪೂಜೆ ನೆರವೇರಿಸಿದರು.

# ವಿದ್ಯಾನಗರದಲ್ಲಿ ಬಿಜೆಪಿ ಸದಸ್ಯತ್ವ ಅಭಿಯಾನ



ದಾವಣಗೆರೆ, ಅ.27- ಭಾರತೀಯ ಜನತಾ ಪಾರ್ಟಿಯ ಸದಸ್ಯತ್ವ ಅಭಿಯಾನವನ್ನು ವಿದ್ಯಾನಗರದಲ್ಲಿ ನಡೆಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಮಾಜಿ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್, ವಿನಯ್ ದಿಳ್ಯಪ್ಪ, ನನ್ನಯ್ಯ, ಶಿವಕುಮಾರ್ ಮತ್ತಿತರರು ಭಾಗವಹಿಸಿ ಸದಸ್ಯತ್ವ ಅಭಿಯಾನಕ್ಕೆ ಕೈಜೋಡಿಸಿದರು.

# ನಗರದಲ್ಲಿ ನಾಳೆ ಪಾರಂಪರಿಕ ವೈದ್ಯ ಪರಿಷತ್‌ನಿಂದ ಧನ್ವಂತರಿ ಜಯಂತ್ಯುತ್ಸವ

ದಾವಣಗೆರೆ, ಅ. 27- ಪಾರಂಪರಿಕ ವೈದ್ಯ ಪರಿಷತ್ ಹಾಗೂ ಕನ್ನಡ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ನಾಡಿದ್ದು ದಿನಾಂಕ 29 ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ನಗರದ ಕುವೆಂಪು ಕನ್ನಡ ಭವನದಲ್ಲಿ ಧನ್ವಂತರಿ ಜಯಂತ್ಯುತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಪಾರಂಪರಿಕ ವೈದ್ಯ ಪರಿಷತ್ತಿನ ತಾಲ್ಲೂಕು ಅಧ್ಯಕ್ಷೆ ಶಿವಲಿಂಗಮ್ಮ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಧನ್ವಂತರಿ ಜಯಂತ್ಯುತ್ಸವದ ಪ್ರಯುಕ್ತ ಅಸಾಧ್ಯವಾದ ತಲೆನೋವಿಗೆ ಮತ್ತು ಮೂತ್ರಕೋಶದ ಕಲ್ಲು ನಿವಾರಣೆಗೆ ಉಚಿತ ಚಿಕಿತ್ಸಾ ಶಿಬಿರವನ್ನು ಏರ್ಪಡಿಸಲಾಗಿದ್ದು, ಇದನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಮನವಿ ಮಾಡಿದರು.

29 ರಂದು ಬೆಳಿಗ್ಗೆ 10 ಕ್ಕೆ ಪ್ರಾಥಮಿಕ ಹಂತದ ಆರೋಗ್ಯದಲ್ಲಿ ಗಿಡ ಮೂಲಿಕೆಗಳ ಉಪಯೋಗವನ್ನು ತಿಳಿಸುವ 'ಹಿತ್ತಲಗಿಡವೇ ಮದ್ದು' ಎನ್ನುವ ವಿಷಯ ಕುರಿತು ನುರಿತ ಪಾರಂಪರಿಕ ವೈದ್ಯರಿಂದ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಹೆಬ್ಬಾಳು ವಿರಕ್ತಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಬೆಳಿಗ್ಗೆ 11 ಕ್ಕೆ ಧನ್ವಂತರಿ ಪೂಜಾ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ನೆರವೇರಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಶಾಸಕ ಕೆ.ಎಸ್. ಬಸವಂತಪ್ಪ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ, ಪಾರಂಪರಿಕ ವೈದ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ನೇರ್ಲಿಗಿ ಗುರುಸಿದ್ಧಪ್ಪ, ಜಿಲ್ಲಾ ಸಂಚಾಲಕಿ ಕೆ.ಎಂ. ಪುಷ್ಪಲತಾ ಮತ್ತಿತರರು ಭಾಗವಹಿಸಲಿದ್ದಾರೆ.

ಪಾರಂಪರಿಕ ವೈದ್ಯ ಪರಿಷತ್ ತಾಲ್ಲೂಕು ಅಧ್ಯಕ್ಷೆ ಶಿವಲಿಂಗಮ್ಮ ಅಧ್ಯಕ್ಷತೆ ವಹಿಸಲಿದ್ದಾರೆ. ಇದೇ ವೇಳೆ ಪಾರಂಪರಿಕ ವೈದ್ಯಕ ಪರಿಷತ್ ಶಿಬಿರದಲ್ಲಿ ತರಬೇತಿ ಪಡೆದ 55 ಶಿಬಿರಾರ್ಥಿಗಳಿಗೆ ಸರ್ಟಿಫಿಕೇಟ್ ವಿತರಣೆ ಮಾಡಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಪಾರಂಪರಿಕ ವೈದ್ಯ ಪರಿಷತ್ ಪದಾಧಿಕಾರಿಗಳಾದ ಕೆ.ಪಿ. ಲತಾ, ಮಮತಾ ನಾಗರಾಜ್, ಪುಷ್ಪಲತಾ ಉಪಸ್ಥಿತರಿದ್ದರು.

# ನಿಧಿ ಬೇತೂರ್, ಸಮರ್ಥ್ ಬೇತೂರ್‌ಗೆ ಚಿನ್ನದ ಪದಕ



ದಾವಣಗೆರೆ, ಅ. 27 - ಹುಬ್ಬಳ್ಳಿಯಲ್ಲಿ ಕಳೆದ ವಾರ ನಡೆದ ಅಂತರರಾಷ್ಟ್ರೀಯ ಮಟ್ಟದ ಕರಾಟೆ ಚಾಂಪಿಯನ್ ಶಿಪ್ 2024 ಸ್ಪರ್ಧೆಯ 10-11 ವರ್ಷದ ಸಬ್ ಜ್ಯೂನಿಯರ್ ವಿಭಾಗದಲ್ಲಿ ನಗರದ ನಿಧಿ ಬೇತೂರ್ ಹಾಗೂ 6 ವರ್ಷದ ವಿಭಾಗದಲ್ಲಿ ಸಮರ್ಥ್ ಬೇತೂರು ಕರಾಟೆ ಸ್ಪರ್ಧೆಯ ಕಟಾ ಹಾಗೂ ಕುಮಿಟೆ ವಿಭಾಗಗಳಲ್ಲಿ ತಲಾ 2 ಚಿನ್ನದ ಪದಕ ಪಡೆದಿದ್ದಾರೆ.

ಕೆ.ಪಿ. ಜೋಸ್ ಅವರಿಂದ ತರಬೇತಿ ಪಡೆದಿರುವ ನಗರದ ನಿಜಲಿಂಗಪ್ಪ ಬಡಾವಣೆಯ ಬಾಪೂಜಿ ಶಾಲೆಯ 6ನೇ ತರಗತಿ ವಿದ್ಯಾರ್ಥಿನಿ ನಿಧಿ ಹಾಗೂ 1ನೇ ತರಗತಿ ವಿದ್ಯಾರ್ಥಿ ಸಮರ್ಥ್, ಅಭಿಷೇಕ್ ಬೇತೂರು ಹಾಗೂ ಶ್ವೇತಾ ದಂಪತಿ ಮಕ್ಕಳು.

# ಇಸ್ರೇಲ್ ಬಸ್ ಮೇಲೆ ಲಾರಿಯಿಂದ ದಾಳಿ, 35 ಜನರಿಗೆ ಗಾಯ

ಟೆಲ್ ಅವೀವ್, ಅ. 27 - ಇಸ್ರೇಲ್‌ನ ಟೆಲ್ ಅವೀವ್ ನಗರದಲ್ಲಿ ನಿಲ್ದಾಣ ಒಂದರಲ್ಲಿ ನಿಂತಿದ್ದ ಬಸ್ ಮೇಲೆ ಲಾರಿ ಗುದ್ದಿದ್ದು 35 ಜನ ಗಾಯಗೊಂಡಿದ್ದಾರೆ.

ದಾಳಿ ನಡೆಸಿದ ವ್ಯಕ್ತಿ ಇಸ್ರೇಲ್‌ನ ಅರಬ್ ನಾಗರಿಕ ಎಂದು ಪೊಲೀಸರು ಹೇಳಿದ್ದಾರೆ. ಇಸ್ರೇಲ್ ಗುಪ್ತಚರ ಸಂಸ್ಥೆಯಾದ ಮೊಸಾದ್ ಕೇಂದ್ರ ಕಚೇರಿ ಬಳಿ ಈ ದಾಳಿ ನಡೆಸಲಾಗಿದೆ.

ವಾರಾಂತ್ಯದ ರಜೆಯ ನಂತರ ಕೆಲಸಕ್ಕೆ ಮರಳುತ್ತಿದ್ದವರು ಇದ್ದ ಬಸ್ ಮೇಲೆ ದಾಳಿ ನಡೆಸಲಾಗಿದೆ. ಗಾಯಗೊಂಡವರಲ್ಲಿ ಆರು ಜನರ ಸ್ಥಿತಿ ಗಂಭೀರವಾಗಿದೆ.

ದಾಳಿ ನಡೆಸಿದ ವ್ಯಕ್ತಿಯನ್ನು ತಟಸ್ಥಗೊಳಿಸಲಾಗಿದೆ ಎಂದು ಇಸ್ರೇಲ್ ಪೊಲೀಸ್ ವಕ್ತಾರರು ಹೇಳಿದ್ದಾರೆ.

# ಶೋಷಣೆ ವಿರುದ್ಧ ಹೋರಾಡುತ್ತಿದ್ದ ಕಬ್ಬಳ್ಳಿ ಬಸವರಾಜ್ ಸೇವೆ ಶ್ಲಾಘನೀಯ

ಹರಪನಹಳ್ಳಿ, ಅ. 27 - ಪ್ರಗತಿ ಪರ ಹೋರಾಟಗಾರ ದಿ. ಕಬ್ಬಳ್ಳಿ ಬಸವರಾಜ್ ಅವರ ನುಡಿ ನಮನ ಕಾರ್ಯಕ್ರಮವು ಅರಸೀಕೆರೆ ಗ್ರಾಮದ ಕೋಲಶಾಂತೇಶ್ವರ ಮಠದಲ್ಲಿ ಅರಸಿಕೆರೆ ಕೋಲಶಾಂತೇಶ್ವರ ಮಠದ ಶಾಂತಲಿಂಗ ದೇಶೀ ಕೇಂದ್ರ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಇಂದು ನಡೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಶ್ರೀಗಳು, ಮಠದ ಸದ್ಭಕ್ತನಾಗಿ ಹೊರಾಟದ ಬದುಕಿನಲ್ಲಿ ಬೆಳೆದ ಕಬ್ಬಳ್ಳಿ ಬಸವರಾಜ್ ಹಣದಲ್ಲಿ ಶ್ರೀಮಂತಿಕೆ ಗಳಿಸದೇ, ಪರೋಪಕಾರಿಯಾಗಿ ಜನರ ಮನಸ್ಸು ಗೆಲ್ಲುವ ಮೂಲಕ ಗುಣದಲ್ಲಿ ಶ್ರೀಮಂತನಾಗಿದ್ದುಕೊಂಡು ಸಂಘಟನೆ ಹೋರಾಟಗಾರರ ಬಳಗದೊಡನೆ ಸಕ್ರಿಯವಾಗಿ ಪಾಲ್ಗೊಂಡು, ಅನ್ಯಾಯ, ಶೋಷಣೆ ವಿರೋಧಿಸುತ್ತಿದ್ದರು. ಮೂಲ ಸೌಕರ್ಯಗಳ ಸಮರ್ಪಕ ಜಾರಿಗಾಗಿ ಜನ ಪ್ರತಿನಿಧಿಗಳನ್ನು ಎಚ್ಚರಿಸುತ್ತಿದ್ದರು ಎಂದರು.



ಮಾಜಿ ಶಾಸಕ ಎಚ್.ಪಿ. ರಾಜೇಶ್ ಮಾತನಾಡಿ, ಬಸವರಾಜ್ ಅವರ ಜಾತ್ಯತೀತ, ನಿಸ್ವಾರ್ಥ ಭಾವನೆ ಸಮಾಜಕ್ಕೆ ಆದರ್ಶವಾಗಲಿ ಎಂದು ಹೇಳಿದರು.

ವಾಲ್ಮೀಕಿ ನಾಯಕ ಸಮಾಜದ ತಾಲ್ಲೂಕು ಅಧ್ಯಕ್ಷ ಅರಸೀಕೆರೆಯ ವೈ.ಡಿ. ಅಣ್ಣಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಕಾಂಗ್ರೆಸ್ ಎಸ್.ಟಿ. ಘಟಕದ ರಾಜ್ಯ ಅಧ್ಯಕ್ಷ ಕೆ.ಪಿ. ಪಾಲಯ್ಯ ಮಾತನಾಡಿ, ದಿ. ಬಸವರಾಜ್ ಅವರು ಪ್ರಗತಿಪರ ಚಿಂತನೆ, ಹೋರಾಟ ಮನೋಭಾವ ಮೈಗೂಡಿಸಿಕೊಂಡು ಶೋಷಿತ, ದಮನಿತರ ಧ್ವನಿಯಾಗಿದ್ದರು ಎಂದರು.

ಪ್ರಗತಿಪರ ಚಿಂತಕ ಕೋಡಿಹಳ್ಳಿ ಭೀಮಪ್ಪ ಮಾತನಾಡಿ, 371ಜೆ ಜಾರಿಗಾಗಿ ನಡೆದ ಜನಪರ ಹೋರಾಟದ ಯಶಸ್ವಿಗೆ, ಗರ್ಭಗುಡಿ ಬ್ರಿಡ್ಜ್ ಕಂ ಬ್ಯಾರೇಜ್ ನೀರಾವರಿ ಹೋರಾಟದಲ್ಲಿ ಬಸವರಾಜ್ ಅವರು ಭಾಗವಹಿಸಿದ್ದನ್ನು ಸ್ಮರಿಸಿದರು.

ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಕೆ.ಉಚ್ಚೆಂಗೆಪ್ಪ ಮಾತನಾಡಿ, ಪ್ರಗತಿಪರ ಚಿಂತನೆ ಮೂಲಕ ಬದುಕು ಸವೆಸಿದ ಸ್ನೇಹಮಯಿ. ಭ್ರಷ್ಟಾಚಾರ, ಜಾತೀಯತೆಯ ವಿರೋಧವಾಗಿ ಹಲವಾರು ಹೋರಾಟಗಳಲ್ಲಿ ಮುಂಚೂಣಿ ನಾಯಕತ್ವ ವಹಿಸಿ ಗೆಲುವು ಕಂಡವರು ಎಂದರು.

ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಜೆ.ಹನುಮಂತಪ್ಪ, ಪ್ರಶಾಂತ ಪಾಟೀಲ್, ಹೊಸಹಳ್ಳಿ ಮಲ್ಲೇಶ, ಪುರಸಭೆ ಮಾಜಿ ಅಧ್ಯಕ್ಷ ಎಚ್.ಕೆ. ಹಾಲೇಶ, ಅರಸೀಕೆರೆ ಪೂಜಾರ್ ಮರಿಯಪ್ಪ, ಕೆರೆಗುಡಿಹಳ್ಳಿ ಹಾಲೇಶ, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಮೋತಿನಾಯ್ಕ, ಹೊಸಹಳ್ಳಿ ಮಲ್ಲೇಶ, ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಗಿರಿಜ್ಜಿ ನಾಗರಾಜ, ವಕೀಲ ಕೆ.ಡಿ. ಮರಿಯಪ್ಪ, ಅಂಗನವಾಡಿ ಕಾರ್ಯಕರ್ತರ ಸಂಘದ ತಾಲ್ಲೂಕು ಅಧ್ಯಕ್ಷರಾದ ಬಸಮ್ಮ, ಇಪ್ಟಾ ಕಲಾವಿದ ಹೆಗ್ಗೆರೆ ರಂಗಪ್ಪ ಮಾತನಾಡಿದರು.

ಎಡಿಬಿ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಟಿ.ರಾಜಪ್ಪ, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಲಕ್ಕಳ್ಳಿ ಹನುಮಂತಪ್ಪ, ಹೋಸಕೋಟಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಡಿ. ಶ್ರೀನಿವಾಸ, ನಿವೃತ್ತ ಶಿಕ್ಷಕ ಬಾಲೇನಹಳ್ಳಿ ರೇವಣಸಿದ್ದಪ್ಪ, ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಸಿದ್ದಲಿಂಗನಗೌಡ, ಮುಖಂಡ ಕಬ್ಬಳ್ಳಿ ಪರಸಪ್ಪ, ಕಬ್ಬಳ್ಳಿ ಮೈಲಪ್ಪ, ಕಬ್ಬಳ್ಳಿ ಮಂಜಮ್ಮ, ಕಬ್ಬಳ್ಳಿ ಪ್ರಶಾಂತ, ಹಾದಿಮನಿ ನಾಗರಾಜ, ಮೂಗಪ್ಪ, ಯರಬಳ್ಳಿ ವಿಜಯಕುಮಾರ, ಬೂದಿಹಾಳ್ ಮುರುಗೇಶ ಸೇರಿದಂತೆ ಇತರರು ಇದ್ದರು.



# ಹೊನ್ನಾಳಿಯಲ್ಲಿ ಬಂಗಾರಪ್ಪ ಜನ್ಮ ದಿನಾಚರಣೆ

ಹೊನ್ನಾಳಿ, ಅ.27- ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪ ಅವರ 92ನೇ ಜನ್ಮ ದಿನದ ಅಂಗವಾಗಿ ಪಟ್ಟಣದ ಸರ್ಕಾರಿ ಆಸ್ಪತ್ರೆಯ ಒಳರೋಗಿಗಳಿಗೆ ಬ್ರೆಡ್ - ಹಣ್ಣನ್ನು ಕಾಂಗ್ರೆಸ್ ರಾಜ್ಯ ಹಿಂದುಳಿದ ವರ್ಗಗಳ ಸಮಿತಿ ಪ್ರಧಾನ ಕಾರ್ಯದರ್ಶಿ ಪ್ರಶಾಂತ ಬಣ್ಣಜ್ಜಿ ವಿತರಿಸಿದರು. ಯುವ ಕಾಂಗ್ರೆಸ್ ಕಾರ್ಯಕರ್ತರು, ಬಂಗಾರಪ್ಪ ಅಭಿಮಾನಿಗಳು ಉಪಸ್ಥಿತರಿದ್ದರು.



**ಸಂಭ್ರಮದ ಕೇರಳದ ಓಣಂ**

ದಾವಣಗೆರೆ, ಅ.27- ಕೇರಳ ಸಮಾಜಂ (ದಾವಣಗೆರೆ) ವತಿಯಿಂದ ಓಣಂ-2024 ಕಾರ್ಯಕ್ರಮವನ್ನು ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ದೂಡ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಹಾಗೂ ಸಮಾಜದ ಅನೇಕ ಮುಖಂಡರು, ಗಣ್ಯರು ಉಪಸ್ಥಿತರಿದ್ದರು.

## ಜಿಲ್ಲಾ ಪತ್ರಿಕಾ ವಿತರಕರ ಸಂಘದ ಅಧ್ಯಕ್ಷರಾಗಿ ಕುಮಾರಸ್ವಾಮಿ

### ಟಿ. ನಾಗರಾಜ್ ಪ್ರಧಾನ ಕಾರ್ಯದರ್ಶಿ, ಅರುಣ್ ಖಜಾಂಚಿ



ದಾವಣಗೆರೆ, ಅ.27- ಜಿಲ್ಲಾ ಪತ್ರಿಕಾ ವಿತರಕರ ಸರ್ವ ಸದಸ್ಯರ ಸಭೆಯು ನಗರದ ಶ್ರೀ ಶಿವಯೋಗ ಮಂದಿರದ ಆವರಣದಲ್ಲಿ ಇಂದು ನಡೆಯಿತು. ಜಿಲ್ಲಾ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಗೌರವ ಅಧ್ಯಕ್ಷರನ್ನಾಗಿ ಕೆ. ಎನ್. ಕಾಮತ್, ಅಧ್ಯಕ್ಷರನ್ನಾಗಿ ಕುಮಾರಸ್ವಾಮಿ ಟಿ., ಉಪಾಧ್ಯಕ್ಷರನ್ನಾಗಿ ಎ. ಎನ್. ಕೃಷ್ಣ ಸೇರಿದಂತೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಪ್ರಧಾನ ಕಾರ್ಯದರ್ಶಿಯಾಗಿ ನಾಗರಾಜ್ ಟಿ. ಪಿ., ಸಹ ಕಾರ್ಯದರ್ಶಿಯಾಗಿ ನಿಂಗಪ್ಪ ಎ., ಸಂಘಟನಾ ಕಾರ್ಯದರ್ಶಿಯಾಗಿ ಕರಿಬಸವರಾಜ್ ಎಂ. ಬಿ., ಖಜಾಂಚಿ ಅರುಣ್‌ಕುಮಾರ್ ಕೆ., ನಿರ್ದೇಶಕರುಗಳಾಗಿ ರಘುರಾಮ್ ಎಚ್., ರವಿ ಡಿ., ಮಂಜುನಾಥ್ ಎಮ್., ಪ್ರಸನ್ನ ಕುಮಾರ್ ಎನ್., ಶಂಕರ ಆರ್., ಪ್ರಕಾಶ್ ಪಿ., ಸುಧಾಕರ ಆರ್., ಪ್ರದೀಪ್ ಬಿ., ಆಯ್ಕೆಯಾಗಿದ್ದಾರೆ.

## ನ.5ಕ್ಕೆ ದಿವ್ಯಾಂಗರ ವೈದ್ಯಕೀಯ ತಪಾಸಣೆ, ಸಾಧನಾ ಸಲಕರಣೆಗಳ ಮೌಲ್ಯಾಂಕನ ಶಿಬಿರ

ದಾವಣಗೆರೆ, ಅ.27- ಶಾಲಾ ಸಾಕ್ಷರತಾ ಹಾಗೂ ಶಿಕ್ಷಣ ಇಲಾಖೆ ವತಿಯಿಂದ ಬರುವ ನವೆಂಬರ್ 5ರ ಬೆಳಗ್ಗೆ 9.30ಕ್ಕೆ ನಗರದ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನಲ್ಲಿ ಜಿಲ್ಲಾ ಮಟ್ಟದ ವಿಕಲ ಚೇತನ ಮಕ್ಕಳ ವೈದ್ಯಕೀಯ ತಪಾಸಣೆ ಮತ್ತು ಸಾಧನ ಸಲಕರಣೆಗಳ ಮೌಲ್ಯಾಂಕನ ಶಿಬಿರವನ್ನು ಆಯೋಜಿಸಲಾಗಿದೆ. ಶಿಬಿರಕ್ಕೆ ಹರಿಹರ ತಾಲ್ಲೂಕು ವ್ಯಾಪ್ತಿಯ ಸರ್ಕಾರಿ ಹಾಗೂ ಅನುದಾನಿತ ಪ್ರಾಥಮಿಕ, ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 1ರಿಂದ 10ನೇ ತರಗತಿಯ ವಿಕಲ ಚೇತನ ಮಕ್ಕಳನ್ನು ಶಿಬಿರಕ್ಕೆ ಕರೆ ತರುವ ಮೂಲಕ ಶಿಬಿರದ ಸದುಪಯೋಗ ಪಡಿಸಿಕೊಳ್ಳುವಂತೆ ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಕೊಟ್ರೇಶ್ ತಿಳಿಸಿದ್ದಾರೆ.

## ಕೆರೆ ಏರಿಯನ್ನು ದುರಸ್ತಿ ಮಾಡಿದ ಕುರ್ಕಿ ಗ್ರಾಮಸ್ಥರು



ಮಾಯಕೊಂಡ, ಅ.27- ಹಾನಿಗೊಳಗಾದ ಕೆರೆ ಏರಿಯನ್ನು ಸ್ವತಃ ಕುರ್ಕಿ ಗ್ರಾಮಸ್ಥರೇ ದುರಸ್ತಿ ಮಾಡಿ ಕಾಳಜಿ ಮೆರೆದಿದ್ದಾರೆ.

ತಾಲ್ಲೂಕಿನ ಕುರ್ಕಿ ಗ್ರಾಮದ ಕೆರೆ ಏರಿಯಲ್ಲಿ ಬಸಿಯುವಿಕೆಯಿಂದಾಗಿ ನೀರು ಪೋಲಾಗುತ್ತಿತ್ತು. ಮೂರು ವರ್ಷದ ಹಿಂದೆ ಇಲಾಖೆಯ ಎಂಜಿನಿಯರ್‌ಗಳು ದುರಸ್ತಿ ಮಾಡಿದ ಬಳಿಕವೂ ನೀರು ಪೋಲಾಗುವುದು ಸಂಪೂರ್ಣ ನಿಂತಿರಲಿಲ್ಲ.

ಇದನ್ನು ಗಮನಿಸಿದ ಗ್ರಾಮಸ್ಥರೇ ಕೆರೆಯ ಏರಿಯಲ್ಲಿ ಬೋನು ಬಿದ್ದ, ಜಾಗವನ್ನು ಪತ್ತೆಹಚ್ಚಿದರು. ಎಂಜಿನಿಯರ್, ಅಧಿಕಾರಿಗಳ ನೆರವು ಕಾಯದೇ ಕಪ್ಪುಮಣ್ಣು, ಗ್ರಾವೆಲ್ ಭರ್ತಿ ಮಾಡಿ ಏರಿ ದುರಸ್ತಿ ಮಾಡಿದ್ದಾರೆ. ಈಗ ನೀರು ಬಸಿಯುವುದು ಪೂರ್ಣ ನಿಂತಿದೆ.

ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಬಿ.ಜಿ. ನಂದ್ಯಪ್ಪ, ಗ್ರಾ. ಪಂ. ಮಾಜಿ ಸದಸ್ಯ ವೀರೇಂದ್ರಚಾರಿ, ರಮೇಶ, ರವೀಂದ್ರ, ಅಜ್ಜಯ್ಯ, ಮಂಜುನಾಥ, ನಾಗರಾಜ, ಕಲ್ಲಳ್ಳಿ ವೀರಣ್ಣ, ವಿಜಯಕುಮಾರ್, ಸಿದ್ದಯ್ಯ, ಜಿ.ಡಿ. ರಂಗಪ್ಪ, ಕಲ್ಲಳ್ಳಿ ಆನಂದ್ ಮತ್ತು ಗ್ರಾಮಸ್ಥರು ಇದ್ದರು.

## ಬ್ಯಾಡಗಿಯಲ್ಲಿ ಕೊಪ್ಪಳ ಶ್ರೀಗಳ ಪ್ರವಚನ



ರಾಣೇಬೆನ್ನೂರು, ಅ.27- ತಾಲ್ಲೂಕಿನ ಬ್ಯಾಡಗಿ ಎಸ್.ಜೆ.ಜೆ.ಎಂ ಕಾಲೇಜು ಕ್ರೀಡಾಂಗಣದಲ್ಲಿ ಬರುವ ನವೆಂಬರ್ 13 ರಿಂದ 24 ರವರೆಗೆ 12 ದಿನಗಳ ಕಾಲ ಪ್ರತಿದಿನ ಸಂಜೆ 6 ರಿಂದ 7 ರವರೆಗೆ ಕೊಪ್ಪಳ ಗವಿಸಿದ್ದೇಶ್ವರ ಮಠದ ಶ್ರೀ ಗವಿಸಿದ್ದೇಶ್ವರ ಸ್ವಾಮೀಜಿಯವರಿಂದ ಪ್ರವಚನ ನಡೆಯಲಿದೆ.

## ಪಿಂಚಣಿದಾರರಿಗೆ ಮನೆಯಿಂದಲೇ ಡಿಜಿಟಲ್ ಜೀವನ ಪ್ರಮಾಣ ಪತ್ರ

ದಾವಣಗೆರೆ,ಅ.25- ಭಾರತೀಯ ಅಂಚೆ ಇಲಾಖೆ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್‌ಗಳ ಮೂಲಕ ಮನೆ ಬಾಗಿಲಿನಲ್ಲೇ ಪಿಂಚಣಿದಾರರು ಸುಲಭವಾಗಿ ಡಿಜಿಟಲ್ ಜೀವನ ಪ್ರಮಾಣ ಪತ್ರವನ್ನು ಸಲ್ಲಿಸಲು ವ್ಯವಸ್ಥೆ ಕಲ್ಪಿಸಲಾಗಿದೆ.

ಪಿಂಚಣಿದಾರರು ಅಥವಾ ಕುಟುಂಬದ ಪಿಂಚಣಿದಾರರು ತಮ್ಮ ಹತ್ತಿರದ ಅಂಚೆ ಕಚೇರಿಯಲ್ಲಿ ಅಥವಾ ಪೋಸ್ಟ್ ಮ್ಯಾನ್ ಮೂಲಕ ರೂ. 70 ಶುಲ್ಕ ನೀಡುವುದರೊಂದಿಗೆ ಕೆಲವೇ ನಿಮಿಷಗಳಲ್ಲಿ ಆಧಾರ್ ಸಂಖ್ಯೆ, ಮೊಬೈಲ್ ಸಂಖ್ಯೆ, ಪಿಪಿಒ ಸಂಖ್ಯೆ ಮತ್ತು ಪಿಂಚಣಿದಾರರ ಬ್ಯಾಂಕ್ ಖಾತೆಯ ವಿವರಗಳೊಂದಿಗೆ ತಮ್ಮ ಬೆರಳಚ್ಚು ಪರಿಶೀಲಿಸಿ ಡಿಜಿಟಲ್ ಜೀವನ ಪ್ರಮಾಣ ಪತ್ರವನ್ನು ನ. 30ರೊಳಗಾಗಿ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ www.ippbonline.com ಮತ್ತು marketing@ippbonline.in ಸಂಪರ್ಕಿಸಲು ಅಂಚೆ ಅಧೀಕ್ಷಕರು ತಿಳಿಸಿದ್ದಾರೆ.

| ಭದ್ರಾ ಡ್ಯಾಂ | |
|---|---|
| ನೀರಿನ ಮಟ್ಟ : 186 ಅಡಿ. | ಒಳ ಹರಿವು : 3607 ಕ್ಯೂಸೆಕ್ಸ್ |
| ಹೊರ ಹರಿವು : 3607 ಕ್ಯೂಸೆಕ್ಸ್ | ಕಳೆದ ವರ್ಷ : 155' 4 ಅಡಿ |









## ಸವಿನೆನಪು



**ದಿ. ಶ್ರೀ ಹೆಚ್.ವಿ. ಬಸವರಾಜಸ್ವಾಮಿ**

ಜನನ : 29.12.1956 ಮರಣ : 28.10.2016

**ಸರಳ ವ್ಯಕ್ತಿತ್ವ, ಸ್ನೇಹ ಜೀವಿ, ನಿಸ್ವಾರ್ಥ ಸಮಾಜ ಸೇವಕರಾಗಿದ್ದು**

ಇವರು ನಮ್ಮನ್ನಗಲಿ ಇಂದಿಗೆ ಎಂಟು ವರ್ಷಗಳಾದವು.

ಸದಾ ನಿಮ್ಮ ಸ್ಮರಣೆಯಲ್ಲಿರುವ...

ಧರ್ಮಪತ್ನಿ : ಶ್ರೀಮತಿ ವಿಶಾಲ ಬಸವರಾಜಸ್ವಾಮಿ

ಮತ್ತು ಮಕ್ಕಳು,

ಹೊಸಮಠದ ವಂಶಸ್ಥರು,

ಬಂಧು-ಮಿತ್ರರು.






KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas